# ಇಬ್ರಿಯರಿಗೆ

### ಬರಹಗಾರರು

ಯಾರು ಎಂಬದು ಗೊತ್ತಿಲ್ಲ. ಅಪೊಸ್ತಲನಾದ ಪೌಲನು ಈ ಪತ್ರಿಕೆಯನ್ನು ಬರೆದಿದ್ದಾನೆ ಎಂಬದು ಕೆಲವು ವೇದ ಪಂಡಿತರ ನಂಬಿಕೆಯಾಗಿದೆ. ಆದರೆ ಬೇರೆ ಕೆಲವರು ಅಂದರೆ – ಅಪೊಲ್ಲೋಸನು, ಸೀಲನು, ಬಾರ್ನಬನು ಈ ಪತ್ರಿಕೆಯನ್ನು ಬರೆದಿರುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ಗ್ರಂಥಕರ್ತನು ಈ ಪತ್ರಿಕೆಯಲ್ಲಿ ತನ್ನನ್ನು ಪರಿಚಯಪಡಿಸಿಕೊಂಡಿಲ್ಲ ಮತ್ತು ಸತ್ಯವೇದವು ಆತನು ಯಾರು ಎಂಬದನ್ನು ಬೇರೆ ಯಾವ ಸ್ಥಳದಲ್ಲಿಯೂ ಹೇಳಿಲ್ಲ, ಆದ್ದರಿಂದ ಈಗ ಇದನ್ನು ತಿಳಿದುಕೊಳ್ಳಲು ಆಗುವದಿಲ್ಲ ಮತ್ತು ಇದನ್ನು ಯಾರು ಬರೆದಿದ್ದಾರೆಂದು ತಿಳಿದುಕೊಳ್ಳುವ ಅವಶ್ಯಕತೆಯೂ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇವೆ. ಇದನ್ನು ದೈವೀಕ ಪ್ರೇರಣೆಯಿಂದ ಬರೆಯಲಾಗಿದೆ ಮತ್ತು ಇದನ್ನು ಸತ್ಯವೇದದ ಪುಸ್ತಕದಲ್ಲಿ ಸೇರಿಸಲು ದೇವರು ಅನುಮತಿಸಿದ್ದಾನೆ ಎಂಬದನ್ನು ತಿಳಿಯುವದು ಮಾತ್ರವೇ ಸಾಕಾಗಿದೆ.

### ದಿನಾಂಕ:

ರೋಮನ್ ಸೈನ್ಯವು ಯೆರೂಸಲೇಮಿಗೆ ಬಂದು ಆ ಪಟ್ಟಣ ಹಾಗೂ ದೇವಾಲಯವನ್ನು ಹಾಳುಮಾಡಿ ಉಳಿದ ಯೆಹೂದ್ಯರನ್ನು ಸೆರೆಯಾಗಿ ಕರೆದುಕೊಂಡು ಹೋದ ಕ್ರಿ.ಶ. 70 ಕ್ಕೂ ಸ್ವಲ್ಪ ಮುಂಚೆ ಬರೆದಿರಬಹುದು.

### ಧ್ಯೇಯಗಳು:

ಕರ್ತನಾದ ಯೇಸು ಕ್ರಿಸ್ತನು ಮತ್ತು ಆತನು ಮಾಡಿದ ಹೊಸ ಒಡಂಬಡಿಕೆಯ ಮಹತ್ತು. ದೇವರು ಮೋಶೆಯ ಮೂಲಕ ಇಸ್ರಾಯೇಲ್ಯರೊಂದಿಗೆ ಮಾಡಿದ ಒಡಂಬಡಿಕೆಗಿಂತ ಹೊಸ ಒಡಂಬಡಿಕೆಯು ಉತ್ತಮವಾದದ್ದಾಗಿದೆ ಎಂಬದನ್ನು ಗ್ರಂಥಕರ್ತನು ಬಹಳ ಸ್ಪಷ್ಟವಾಗಿ ತೋರಿಸಿದ್ದಾನೆ. ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಕಾರಣ ಹಿಂಸೆಗೆ ಒಳಗಾಗಿದ್ದ ಕೆಲವು ಯೆಹೂದ್ಯ ಕ್ರೈಸ್ತರು, ಯೇಸು ಕ್ರಿಸ್ತನ ಕುರಿತು ತಾವು ಕೇಳಿದ್ದ ಬೋಧನೆಯನ್ನು ತ್ಯಜಿಸುವ ಮತ್ತು ಹಳೆಯ ಮಾರ್ಗಗಳಿಗೆ ಹಿಂದಿರುಗುವ ಶೋಧನೆಯನ್ನು ಎದುರಿಸುತ್ತಾ ಇದ್ದರು. ಆದದರಿಂದ ಗ್ರಂಥಕರ್ತನು ಹೊಸ ಒಡಂಬಡಿಕೆಯ ಮಹತ್ತನ್ನು ತೋರ್ಪಡಿಸುವದು ಮಾತ್ರವಲ್ಲ ಬದಲಾಗಿ ಅದನ್ನು ತ್ಯಜಿಸುವ ಬಗ್ಗೆ ಯೋಚಿಸುತ್ತಿದ್ದವರಿಗೆ 5 ಗಂಭೀರವಾದ ಎಚ್ಚರಿಕೆಗಳನ್ನು ಕೊಟ್ಟಿದ್ದಾನೆ. ಈ ಪತ್ರಿಕೆಯ ಮತ್ತೊಂದು ಪ್ರಾಮುಖ್ಯವಾದ ಧ್ಯೇಯವನ್ನು ಮೊದಲ ಎರಡು ವಚನಗಳಲ್ಲಿ ಮತ್ತು 12:25 ರಲ್ಲಿ ತಿಳಿಸಲಾಗಿದೆ: ದೇವರು

ತನ್ನ ಪ್ರವಾದಿಗಳ ಮೂಲಕ ಮಾತ್ರವಲ್ಲ ಬದಲಾಗಿ, ತನ್ನ ಸ್ವಂತ ಕುಮಾರನ ಮೂಲಕವೂ ಮಾತನಾಡಿದ್ದಾನೆ, ಆದ್ದರಿಂದ ಪ್ರತಿಯೊಬ್ಬರೂ ಅದಕ್ಕೆ ಕಿವಿಗೊಡಬೇಕು ಮತ್ತು ಅವುಗಳಿಗೆ ವಿಧೇಯರಾಗಬೇಕು. ಈ ಪತ್ರಿಕೆಯಲ್ಲಿರುವ ಎರಡು ಪ್ರಾಮುಖ್ಯವಾದ ಪದಗಳು ಯಾವುವೆಂದರೆ "ಉತ್ತಮ/ಶ್ರೇಷ್ಠ" (1:4; 7:19,22; 8:6; 9:23; 10:34; 11:16,35,40; 12:24) ಮತ್ತು "ನಂಬಿಕೆ". ನಂಬಿಕೆಯ ವಿಷಯದಲ್ಲಿ ಬರೆಯಲಾಗಿರುವ ಸತ್ಯವೇದದ ಮಹಾ ಅಧ್ಯಾಯವು ಈ ಪತ್ರಿಕೆಯಲ್ಲಿದೆ (ಅಧ್ಯಾಯ 11).

# 1 1

**1:1** *"ವಿಧವಿಧವಾಗಿ"*– ಆದಿ 15:1,12; 18:1,10; 28:12-15; ವಿಮೋ 3:1-4; 19:20; 25:22; 33:11; 34:5-7; ಯೆಹೋ 5:13-15; 2 ಸಮು 23:1-3; 1 ಅರಸು 19:11-13; ಯೆಶಾಯ 6:1-8; ಯೆರೆ 1:4,9,10; ಯೆಹೆಜ್ಕೇಲ 2:1-2; ದಾನಿ 8:15-18; 9:20-22.

*"ದೇವರು . . . ಮಾತನಾಡಿದ್ದಾನೆ"*– ಇದು ಈ ಪತ್ರಿಕೆಯಲ್ಲಿ ಮಹತ್ವದ ಧ್ಯೇಯಗಳಲ್ಲಿ ಒಂದಾಗಿದೆ. ದೇವರು ಮಾತನಾಡಿರುವದನ್ನು ಹಳೆಯ ಒಡಂಬಡಿಕೆಯಲ್ಲಿ ದಾಖಲಿಸಲಾಗಿದೆ. ಮತ್ತಾಯ 4:4; 2 ಪೇತ್ರ 1:21; 2 ತಿಮೊ 3:16. ಈ ಪತ್ರಿಕೆಯಲ್ಲಿ ಮುಂದಿನ ವಾಕ್ಯಗಳನ್ನು ಹೇಗೆ ಪರಿಚಯಪಡಿಸಲಾಗಿದೆ ಎಂಬದನ್ನು ನೋಡಿರಿ: ಅವು ದೇವರು ಮಾತನಾಡುವದನ್ನು ಪ್ರಕಟಿಸುತ್ತವೆ – 1:6-7,8,10; 2:11-13; 3:7; 4:3; 5:5-6; 6:13-14; 7:21; 8:8; 10:5,15-17; 12:25-26; 13:5.

*"ಪಿತೃಗಳು"*– ಇಬ್ರಿಯರ ಮೂಲಪಿತೃಗಳು.

*"ಪ್ರವಾದಿಗಳು"*– ಹಳೆಯ ಒಡಂಬಡಿಕೆಯಲ್ಲಿ ದೇವರು ಪ್ರೇರೇಪಿಸಿ ತನ್ನ ಸಂದೇಶಗಳನ್ನು ತಿಳಿಸುವಂತೆ ಕಳುಹಿಸಿದ ಜನರು. ಆದಿ 20:7 ರ ನೋಟ್ಸ್ ನೋಡಿರಿ. ಒಬ್ಬನೇ ನಿಜವಾದ ದೇವರು ಪ್ರವಾದಿಗಳ ಮೂಲಕ ಮಾತನಾಡುತ್ತಿದ್ದರಿಂದ, ಆತನ ಚಿತ್ತ ಹಾಗೂ ಮಾರ್ಗಗಳ ಬಗ್ಗೆ ತಿಳುವಳಿಕೆಯನ್ನು ಹೊಂದಲು ಹಳೆಯ ಒಡಂಬಡಿಕೆಯ ಅಧ್ಯಯನವು ಖಂಡಿತವಾಗಿಯೂ ಅತ್ಯಂತ ಪ್ರಾಮುಖ್ಯವಾಗಿತ್ತು. **2**

**1:2** ವಚನ 1 ಮತ್ತು 2 ಇಬ್ರಿಯ ಪತ್ರಿಕೆಯಲ್ಲಿರುವ ಹಲವಾರು ಹೊಂದಾಣಿಕೆಗಳಲ್ಲಿ ಮೊದಲನೆಯ ಹೊಂದಾಣಿಕೆಯನ್ನು ತಿಳಿಸುತ್ತದೆ.

*"ಆತನ ಮಗನು"*– ಯೋಹಾನ 7:16-17; 8:28; 12:49-50; 17:8 ನೋಡಿರಿ. ಧರ್ಮೋ 18:18-19ರಲ್ಲಿ ಹೇಳಲಾಗಿರುವ ಕಡೆಯ ಮಹಾನ್ ಪ್ರವಾದಿ ಯೇಸು ಕ್ರಿಸ್ತನೇ ಆಗಿದ್ದಾನೆ. 2-4 ವಚನಗಳಲ್ಲಿ ಈ ಪತ್ರಿಕೆಯ ಬರಹಗಾರನು ದೇವಕುಮಾರನಾಗಿರುವ ಯೇಸು ಕ್ರಿಸ್ತನ ಕುರಿತು ಒಂಭತ್ತು ಪ್ರಾಮುಖ್ಯವಾದ ವಿಷಯಗಳನ್ನು ಹೇಳಿದ್ದಾನೆ.

*"ಬಾಧ್ಯನು"*– ದೇವಕುಮಾರನು ಯಾರು ಮತ್ತು ಆತನು ಪ್ರವಾದಿಗಳಿಗಿಂತ ಎಷ್ಟು

ಶ್ರೇಷ್ಠನು ಎಂಬದನ್ನು ಹೇಳುವ ಮೂಲಕ ಬರಹಗಾರನು ಪ್ರಾರಂಭಿಸುತ್ತಾ ಇದ್ದಾನೆ. ಬಾಧ್ಯನು ಅಂದರೆ ತನಗೆ ಸೇರಬೇಕಾಗಿರುವದನ್ನು ಪಡೆದುಕೊಳ್ಳಲು ಬರುವಾತನು.

*“ಜಗತ್ತನ್ನು ಉಂಟುಮಾಡಿದನು”*– ವ 10; ಆದಿ 1:1; ಯೋಹಾನ 1:1-3; 1 ಕೊರಿಂಥ 8:6; ಕೊಲೊ 1:16. ಜಗತ್ತು ಉಂಟಾಗುವದಕ್ಕಿಂತ ಮುಂಚಿತವಾಗಿಯೇ ಆತನ ಮಗನು ಅಸ್ತಿತ್ವದಲ್ಲಿದ್ದನು – ಭೂಲೋಕದಲ್ಲಿ ಜನಿಸುವ ಮೂಲಕ ಆತನು ದೇವಕುಮಾರನಾಗಲಿಲ್ಲ (ಯೋಹಾನ 17:5; ಕೊಲೊ 1:17). ಮತ್ತಾಯ 3:16-17; 11:27; ಯೋಹಾನ 3:16; 5:18-23 ರಲ್ಲಿ “ಮಗನ” ಕುರಿತಾದ ನೋಟ್ಸ್ ನೋಡಿರಿ. **3**

**1:3** *“ದೇವರ ಪ್ರಭಾವ”*– ಇದರ ಅರ್ಥ ದೈವೀಕ ಸ್ವಭಾವ. ದೇವರನ್ನು “ಬೆಳಕು” (1 ಯೋಹಾನ 1:5) ಎಂದು ವಿವರಿಸಬಹುದು. ಯೇಸು ಕ್ರಿಸ್ತನು ಆ ಬೆಳಕಿನ ಪ್ರಕಾಶವಾಗಿದ್ದಾನೆ (ಲೂಕ 1:78-79; 2:29-32; ಯೋಹಾನ 1:4-5,9; 8:12; 2 ಕೊರಿಂಥ 4:6 ರೊಂದಿಗೆ ಹೋಲಿಸಿ ನೋಡಿರಿ). ಸೂರ್ಯನ ಪ್ರಕಾಶವು ಸೂರ್ಯನನ್ನು ಪ್ರಕಟಿಸುತ್ತದೆ ಮತ್ತು ಅದುವೇ ಸೂರ್ಯನ ಸ್ವಭಾವವಾಗಿದೆ. ಇದೇ ಪ್ರಕಾರ ಯೇಸು ಕ್ರಿಸ್ತನು ದೇವರನ್ನು ಪ್ರಕಟಿಸುತ್ತಾನೆ ಮತ್ತು ದೇವರ ಸ್ವಭಾವವುಳ್ಳವನಾಗಿದ್ದಾನೆ – ಯೋಹಾನ 1:14,18; 10:30; 14:9; ಇತರೆ ವಚನಭಾಗಗಳು ಫಿಲಿಪ್ಪಿ 2:6; ಲೂಕ 2:11. ದೇವರ ಸ್ವಭಾವವುಳ್ಳವರು ಮಾತ್ರವೇ ದೇವರ ಪ್ರಭಾವದ ಪ್ರಕಾಶವಾಗಿರಲು ಸಾಧ್ಯ. ಆತನು “ಬೆಳಕಿನ ಬೆಳಕು”.

*“ಆತನ ತತ್ವದ ಮೂರ್ತಿ”*– 2 ಕೊರಿಂಥ 4:4; ಕೊಲೊ 1:15 ರೊಂದಿಗೆ ಹೋಲಿಸಿ ನೋಡಿರಿ. “ತತ್ವ” ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದದ ಅರ್ಥ “ನಿಜವಾದ ಸ್ವಭಾವ” ಎಂಬದಾಗಿದೆ. ದೇವರು ತನ್ನ ಶಾಶ್ವತವಾದ ಆತ್ಮಿಕ ಅವಸ್ಥೆಯಲ್ಲಿ “ಅಗಮ್ಯವಾದ ಬೆಳಕಿನಲ್ಲಿ” ವಾಸಿಸುತ್ತಾನೆ ಮತ್ತು ಅದೃಶ್ಯನಾಗಿದ್ದಾನೆ (1 ತಿಮೊ 6:16; ಯೋಹಾನ 1:18). ಆತನು ಯೇಸು ಕ್ರಿಸ್ತನಾಗಿ ಸಾದೃಶ್ಯನಾದನು. ದೇವರ ಸ್ವಭಾವ ಮತ್ತು ಗುಣಲಕ್ಷಣಗಳು ಪೂರ್ತಿಯಾಗಿ ಯೇಸು ಕ್ರಿಸ್ತನಲ್ಲಿ ಕಾಣಿಸುತ್ತವೆ (ಕೊಲೊ 2:9 ). ಯೇಸು ಕ್ರಿಸ್ತನು ನಿಖರವಾಗಿ ದೇವರು ಇರುವಂತೆಯೇ ತನ್ನ ಸ್ವಂತ ವ್ಯಕ್ತಿತ್ವದಲ್ಲಿ ಪ್ರಕಟಿಸಿಕೊಳ್ಳುತ್ತಾನೆ. ಇದನ್ನು ಸಹ, ಯಾರು ದೇವರ ಸ್ವಭಾವದಲ್ಲಿ ಪಾಲುಗಾರರಾಗಿರುತ್ತಾರೋ ಅವರ ವಿಷಯದಲ್ಲಿ ಮಾತ್ರವೇ ಹೇಳಲು ಆಗುತ್ತದೆ. ಹೆಚ್ಚಿನ ಮಾಹಿತಿಗಳಿಗಾಗಿ ಫಿಲಿಪ್ಪಿ 2:6 ನೋಡಿರಿ.

*“ತನ್ನ ಶಕ್ತಿಯ ವಾಕ್ಯದಿಂದ”*– ಕೊಲೊ 1:17 ರೊಂದಿಗೆ ಹೋಲಿಸಿ ನೋಡಿರಿ. ಆತನ ವಾಕ್ಯವು ಆತನ ಚಿತ್ತವನ್ನು ತಿಳಿಸುತ್ತದೆ – ಆತನು ಏನು ಹೇಳುತ್ತಾನೋ ಅದು ನೆರವೇರುತ್ತದೆ. ಲೋಕವು ತನ್ನ ನಕ್ಷತ್ರಮಂಡಲಗಳು, ಗ್ರಹಗಳು, ನಕ್ಷತ್ರಗಳು, ಸೂರ್ಯ ಒಟ್ಟಾಗಿ ಕಾರ್ಯಮಾಡುತ್ತವೆ ಮತ್ತು ಯೇಸು ಕ್ರಿಸ್ತನ ಶಕ್ತಿಯ ಮೂಲಕ ಅವು ನಾಶವಾಗದೆ ಉಳಿದಿವೆ. ಆತನ ಮೂಲಕವಾಗಿ, ಆತನು ಯಾವ ಉದ್ದೇಶದಿಂದ ಅದನ್ನು ಇರಿಸಿದ್ದಾನೋ ಆ

ಕಾರ್ಯವನ್ನು ಅವು ಮಾಡುತ್ತವೆ. ಇದರಲ್ಲಿಯೂ ಯೇಸು ಕ್ರಿಸ್ತನು ದೇವರ ಸ್ವಭಾವದಲ್ಲಿ ಪಾಲುಗಾರನಾಗಿರುವದನ್ನು ನಾವು ನೋಡುತ್ತೇವೆ. ಇಡೀ ಲೋಕವನ್ನು ಒಟ್ಟಾಗಿ ಕಾಯುವ ಶಕ್ತಿ ದೇವರಲ್ಲದೆ ಬೇರೆ ಯಾರಿಂದ ಸಾಧ್ಯ? "ನಮ್ಮ ಪಾಪಗಳನ್ನು ಶುದ್ಧೀಕರಿಸಿದ್ದಾನೆ" – ಇದರ ಅರ್ಥ ಯೇಸು ಕ್ರಿಸ್ತನು ಶಿಲುಬೆಯ ಮೇಲೆ ತನ್ನನ್ನೇ ಯಜ್ಞವಾಗಿ ಅರ್ಪಿಸಿಕೊಳ್ಳುವ ಮೂಲಕ, ಮಾನವರು ತಮ್ಮ ಪಾಪಗಳಿಂದ ಶುದ್ಧರಾಗಲು ಮಾರ್ಗವನ್ನು ಏರ್ಪಡಿಸಿದ್ದಾನೆ (7:27; 9:26; ಮತ್ತಾಯ 26:28; 10:10; 1 ಯೋಹಾನ 1:7; ಯೋಹಾನ 1:29; ಪ್ರಕ 1:5). ಇದನ್ನು ಆತನು "ತಾನಾಗಿಯೇ" ಮಾಡಿದನು. ದೈವೀಕವಾದ ಈ ಕಾರ್ಯವನ್ನು ಮಾಡುವಲ್ಲಿ ಯಾವ ಮಾನವನ ಕೊಡುಗೆಯೂ ಇಲ್ಲ.

"*ಆತನು ಆಸನಾರೂಢನಾದನು*"– ವ 13; 2:9; 10:12; ಕೀರ್ತನೆ 110:1; ಮಾರ್ಕ 16:19; ಅಪೊ 2:33; ಪ್ರಕ 3:21. ಶಿಲುಬೆಯ ಮೇಲೆ ಆತನು ಅರ್ಪಿಸಿದ ಯಜ್ಞದ ಮೂಲಕ, ಪಾಪದಿಂದ ಶುದ್ಧೀಕರಣವನ್ನು ಒದಗಿಸುವ ಕಾರ್ಯವು ಪೂರ್ಣವಾಯಿತು ಮತ್ತು ಯೇಸು ಕ್ರಿಸ್ತನು ಇಡೀ ಲೋಕದಲ್ಲಿಯೇ ಅಧಿಕಾರ ಮತ್ತು ಪ್ರಭಾವವಿರುವ ಉನ್ನತ ಸ್ಥಾನದಲ್ಲಿ ಆಸನಾರೂಢನಾದನು. **4**

**1:4** ಯೇಸು ಕ್ರಿಸ್ತನು ಪ್ರವಾದಿಗಳಿಗಿಂತ ಶ್ರೇಷ್ಠನಾಗಿದ್ದಾನೆ (ವ 1,2) ಎಂಬದನ್ನು ತೋರಿಸುವದರೊಂದಿಗೆ, ಬರಹಗಾರನು ಆತನು ದೇವದೂತರಿಗಿಂತಲೂ ಶ್ರೇಷ್ಠನಾಗಿದ್ದಾನೆ ಎಂಬದನ್ನೂ ತೋರಿಸಿದ್ದಾನೆ. ಆದಿ 16:7 ರಲ್ಲಿ ದೇವದೂತರ ಕುರಿತಾದ ನೋಟ್ಸ್ ನೋಡಿರಿ.

"*ಮಾಡಲ್ಪಟ್ಟನು*"– ಗ್ರೀಕ್ ಪದದ ಅರ್ಥ "ಹಾಗೆ ಮಾಡಲ್ಪಡಬೇಕಾಯಿತು" ಎಂಬದಾಗಿದೆ. ಆತನು ಭೂಲೋಕಕ್ಕೆ ಬರುವದಕ್ಕಿಂತ ಮುಂಚೆ ದೇವದೂತರಿಗಿಂತ ಶ್ರೇಷ್ಠನಾಗಿದ್ದನು. ಆದರೆ ಭೂಲೋಕದಲ್ಲಿ ಮಾನವನಾಗಿ ಆತನು "ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿದ್ದನು" (2:9). ಆತನು ತನ್ನ ಪುನರುತ್ಥಾನದ ನಂತರ, ದೇವದೂತರಿಗಿಂತ ಉನ್ನತ ಸ್ಥಾನಕ್ಕೆ ಏರಿಹೋದನು.

"*ಶ್ರೇಷ್ಠವಾದ ನಾಮ*"– ಮುಂದಿನ ವಾಕ್ಯದ ಆಧಾರದಲ್ಲಿ ನೋಡುವದಾದರೆ "ಮಗನು" ಎಂಬದೇ ಶ್ರೇಷ್ಠವಾದ ನಾಮವಾಗಿದೆ. ಇಲ್ಲಿ "ಮಗನು" ಎಂದರೆ ದೇವರ ಸ್ವಭಾವದಲ್ಲಿ ಪಾಲುಗಾರನಾಗಿರುವವನು ಮತ್ತು ಇಡೀ ಲೋಕದ ಕರ್ತನಾಗಿ ಆರಾಧನೆಗೆ ಯೋಗ್ಯನಾಗಿರುವಾತನು (ವ 6,8,10). ಫಿಲಿಪ್ಪಿ 2:9-11 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನು ಈ ಲೋಕದೊಳಗೆ ದೇವದೂತರಿಗಿಂತ ಕಡಿಮೆ ಸ್ಥಾನದಲ್ಲಿ ಜನಿಸಿದನು, ಜಗತ್ತು ಉತ್ಪತ್ತಿಯಾಗುವದಕ್ಕು ಮೊದಲೇ ದೇವಕುಮಾರನಿಗೆ ಸೇರಿದ ಈ ಹೆಸರನ್ನು "ಬಾಧ್ಯವಾಗಿ" ಹೊಂದಿದನು. ಯೇಸು ಕ್ರಿಸ್ತನು ಯಾರು ಎಂಬ ಸರಿಯಾದ ತಿಳುವಳಿಕೆಗೆ ಕೆಲವು "ಇಬ್ರಿಯರಿಗೆ" ಇರಲಿಲ್ಲ ಎಂಬದು ಸತ್ಯವಾಗಿದೆ. ಕೆಲವರು ಆತನು ದೇವದೂತರಲ್ಲಿ ಒಬ್ಬನು ಅಥವಾ ದೇವರಿಗೆ ದೂತರು ಇದ್ದರಿಂದ ಆತನನ್ನು ವ್ಯಕ್ತಿಯಾಗಿ ಉಂಟುಮಾಡಿದ್ದಾನೆ

ಎಂಬದಾಗಿ ಅಂದುಕೊಂಡಿದ್ದರು. ಈ ಅಧ್ಯಾಯವು ಅಂಥ ತಪ್ಪು ಅಭಿಪ್ರಾಯಗಳನ್ನು ತಿಳಿಯಪಡಿಸುತ್ತದೆ. ಆದರೆ ಯೇಸು ಕ್ರಿಸ್ತನು ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ ಎಂಬದನ್ನು ತೋರಿಸುವ ಮೂಲಕ ಬರಹಗಾರನು ಖಂಡಿತವಾಗಿಯೂ ಮುಖ್ಯವಾಗಿರುವ ಈ ಅಂಶದ ಕಡೆಗೆ ಗಮನಹರಿಸುವಂತೆ ಮಾಡಿದ್ದಾನೆ: ಯೇಸು ಕ್ರಿಸ್ತನು ಸ್ಥಾಪಿಸಿದ ಹೊಸ ಒಡಂಬಡಿಕೆಯು ಧರ್ಮಶಾಸ್ತ್ರದನುಸಾರವಾಗಿದ್ದ ಹಳೆಯ ಒಡಂಬಡಿಕೆಗಿಂತ ಶ್ರೇಷ್ಠವಾಗಿದೆ. ಹಳೆಯ ಒಡಂಬಡಿಕೆಯನ್ನು ದೇವದೂತರ ಮೂಲಕವಾಗಿ ಕೊಡಲಾಗಿತ್ತು – 2:2. **5**

**1:5** ಕೀರ್ತನೆ 2:7; 2 ಸಮು 7:14 ನೋಡಿರಿ. ಯಾವ ದೇವದೂತನು "ದೇವಕುಮಾರನು" ಎಂಬ ಶೀರ್ಷಿಕೆಯನ್ನು ತನಗೆ ತೆಗೆದುಕೊಳ್ಳಲು ಆಗುವದಿಲ್ಲ (ಯೋಹಾನ 3:16 ರ ನೋಟ್ಸ್ ನೋಡಿರಿ). 2 ಸಮು 7:14 ರಲ್ಲಿ ದೇವರು ಮೊದಲನೆಯದಾಗಿ ದಾವೀದನ ಮಗನಾದ ಸೊಲೊಮೋನನ ಬಗ್ಗೆ ಮಾತನಾಡುತ್ತಾ ಇದ್ದಾನೆ. ಆದರೆ ಸೊಲೊಮೋನನಿಗಿಂತ ಹೆಚ್ಚಿನವನು ಬರುವನು ಅವನು ದಾವೀದ ಕುಮಾರನು ಹಾಗೂ ದೇವಕುಮಾರನಾಗಿರುವನು ಎಂಬದನ್ನು ಬಲ್ಲವನಾಗಿದ್ದನು (ರೋಮಾ 1:3-4; ಯೆಶಾಯ 9:6). **6**

**1:6** "*ಚೊಚ್ಚಲ ಮಗನು*"– ಗ್ರೀಕ್ ಭಾಷೆಯಲ್ಲಿ ಈ ಪದವು ಮುಂಚಿತವಾಗಿಯೇ ಇದ್ದವನು ಎಂಬದನ್ನು ಸೂಚಿಸುತ್ತದೆ. ತಂದೆಯಾದ ದೇವರನ್ನು, ಜಗತ್ತಿನಲ್ಲಿ ಮೊದಲು ಇದ್ದವನು ಎಂಬ ಅರ್ಥವನ್ನು ಕೊಡುವ "ಚೊಚ್ಚಲ ಮಗನು" ಎಂಬದಾಗಿ ಕರೆಯುವದೂ ತಪ್ಪಾಗಿರಲಾರದು. ಕೊಲೊ 1:15 ರ ನೋಟ್ ನೋಡಿರಿ. ಈ ಪದವು ಯಾವುದೇ ರೀತಿಯ ಅಕ್ಷರಾರ್ಥ ಜನನವನ್ನು ಸೂಚಿಸುವ ಅವಶ್ಯಕತೆಯಿಲ್ಲ. (ಕೀರ್ತನೆ 89:27 ನೋಡಿರಿ – "ಜ್ಯೇಷ್ಠಪುತ್ರನನ್ನು ನೇಮಕಮಾಡುವೆನು").

"*ಆತನಿಗೆ ಅಡ್ಡಬೀಳಲಿ*"– ಈ ಪದಗಳು ಇಬ್ರಿಯ ಹಳೆಯ ಒಡಂಬಡಿಕೆಯ (ಸೆಪ್ಟ್ಯುಜೆಂಟ್) ಧರ್ಮೋ 32:43 ರ ಗ್ರೀಕ್ ಭಾಷಾಂತರದಲ್ಲಿ ಬರೆಯಲ್ಪಟ್ಟಿವೆ. ಇಲ್ಲಿ ಪವಿತ್ರಾತ್ಮನು ತನ್ನ ಸಮ್ಮತಿಯ ಮುದ್ರೆಯನ್ನು ಈ ಪದಗಳ ಮೇಲೆ ಹಾಕಿದ್ದಾನೆ. ಹಾಗೆಯೇ ಕೀರ್ತನೆ 97:7 ನೋಡಿರಿ. ದೇವದೂತರು ಯೇಸು ಕ್ರಿಸ್ತನನ್ನು ಆರಾಧಿಸಬೇಕಾಗಿರುವದರಿಂದ ಆತನು ಅವರಿಗಿಂತ ಶ್ರೇಷ್ಠನಾಗಿದ್ದಾನೆ. ಇದಲ್ಲದೆ ಯೇಸು ಕ್ರಿಸ್ತನು ದೇವರ ಸ್ವಭಾವದಲ್ಲಿ ಪಾಲುಗಾರನಾಗಿದ್ದಾನೆ ಎಂಬದೂ ಸ್ಪಷ್ಟವಾಗಿದೆ – ಇಲ್ಲದೆ ಆತನಿಗೆ ಅಡ್ಡಬೀಳುವಂತೆ ದೇವರು ದೇವದೂತರಿಗೆ ಆಜ್ಞಾಪಿಸುತ್ತಾ ಇರಲಿಲ್ಲ. ಸತ್ಯವೇದದಲ್ಲಿ ದೇವರಿಗೆ ಮಾತ್ರವೇ ಆರಾಧನೆ ಮಾಡಬೇಕೆಂದು ಹೇಳಲಾಗಿದೆ (ಮತ್ತಾಯ 4:10 ನೋಡಿರಿ). **7-8**

**1:7-8** ಕೀರ್ತನೆ 104:4; ಕೀರ್ತನೆ 45:6-7 ನೋಡಿರಿ. ಈ ವಚನಗಳು ದೇವದೂತರು ದೇವರಿಂದ ಉಂಟಾದ ಜೀವಿಗಳು ಎಂದು ತಿಳಿಸುತ್ತವೆ. ದೇವಕುಮಾರನು ಸೃಷ್ಟಿಯಾದವನಲ್ಲ ಬದಲಾಗಿ ದೇವರ ಸ್ವಭಾವದಲ್ಲಿ ಪಾಲುಗಾರನಾಗಿದ್ದಾನೆ. 8ನೇ ವಚನದಲ್ಲಿ ತಂದೆಯಾದ ದೇವರು ಮಗನೊಂದಿಗೆ ಮಾತನಾಡುತ್ತಾ ಇದ್ದಾನೆ ಮತ್ತು ಪ್ರವಾದಿಯಾದ ದಾವೀದನ

ಮೂಲಕ ಹೇಳುತ್ತಾ ಇರುವದು ಏನೆಂದರೆ – "ಓ ದೇವರೇ, ನಿನ್ನ ಸಿಂಹಾಸನವು". ಯೇಸು ಕ್ರಿಸ್ತನ ದೈವೀಕತೆಯನ್ನು ನಿರಾಕರಿಸುವವರು ಇದನ್ನು "ದೇವರೇ ನಿನ್ನ ಸಿಂಹಾಸನ" ಎಂದು ಭಾಷಾಂತರ ಮಾಡಲು ಪ್ರಯತ್ನಿಸಿದ್ದಾರೆ. ಇದು ಅಸಂಬದ್ಧ ಭಾಷಾಂತರವಾಗಿದೆ. ಇದು ನಿಜವಾಗಿಯೂ ಯೇಸು ಕ್ರಿಸ್ತನನ್ನು ದೇವರಿಗಿಂತ ಶ್ರೇಷ್ಠನನ್ನಾಗಿ ಮಾಡುತ್ತದೆ – ಯಾಕಂದರೆ ಸಿಂಹಾಸನಕ್ಕಿಂತಲೂ ಸಿಂಹಾಸನದ ಮೇಲೆ ಕೂರುವಾತನು ಶ್ರೇಷ್ಠನಾಗಿದ್ದಾನೆ. ಯೇಸು ಕ್ರಿಸ್ತನ ದೈವೀಕತೆಯ ಕುರಿತು ಹೆಚ್ಚಿನ ವಿಷಯಗಳಿಗಾಗಿ ಫಿಲಿಪ್ಪಿ 2:6 ನೋಡಿರಿ. **9**

**1:9** *"ನಿನ್ನ ದೇವರು"*– ತಂದೆಯಾದ ದೇವರು – ಎಫೆ 1:3. **10**

**1:10** *"ಮತ್ತೊಮ್ಮೆ"* – ಕೀರ್ತನೆ 102:25-27 ನೋಡಿರಿ. ಇಲ್ಲಿ ದೇವರು ಪ್ರವಾದಿಯ ಮೂಲಕ ಮಾತನಾಡುವದರ ಮತ್ತೊಂದು ಉದಾಹರಣೆಯನ್ನು ನಾವು ನೋಡುತ್ತೇವೆ. ಮತ್ತು ಆತನು 10 ನೇ ವಚನದಲ್ಲಿ ಯೇಸು ಕ್ರಿಸ್ತನನ್ನು "ಕರ್ತನೆಂದು" ಮತ್ತು ಯೇಸು ಕ್ರಿಸ್ತನು ಭೂಮ್ಯಾಕಾಶಗಳನ್ನು ಉಂಟುಮಾಡಿದನು ಎಂದು ಹೇಳಿದ್ದಾನೆ. ಯೇಸು ಕ್ರಿಸ್ತನು ದೇವರ ಸ್ವಭಾವದಲ್ಲಿ ಪಾಲುಗಾರನಾಗಿದ್ದಾನೆ ಎಂಬದನ್ನು ಇದು ಮತ್ತೊಂದು ಪುರಾವೆಯಾಗಿದೆ, ಯಾಕಂದರೆ ದೇವರು ಮಾತ್ರವೇ ಸೃಷ್ಟಿಕರ್ತನಾಗಿದ್ದಾನೆ (ಆದಿ 1:1). 11,12 ವಚನಗಳಲ್ಲಿ ಮಗನು ಮಾರ್ಪಡದವನು ಮತ್ತು ಶಾಶ್ವತವಾಗಿರುವಾತನು ಎಂದು ದೇವರು ಹೇಳಿದ್ದಾನೆ. ಈ ಗುಣಗಳು ದೇವರಲ್ಲಿ ಮಾತ್ರವೇ ಇರುವವುಗಳಾಗಿವೆ. ಗಗನಮಂಡಲವನ್ನು "ವಸ್ತ್ರದಂತೆ ಮಡಿಚಲು"(ವ 12) ದೇವರಲ್ಲದೆ ಬೇರೆ ಯಾರಿಂದ ಸಾಧ್ಯ? ಮತ್ತು ಯೇಸು ಕ್ರಿಸ್ತನೂ ಈ ಕಾರ್ಯವನ್ನು ಮಾಡಲು ಶಕ್ತನಾಗಿದ್ದಾನೆ. ಇದಲ್ಲದೆ ಕೀರ್ತನೆ 102 ಯೆಹೋವ ದೇವರಿಗೆ ಮಾಡಲಾಗಿರುವ ಪ್ರಾರ್ಥನೆ ಎಂಬದನ್ನು ನಾವು ಗಮನಿಸಬೇಕು (ಕೀರ್ತನೆ 102:1), ಆದರೆ ಇಲ್ಲಿ ಬರಹಗಾರನು ಅದು ಯೇಸು ಕ್ರಿಸ್ತನಿಗೆ ಮಾಡಲಾಗುವ ಪ್ರಾರ್ಥನೆ ಎಂದು ಹೇಳಿದ್ದಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಯೇಸು ಕ್ರಿಸ್ತನು ಯೆಹೋವನ ಪ್ರತಿರೂಪವಾಗಿದ್ದಾನೆ. ಲೂಕ 2:11 ರಲ್ಲಿ ಇತರೆ ವಿಷಯಗಳನ್ನು ನೋಡಬಹುದು. **13**

**1:13** ಕೀರ್ತನೆ 110:1 ನೋಡಿರಿ. ದೇವರು ತನ್ನ ಮಗನಾಗಿರುವ ಯೇಸು ಕ್ರಿಸ್ತನಿಗೆ ಮಾತ್ರವೇ ಇಡೀ ಲೋಕದಲ್ಲಿ ಉನ್ನತ ಸ್ಥಾನವನ್ನು ಕೊಟ್ಟಿದ್ದಾನೆ. **14**

**1:14** ಯೇಸು ಕ್ರಿಸ್ತನು ಮಾನವರಿಗೆ ಕರ್ತನಾಗಿದ್ದಾನೆ (ವ 10; ರೋಮಾ 14:9; ಫಿಲಿಪ್ಪಿ 2:9-11). ಆದರೆ ರಕ್ಷಣೆಯನ್ನು ಬಾಧ್ಯವಾಗಿ ಹೊಂದಿ, ಯೇಸು ಕ್ರಿಸ್ತನಲ್ಲಿ ವಿಶ್ವಾಸಿಗಳಾಗಿರುತ್ತಾರೋ ಅವರ ಸೇವೆ ಮಾಡಲು ದೇವದೂತರನ್ನು ಕಳುಹಿಸಲಾಗಿದೆ. "ರಕ್ಷಣೆ" ಎಂದರೆ ಇಲ್ಲಿ ಅವರ ರಕ್ಷಣೆಯ ಅಂತಿಮ ಹಂತವಾಗಿದೆ – ರೋಮಾ 8:23,29,30; 1 ಪೇತ್ರ 1:5. ದೇವದೂತರು ನಮಗೆ ಯಾವ ರೀತಿಯ ಸೇವೆ ಮಾಡುತ್ತಾರೆ ಎಂದು ಇಲ್ಲಿ ಹೇಳಲಾಗಿಲ್ಲ. ಆದಿ 16:7 ರಲ್ಲಿ ದೇವದೂತರ ಕುರಿತಾದ ನೋಟ್ಸ್ ನೋಡಿರಿ. ಈ

ಮಾತುಗಳೊಂದಿಗೆ ಬರಹಗಾರನು ತನ್ನ ಮೊದಲ ಮುಖ್ಯ ಅಂಶವನ್ನು ಮುಗಿಸಿದ್ದಾನೆ ಏನೆಂದರೆ – ತನ್ನ ಸ್ವಭಾವದಲ್ಲಿ ಪಾಲುಗಾರನಾಗಿರುವ ಮತ್ತು ಎಲ್ಲಾ ಮಾನವರು ಹಾಗೂ ದೇವದೂತರಿಗಿಂತ ಶ್ರೇಷ್ಠನಾಗಿರುವ ತನ್ನ ಸ್ವಂತ ಮಗನ ಮೂಲಕ ದೇವರು ಮಾತನಾಡಿದ್ದಾನೆ. ದೇವರು ತನ್ನ ಮಗನ ಮೂಲಕ ಕೊಟ್ಟಿರುವ ಪ್ರಕಟನೆಯು ಆತನ ಅಂತಿಮ ಪ್ರಕಟನೆಯಾಗಿದೆ ಎಂಬ ದೃಢತೆ ನಮಗಿರಬೇಕು. ತನ್ನ ಸ್ವಂತ ಮಗನನ್ನು ಕಳುಹಿಸಿ ಆತನ ಮೂಲಕ ಮಾತನಾಡಿದ ನಂತರ, ಆತನು ತನ್ನ ಹಿಂದಿನ ವಿಧಾನಕ್ಕೆ ಯಾಕೆ ಹೋಗಬೇಕು ಮತ್ತು ತನ್ನ ಮಾತುಗಳನ್ನು ತಿಳಿಸುವ ಸಲುವಾಗಿ ಮಾನವರೊಳಗಿಂದ ಪ್ರವಾದಿಯನ್ನು ಯಾಕೆ ಆರಿಸಿಕೊಳ್ಳಬೇಕು?

# 2 1-4

**2:1-4** ಈ ಪತ್ರಿಕೆಯಲ್ಲಿರುವ ಐದು ಗಂಭೀರವಾದ ಎಚ್ಚರಿಕೆಗಳಲ್ಲಿ ಇದು ಮೊದಲನೆಯದಾಗಿದೆ. ಉಳಿದವುಗಳನ್ನು 3:7-19; 6:1-8; 10:26-31; 12:25-29 ರಲ್ಲಿ ನಾವು ನೋಡಬಹುದು. ಸುವಾರ್ತೆಯನ್ನು ಲಘುವಾಗಿ ಪರಿಗಣಿಸುವದು (2:3), ಅಪನಂಬಿಕೆ (3:12,19), ಬಿದ್ದುಹೋಗುವದು (6:6), ಬೇಕೆಂದೇ ಪಾಪ ಮಾಡುವದು (10:26) ಮತ್ತು ದೇವರನ್ನು ಹಾಗೂ ಸತ್ಯದ ವಿಷಯದಲ್ಲಿ ಆತನು ಕೊಟ್ಟಿರುವ ಪ್ರಕಟನೆಯನ್ನು ನಿರಾಕರಿಸುವದು (12:25) ಇವುಗಳ ವಿಷಯದಲ್ಲಿ ಎಚ್ಚರಿಕೆಯನ್ನು ಕೊಡಲಾಗಿದೆ. ಈ ಐದು ವಿಷಯಗಳನ್ನು ಒಂದು ಪದದಲ್ಲಿ ಹೇಳಬಹುದು, ಅದೇನೆಂದರೆ – ಮತಭ್ರಷ್ಟತೆ. ಮತಭ್ರಷ್ಟತೆ ಎಂದರೆ ದೇವರಿಗೆ ವಿರುದ್ಧವಾಗಿ ತಿರುಗಿಬೀಳುವದು ಮತ್ತು ಆತನು ಪ್ರಕಟಿಸಿರುವ ಸತ್ಯವನ್ನು ತಿರಸ್ಕರಿಸುವದು. [1]

**2:1** "*ಆದದರಿಂದ*"– ದೇವರು ತನ್ನ ಅದ್ವಿತೀಯನಾಗಿರುವ ಸ್ವಂತ ಮಗನ ಮೂಲಕ ಮಾತನಾಡಿರುವದರಿಂದ ಆತನು ಹೇಳಿರುವವುಗಳಿಗೆ ನಾವು ವಿಶೇಷವಾಗಿ ಲಕ್ಷ್ಯ ಕೊಡಬೇಕು.

"*ನಾವು ಕೇಳಿದ ಸಂಗತಿಗಳು*"– ಯೇಸು ಕ್ರಿಸ್ತನ ಸುವಾರ್ತೆ.

"*ತಪ್ಪಿ ಹೋಗಬಾರದು*"– ದೇವರು ನಮಗೆ ಕೊಟ್ಟಿರುವ ಸತ್ಯದಿಂದ ತಪ್ಪಿಹೋಗಬಾರದು. ತಪ್ಪಿಹೋಗುವದು ಅತ್ಯಂತ ಸುಲಭವಾದ ಕಾರ್ಯಗಳಲ್ಲಿ ಒಂದಾಗಿದೆ. ತಪ್ಪಿಹೋಗಲು ಯಾವ ಪರಿಶ್ರಮ ಹಾಕುವ ಅವಶ್ಯಕತೆಯಿಲ್ಲ, ಬದಲಾಗಿ ಪರಿಶ್ರಮ ಹಾಕದೆ ಇದ್ದರೆ ಸಾಕು. ಲೋಕದಲ್ಲಿರುವ ಅನೇಕ ಪ್ರವಾಹಗಳು ಜನರು ಯೇಸು ಕ್ರಿಸ್ತನ ಮಾರ್ಗದಿಂದ ತಪ್ಪಿಹೋಗುವಂತೆ ಮಾಡುತ್ತವೆ. ಅಂಥ ಪ್ರವಾಹಗಳಿಗೆ ಒಳಗಾಗುವದರಿಂದ ನಾಶನ ಖಂಡಿತ. [2]

**2:2** "*ದೇವದೂತರ ಮೂಲಕ ಹೇಳಲ್ಪಟ್ಟ*"– ಈ ಸಂದೇಶವು ಮೋಶೆಯ ಮೂಲಕ ಸೀನಾಯ್ ಬೆಟ್ಟದ ಮೇಲೆ ಕೊಡಲ್ಪಟ್ಟ ಧರ್ಮಶಾಸ್ತ್ರವಾಗಿದೆ (ವಿಮೋಚನಕಾಂಡ 19 ನೇ

ಅಧ್ಯಾಯ ಇತ್ಯಾದಿ). ಆ ಸಮಯದಲ್ಲಿ ದೇವದೂತರ ಬಗ್ಗೆ ಏನೂ ಹೇಳಲಾಗಿಲ್ಲ, ಧರ್ಮಶಾಸ್ತ್ರವನ್ನು ಕೊಡುವದರಲ್ಲಿ ದೇವರು ದೇವದೂತರನ್ನು ಉಪಯೋಗಿಸಿದನು ಎಂಬದಾಗಿ ಯೆಹೂದ್ಯರು ನಂಬುತ್ತಾ ಇದ್ದರು. ಗಲಾ 3:19 ಇದನ್ನು ದೃಢಪಡಿಸುತ್ತದೆ. ಹಾಗೆಯೇ ಅಪೊ 7:53 ನೋಡಿರಿ.

*"ಸ್ಥಿರ"*– ದೇವದೂತರು ದೇವರ ಧರ್ಮಶಾಸ್ತ್ರವನ್ನು ತಿಳಿಸಿದರು ಮತ್ತು ಅವುಗಳಿಗೆ ವಿಧೇಯರಾಗಬೇಕೆಂದು ಆತನು ಹೇಳಿದ್ದಾನೆ (ವಿಮೋ 19:5; ಯಾಜಕ 18:1-5; ಧರ್ಮೋ 6:1-3; 32:45-47), ಮತ್ತು ಅವಿಧೇಯತೆಯನ್ನು ಶಿಕ್ಷಿಸಿದನು (ಯಾಜಕ 26:14-39; ಧರ್ಮೋ 28:15-68; 2 ಅರಸು 17:7-20). **3**

**2:3** *"ರಕ್ಷಣೆ"*– ದೇವರು ಯೇಸು ಕ್ರಿಸ್ತನ ಮೂಲಕ ಒದಗಿಸಿರುವ ರಕ್ಷಣೆ (ರೋಮಾ 1:16). ಬರಹಗಾರನ ವಿಷಯ ಏನೆಂದರೆ: ದೇವರು ತನ್ನ ಮಗನ ಮೂಲಕ ಕೊಟ್ಟಿರುವ ಪ್ರಕಟನೆ (ಸುವಾರ್ತೆ, ಹೊಸ ಒಡಂಬಡಿಕೆ) ದೇವದೂತರ ಮೂಲಕ ಕೊಟ್ಟಿರುವ ಪ್ರಕಟನೆಗಿಂತ (ಧರ್ಮಶಾಸ್ತ್ರಕ್ಕಿಂತ) ಶ್ರೇಷ್ಠವಾಗಿದೆ. ದೇವರ ಧರ್ಮಶಾಸ್ತ್ರವನ್ನು ನಿರ್ಲಕ್ಷಿಸಿದವರು ತಪ್ಪಿಸಿಕೊಳ್ಳಲಿಲ್ಲ; ಹಾಗೆಯೇ ಯೇಸು ಕ್ರಿಸ್ತನ ಸುವಾರ್ತೆಯನ್ನು ನಿರ್ಲಕ್ಷಿಸುವವರೂ ತಪ್ಪಿಸಿಕೊಳ್ಳಲು ಆಗುವದಿಲ್ಲ. ಸುವಾರ್ತೆಯು ದೇವರ ಪ್ರೀತಿ ಮತ್ತು ಕೃಪೆಯ ಪ್ರಕಟನೆಯಾಗಿದೆ ಹಾಗೂ ಮಾನವರಿಗೆ ರಕ್ಷಣೆಯನ್ನು ಒದಗಿಸುತ್ತದೆ. ಆದರೆ ಇದರ ಅರ್ಥ ಸುವಾರ್ತೆಯನ್ನು ಕೇಳಿಸಿಕೊಳ್ಳುವವರು ಮತ್ತು ಅದನ್ನು ನಿರ್ಲಕ್ಷಿಸುವವರು ಶಿಕ್ಷೆಯಿಂದ ತಪ್ಪಿಸಿಕೊಳ್ಳುವರು ಎಂಬದಾಗಿಯಲ್ಲ. ಬದಲಾಗಿ ಅವರ ಶಿಕ್ಷೆಯು ಹೆಚ್ಚು ದೃಢವಾಗಿರುತ್ತದೆ ಮತ್ತು ಹೆಚ್ಚು ಘೋರವಾಗಿರುತ್ತದೆ ಯಾಕಂದರೆ ಅವರು ನಿರ್ಲಕ್ಷಿಸುವಂಥದ್ದು ಹಿಂದಿನ ಪ್ರಕಟನೆಗಿಂತಲೂ ಶ್ರೇಷ್ಠವಾದ ಪ್ರಕಟನೆಯಾಗಿದೆ. ಈ ರಕ್ಷಣೆಯನ್ನು "ಅತ್ಯಂತ ವಿಶೇಷ" ಎಂದು ಕರೆಯಲಾಗಿದೆ. ಯೇಸು ಕ್ರಿಸ್ತನ ಸುವಾರ್ತೆಯು ವಿಶೇಷವಾಗಿರುವದು ಯಾವ ಕಾರ್ಯಗಳಲ್ಲಿ ಅಂದರೆ: ಅದರ ಗ್ರಂಥಕರ್ತನು – ದೇವರು ತಾನೇ, ಅದರ ದೃಢತೆ – ದೋಷವಿಲ್ಲದ ಅನೇಕ ಪುರಾವೆಗಳಿವೆ (ಅಪೊ 1:3) ಅದರ ವಿಶಿಷ್ಠತೆ – ಸತ್ಯವಾಗಿರುವ ಸುವಾರ್ತೆ ಒಂದು ಮಾತ್ರವೇ ಇದೆ – ಯೋಹಾನ 14:6; ಅಪೊ 4:12 ಅದರ ರಕ್ಷಣೆಯ ಶಕ್ತಿ – 7:25; ರೋಮಾ 1:16 ಅದರ ಪ್ರೀತಿ ಮತ್ತು ಕೃಪೆಯ ಪ್ರಕಟನೆ – ರೋಮಾ 5:8 ಅದರ ತೃಪ್ತಿ ನ್ಯಾಯದ ವಿಷಯದಲ್ಲಿ – ರೋಮಾ 3:25-26 ಅದರ ಶಾಶ್ವತವಾದ ಫಲಿತಾಂಶಗಳು – 9:12; 10:10,14; ರೋಮಾ 5:9-10. ದೇವರಿಂದ ನ್ಯಾಯವಾದ ಶಿಕ್ಷೆಯನ್ನು ಎದುರಿಸಬೇಕಾದರೆ, ಮಾನವರು ಹುರುಪಿನಿಂದ ಸುವಾರ್ತೆಯನ್ನು ತಿರಸ್ಕರಿಸುವ ಅವಶ್ಯಕತೆಯೇ ಇಲ್ಲ. ಅದನ್ನು ನಿರ್ಲಕ್ಷಿಸುವದು ಅಥವಾ ಅಲ್ಲಗಳೆಯುವುದು ಸಾಕು.

*"ಇದು ಕರ್ತನಿಂದ ಹೇಳಲ್ಪಟ್ಟಿತು"*– ಮೊದಲು ಸುವಾರ್ತೆಯನ್ನು ಪ್ರಕಟಿಸಿದಾತನು ಯೇಸು ಕ್ರಿಸ್ತನೇ ಆಗಿದ್ದಾನೆ (ಮಾರ್ಕ 1:14-15; ಲೂಕ 4:18-21). ಅದರ ಪ್ರಾಮುಖ್ಯತೆಯನ್ನು

ವ್ಯಕ್ತಪಡಿಸಲು ಬರಹಗಾರನು ಇದನ್ನು ಹೇಳಿದ್ದಾನೆ.

*"ಸ್ಥಿರಪಡಿಸಿದನು"*– ಯೇಸು ಕ್ರಿಸ್ತನ ಅಪೊಸ್ತಲರು ಆತನು ಕಲಿಸಿದವುಗಳನ್ನೆಲ್ಲಾ ಸ್ಥಿರಪಡಿಸಿದರು.

*"ನಮಗೆ"*– ಪೌಲನು ಈ ಪತ್ರಿಕೆಯ ಬರಹಗಾರನು ಎಂಬದನ್ನು ಈ ವಿಷಯವು ಅಲ್ಲಗಳೆಯುತ್ತದೆ (ಗಲಾ 1:11-12,15-17; 2:6 ನೋಡಿರಿ). ಪೌಲನು ಈ ರೀತಿಯ ಹೇಳಿಕೆಯನ್ನು ಕೊಡಬಹುದು ಎಂಬದನ್ನು ನಿರೀಕ್ಷಿಸಲು ಆಗುವದಿಲ್ಲ. **4**

**2:4** *"ಮತ್ತು ದೇವರು"*– ತಂದೆ ಅದ್ಭುತವಾದ ಸೂಚಕಕಾರ್ಯಗಳ ಮೂಲಕ ತನ್ನ ಮಗನ ಸುವಾರ್ತೆಯನ್ನು ದೃಢಪಡಿಸಿದನು – ಮತ್ತಾಯ 28:6 (ರೋಮಾ 1:4); ಮಾರ್ಕ 16:20; ಅಪೊ 2:43; 5:12-16.

*"ವರಗಳು"*– ಪವಿತ್ರಾತ್ಮನು ವಿಶ್ವಾಸಿಗಳಿಗೆ ಆತ್ಮೀಕ ಸಾಮರ್ಥ್ಯಗಳನ್ನು ಕೊಡುವದು ಸುವಾರ್ತೆಗೆ ದೇವರ ಸಾಕ್ಷಿಯ ಭಾಗವಾಗಿದೆ. ತ್ರಯೇಕತ್ವವು (ಮತ್ತಾಯ 3:16-17 ನೋಡಿರಿ) ಕಾರ್ಯಮಾಡುತ್ತಾ ಜನರಿಗೆ ಸುವಾರ್ತೆಯನ್ನು ತಲುಪಿಸುತ್ತಾ ಇತ್ತು ಮತ್ತು ಅದರ ಸತ್ಯಸಂಧತೆಗೆ ಸಂಪೂರ್ಣವಾದ ಪುರಾವೆಯನ್ನು ಒದಗಿಸುವದಾಗಿತ್ತು. **5-8**

**2:5-8** ಬರಹಗಾರನು ಮೊದಲನೆ ಅಧ್ಯಾಯದ ವಿಷಯಕ್ಕೆ ಹಿಂದಿರುಗುತ್ತಿದ್ದಾನೆ – ಯೇಸು ಕ್ರಿಸ್ತನು ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ (ವ 5,7,9). ಸತ್ಯದ ಪೂರ್ಣ ತಿಳುವಳಿಕೆಯಿಲ್ಲದೆ ಇರುವ ಕೆಲವರು, ತಿರಸ್ಕರಿಸಬಹುದು ಎಂಬದಾಗಿ ಅವನಿಗೆ ತಿಳಿದಿತ್ತು: "ಒಂದುವೇಳೆ ಯೇಸು ಕ್ರಿಸ್ತನು ದೇವದೂತರಿಗಿಂತ ಶ್ರೇಷ್ಠನಾಗಿದ್ದರೆ ಆತನು ಮಾನವನಾಗಿದ್ದಾಗ ದೇವದೂತರಿಗಿಂತ ಹೇಗೆ ಕಡಿಮೆಯಾಗಿದ್ದನು? ದೇವದೂತರಿಗಿಂತ ಶ್ರೇಷ್ಠನಾಗಿರುವಾತನು ಶೋಧನೆ, ಶ್ರಮೆಗಳು ಮತ್ತು ಮರಣವನ್ನು ಅನುಭವಿಸಲು ಹೇಗೆ ಸಾಧ್ಯ?" ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮರಣವನ್ನನುಭವಿಸಿದ್ದು ಅನೇಕ ಯೆಹೂದ್ಯರಿಗೆ ತಡೆಯಾಗಿತ್ತು – 1 ಕೊರಿಂಥ 1:23. ಮತ್ತು ಅನೇಕರು ಆತನು ದೇವಸ್ವರೂಪನಾಗಿ ಈ ಲೋಕಕ್ಕೆ ಬಂದನು ಎಂಬ ಸತ್ಯವನ್ನು ಅಂಗೀಕರಿಸಿಕೊಳ್ಳದವರಾಗಿದ್ದರು – ಯೋಹಾನ 5:17-18; 10:31-33. ಬರಹಗಾರನು ಈ ವಚನಗಳಲ್ಲಿ ಎದುರಾಗಬಹುದಾದ ವಿರೋಧಗಳ ವಿಷಯದಲ್ಲಿ ಎರಡು ಪ್ರಾಮುಖ್ಯವಾದ ಸಂಗತಿಗಳನ್ನು ತಿಳಿಯಪಡಿಸಿದ್ದಾನೆ: ಯೇಸು ಕ್ರಿಸ್ತನು ಸ್ವಲ್ಪ ಕಾಲ ಮಾತ್ರವೇ ದೇವದೂತರಿಗಿಂತ ಕಡಿಮೆಯಾಗಿದ್ದನು (ವ 9), ಮತ್ತು ಯೇಸು ಕ್ರಿಸ್ತನು ಮಾನವನಾಗಿ ದೇವದೂತರಿಗಿಂತ ಕಡಿಮೆಯಾಗುವದು ಅವಶ್ಯವಾಗಿತ್ತು ಯಾಕಂದರೆ ಆಗ ಮಾತ್ರವೇ ಆತನು ಮಾನವರ ರಕ್ಷಕನಾಗಿರಲು ಸಾಧ್ಯವಾಗುವದಾಗಿತ್ತು (ವ 10,14,17). **5**

**2:5** *"ಮುಂದಣ ಸಾಮ್ರಾಜ್ಯ"*– ಮತ್ತಾಯ 25:31,34; ಅಪೊ 3:21; ರೋಮಾ 8:18-23; ಯೆಶಾಯ 11 ನೇ ಅಧ್ಯಾಯ; ಪ್ರಕಟನೆ 20-22 ಅಧ್ಯಾಯಗಳು. **6-8**

**2:6-8** ದೇವರು ಮುಂದಣ ಸಾಮ್ರಾಜ್ಯದಲ್ಲಿ ದೇವದೂತರನ್ನಲ್ಲ ಬದಲಾಗಿ ಮಾನುಷ್ಯರನ್ನು ಮುಂದಣ ಸಾಮ್ರಾಜ್ಯದಲ್ಲಿ ಅಧಿಕಾರಿಗಳನ್ನಾಗಿ ಮಾಡುತ್ತಾನೆ ಎಂಬ ತೋರಿಸಲು ಬರಹಗಾರನು ಕೀರ್ತನೆ 8:4-6 ವಚನಗಳನ್ನು ಉಪಯೋಗಿಸಿದ್ದಾನೆ. ಹಾಗೆಯೇ ಮತ್ತಾಯ 19:28; 24:46-47; 25:21; ಲೂಕ 19:17; 2 ತಿಮೊ 2:12; ಪ್ರಕ 5:10; 20:6; 22:5. **6**

**2:6** *"ಆದರೆ ಈಗ"*– 8 ನೇ ವಚನವು ಇನ್ನೂ ಪೂರ್ತಿಯಾಗಿ ನೆರವೇರಿಲ್ಲ. ಮಾನವನಿಗೆ ದೊರೆಯಬೇಕೆಂದು ದೇವರು ಬಯಸಿರುವ ಉನ್ನತ ಸ್ಥಾನವನ್ನು ಅವನು ಇನ್ನೂ ಹೊಂದಿಲ್ಲ. **9**

**2:9** ಮುಂದಣ ಲೋಕದ ಮೇಲೆ ಮಾನವನ ಅಧಿಕಾರವನ್ನು ಯೇಸು ಕ್ರಿಸ್ತನ ಮೂಲಕ ಮಾತ್ರವೇ ಅರಿತುಕೊಳ್ಳಲು ಸಾಧ್ಯ. ಆತನು ಮಾನವಕುಲದ ಪ್ರತಿನಿಧಿಯಾಗಿರುವ "ಕಡೇ ಆದಾಮನು" (1 ಕೊರಿಂಥ 15:45-47), ಮುಂದಣ ಲೋಕದ ಮೇಲೆ ಆಳ್ವಿಕೆ ನಡೆಸುವ ವಿಮೋಚಿಸಲ್ಪಟ್ಟಿರುವ ಜನರ ನಾಯಕನು. ಆತನು ಮಾನವರನ್ನು ದೇವದೂತರಿಗಿಂತ ಉನ್ನತ ಸ್ಥಾನಕ್ಕೆ ಹೆಚ್ಚಿಸಬೇಕೆಂದು ಬಯಸಿದನು. ಆದ್ದರಿಂದ, ಆತನು ದೇವದೂತರ ಸೃಷ್ಟಿಕರ್ತನಾಗಿದ್ದರೂ, ದೇವದೂತರಿಗಿಂತ ಕಡಿಮೆಯಾಗಿದ್ದನು – ಅಂದರೆ, ಆತನು ಮಾನವನಾದನು (ಯೋಹಾನ 1:14; ಫಿಲಿಪ್ಪಿ 2:5-8). ಮರಣವನ್ನು ಅನುಭವಿಸುವ ಉದ್ದೇಶದಿಂದಲೇ ಆತನು ಮಾನವನಾಗಿ ಬಂದನು.

*"ಮರಣವನ್ನು ಅನುಭವಿಸಿದನು"*– ಇದರ ಅರ್ಥ ಆತನು ನಿಜವಾಗಿಯೂ ಮೃತಪಟ್ಟನು. ಮಾನವನು ಮುಂದಣ ಸಾಮ್ರಾಜ್ಯದಲ್ಲಿ ಆಳ್ವಿಕೆ ಮಾಡಬೇಕು ಎಂಬದು ದೇವರ ಉದ್ದೇಶವಾಗಿತ್ತು. ಮಾನವರೆಲ್ಲರೂ ಪಾಪಿಗಳಾಗಿದ್ದರು ಮತ್ತು ಅವರ ಪಾಪಗಳ ನಿಮಿತ್ತ ಅವರಿಗೆ ಮರಣದ ಶಿಕ್ಷೆ ಎದುರಾಗಿತ್ತು (ಆದಿ 2:17; ರೋಮಾ 5:12; 6:23). ಕರ್ತನಾದ ಯೇಸು ಕ್ರಿಸ್ತನು "ಪ್ರತಿಯೊಬ್ಬ ಮಾನವನಿಗಾಗಿ" ಪ್ರಾಣ ಕೊಡಲು ಬಂದನು – 2 ಕೊರಿಂಥ 5:14-15; 1 ತಿಮೊ 2:6; 1 ಯೋಹಾನ 2:2. "ದೇವರ ಕೃಪೆಯಿಂದ" ಇದು ಸಾಧ್ಯವಾಯಿತು. ಇದು ಮಾನವರಿಗೆ ದೇವರು ಕೊಟ್ಟಿರುವ ವರವಾಗಿದೆ – ಯೋಹಾನ 3:16; ರೋಮಾ 5:8. ಯಾಕಂದರೆ ಯೇಸು ಕ್ರಿಸ್ತನು ಸ್ವೇಚ್ಛೆಯಿಂದಲೇ ತನ್ನನ್ನು ಮರಣಕ್ಕೆ ಒಪ್ಪಿಸಿದನು (ಯೋಹಾನ 10:17-18), ದೇವರು ಆತನನ್ನು ಉನ್ನತ ಸ್ಥಾನಕ್ಕೆ ನಡೆಸಿದನು – 1:3; ಫಿಲಿಪ್ಪಿ 2:9-11. **10**

**2:10** *"ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸಲು"*– ದೇವರು ಮಾನವರಾಗಿ ಮಾಡಿರುವ ಮತ್ತು ಅವರ ಮಧ್ಯದಲ್ಲಿ ಮಾಡುತ್ತಿರುವ ಎಲ್ಲಾ ಕಾರ್ಯಗಳ ಉದ್ದೇಶ ಇದುವೇ ಆಗಿದೆ. ಯೋಹಾನ 17:22,24; ರೋಮಾ 5:2; 8:18,28-30; 9:23; 2 ಕೊರಿಂಥ 4:17; ಎಫೆ 1:18 ರೊಂದಿಗೆ ಹೋಲಿಸಿ ನೋಡಿರಿ.

*“ಅವರ ರಕ್ಷಣಾಕರ್ತನು”*– ಕರ್ತನಾದ ಯೇಸು ಕ್ರಿಸ್ತನು – 12:2. ದೇವರು ಅವರಿಗಾಗಿ ಸಿದ್ಧಮಾಡಿರುವ ಪ್ರಭಾವವನ್ನು ತಲುಪಲು ಅವರಿಗೆ ಬೇಕಾದ ಮಾರ್ಗವನ್ನು ಆತನು ಸ್ಥಾಪಿಸಿದನು. ಆತನನ್ನು “ಸಿದ್ಧಿಗೆ ತರುವದು” ಎಂದರೆ ಯೇಸು ಕ್ರಿಸ್ತನು ಶ್ರಮೆಗಳನ್ನು ಅನುಭವಿಸುವ ಮೊದಲು ಆತನ ಸ್ವಭಾವವು ಸಿದ್ಧಿಗೆ ಬಂದಿರಲಿಲ್ಲ ಎಂಬ ಅರ್ಥವಲ್ಲ. ಆತನು ತನ್ನ ಸ್ವಭಾವದಲ್ಲಿ ಮತ್ತು ಕ್ರಿಯೆಗಳಲ್ಲಿ ಪಾಪವಿಲ್ಲದವನಾಗಿದ್ದನು ಮತ್ತು ಸಿದ್ಧಿಗೆ ಬಂದವನಾಗಿದ್ದನು. ಆತನ್ನು ಸಿದ್ಧಿಗೆ ತರುವದು ಎಂದರೆ ಶ್ರಮೆಗಳ ಮೂಲಕ ಮಾನವರಿಗೆ ರಕ್ಷಕನನ್ನಾಗಿ ದೇವರು ಆತನನ್ನು ಯುಕ್ತವಾಗಿ ಸಿದ್ಧಿಗೆ ತಂದನು – 5:7-9; 7:28. ಆತನ ಶ್ರಮೆಗಳು ಅವರ ಪಾಪ ಮತ್ತು ಅಪರಾಧಗಳನ್ನು ತೆಗೆದುಹಾಕಿದ್ದು ಮಾತ್ರವಲ್ಲ (7:27; 9:28; 13:12; 1 ಪೇತ್ರ 3:18) ತನ್ನ ಜನರಿಗೆ ಶ್ರಮೆಗಳು ಹಾಗೂ ಶೋಧನೆಗಳು ಎದುರಾಗುವಾಗ ಅವರಿಗೆ ಕರುಣೆ ತೋರಲು ಮತ್ತು ಸಹಾಯ ಮಾಡಲು ಆತನು ಪೂರ್ಣವಾಗಿ ಶಕ್ತನಾದನು (ವ 18; 4:15-16). **11-18**

**2:11-18** ಕರ್ತನಾದ ಯೇಸು ಕ್ರಿಸ್ತನು ದೇವರು ಯಾರನ್ನು ಪ್ರಭಾವಕ್ಕೆ ನಡೆಸುತ್ತಾ ಇದ್ದಾನೋ ಅವರೊಂದಿಗೆ ತನ್ನನ್ನು ಸಂಪೂರ್ಣವಾಗಿ ಗುರುತಿಸಿಕೊಂಡನು. **11**

**2:11** *“ಪವಿತ್ರ ಮಾಡುವಾತನು”*– ಅಂದರೆ “ಜನರನ್ನು ಪರಿಶುದ್ಧರನ್ನಾಗಿ ಮಾಡುವಾತನು”. ಈ ಕಾರ್ಯವನ್ನು ಮಾಡುವಾತನು ಯೇಸು ಕ್ರಿಸ್ತನೇ ಆಗಿದ್ದಾನೆ. – 10:10,14; 13:12. ಪರಿಶುದ್ಧತೆಯ ಕುರಿತಾದ ನೋಟ್ಸ್ ಗಳನ್ನು ಯಾಜಕ 20:7; ಯೋಹಾನ 17:17-19 ರಲ್ಲಿ ನೋಡಿರಿ. ಆತನಲ್ಲಿ ನಂಬಿಕೆಯನ್ನಿಡುವವರು ಮತ್ತು ಪಾಪವನ್ನು ತ್ಯಜಿಸಿ ಆತನನ್ನು ರಕ್ಷಕನನ್ನಾಗಿ ಹಾಗೂ ಪ್ರಭಾವಕ್ಕೆ ನಡೆಸುವ ನಾಯಕನನ್ನಾಗಿ ಅಂಗೀಕರಿಸಿಕೊಳ್ಳುವವರನ್ನು ಆತನು ಪವಿತ್ರ ಮಾಡುತ್ತಾನೆ. ಯೇಸು ಕ್ರಿಸ್ತನು ಅವರನ್ನು ಉಳಿದ ಮಾನವ ಕುಲದಿಂದ ಪ್ರತ್ಯೇಕಪಡಿಸಿದ್ದಾನೆ ಮತ್ತು ಅವರನ್ನು ದೇವರಿಗೆ ಪ್ರತಿಷ್ಠಿಸಿದ್ದಾನೆ. ಆತನು ಮತ್ತು ಅವರು “ಒಂದೇ ಆಗಿದ್ದಾರೆ”. ಅವರು ಒಬ್ಬನೇ ದೇವರಿಗೆ ಸೇರಿದವರಾಗಿದ್ದಾರೆ. ದೇವಕುಮಾರನಾಗಿರುವ ಆತನು ಮಾನವನಾಗಿ ಜನಿಸಿದನು. ಅವರು ಹೊಸದಾದ ಆತ್ಮೀಕ ಜನನದ ಮೂಲಕ ದೇವರ ಮಕ್ಕಳಾಗುತ್ತಾರೆ – ಯೋಹಾನ 1:12-13; 3:3-8. ದೇವರು ಯೇಸು ಕ್ರಿಸ್ತನ ತಂದೆ ಮತ್ತು ಯೇಸು ಕ್ರಿಸ್ತನಲ್ಲಿ ನಂಬುವವರೆಲ್ಲರ ತಂದೆಯಾಗಿದ್ದಾನೆ – ಯೋಹಾನ 20:17. ಮತ್ತು ಯೇಸು ಕ್ರಿಸ್ತನು, ಪ್ರಭಾವವುಳ್ಳ ಕರ್ತನು, ಎಲ್ಲಾ ಕಾರ್ಯಗಳ ಬಾಧ್ಯಸ್ಥನಾಗಿದ್ದಾನೆ ಹಾಗೂ ವಿಶ್ವಾಸಿಗಳು ಈಗ ಬಡವರು, ಬಲಹೀನರು ಮತ್ತು ಆಗಾಗ ಮೂರ್ಖರಾಗಿ ನಡೆದುಕೊಂಡರೂ ಅವರನ್ನ್ “ಸಹೋದರರೆಂದು”ಕರೆಯಲು ನಾಚಿಕೆಪಡದವನಾಗಿದ್ದಾನೆ. **12-13**

**2:12-13** ಕರ್ತನಾದ ಯೇಸು ಕ್ರಿಸ್ತನು ಮತ್ತು ಆತನ ವಿಶ್ವಾಸಿಗಳು ಮಾನವ ಸ್ವಭಾವ ಹಾಗೂ ದೇವರೊಂದಿಗಿನ ತಮ್ಮ ಸಂಬಂಧದಲ್ಲಿ ಪಾಲುಗಾರರಾಗಿದ್ದಾರೆ ಎಂಬದನ್ನು

ನಿರೂಪಿಸಲು ಆತನು ಕೀರ್ತನೆ 22:22 ಮತ್ತು ಯೆಶಾಯ 8:17-18 ವಚನಗಳನ್ನು ಉಪಯೋಗಿಸಿದ್ದಾನೆ. **14**

**2:14** *"ಮಕ್ಕಳು"*– ದೇವರ ಮಕ್ಕಳು, 10 ನೇ ವಚನದ, "ಬಹುಮಂದಿ ಪುತ್ರರು" ಅವರೆಲ್ಲರೂ ಮಾನವರಾಗಿದ್ದಾರೆ, ಹೀಗೆ ಯೇಸು ಕ್ರಿಸ್ತನು ನಿಜವಾದ ಮಾಂಸ ಮತ್ತು ರಕ್ತವುಳ್ಳ ಮಾನವನಾದನು – ಮತ್ತಾಯ 1:20-21; ಲೂಕ 2:5-7; 24:49; ಯೋಹಾನ 1:14; 6:53-58. ಇದರಲ್ಲಿ ಆತನ ಉದ್ದೇಶವು ಮೂರು ರೀತಿಯದ್ದಾಗಿದೆ: ಸಾಯುವದು (ಮತ್ತಾಯ 16:21; 20:28; ಯೋಹಾನ 10:17-18), ಸಾಯುವ ಮೂಲಕ ಸೈತಾನನನ್ನು ನಾಶಮಾಡುವದು ಮತ್ತು ತನ್ನ ಜನರನ್ನು ಬಿಡುಗಡೆ ಮಾಡುವದು. ಮತ್ತಾಯ 4:1-10 ರಲ್ಲಿ ಸೈತಾನನ ಕುರಿತಾದ ನೋಟ್ಸ್ ನೋಡಿರಿ.

*"ಮರಣಭಯ"*– ಆದಾಮ ಮತ್ತು ಹವ್ವಳನ್ನು ಪಾಪಕ್ಕೆ ನಡೆಸುವ ಮೂಲಕ ಸೈತಾನನು ಲೋಕದೊಳಗೆ ಮರಣವನ್ನು ಬರಮಾಡಿದನು – ಆದಿಕಾಂಡ 3 ನೇ ಅಧ್ಯಾಯ. ಮಾನವರಲ್ಲಿ ಸೆರೆಯಾಗಿಟ್ಟುಕೊಂಡು, ಅವನು ಪಾಪ ಮತ್ತು ಮರಣದ ರಂಗದಲ್ಲಿ ಆಳ್ವಿಕೆ ಮಾಡುವವನಾಗಿದ್ದಾನೆ – 2 ತಿಮೊ 2:26, ಹಾಗೂ ಅವರನ್ನು ಮರಣದ ಅವಸ್ಥೆಯಲ್ಲಿ ಇರಿಸಿಕೊಂಡಿದ್ದಾನೆ. ಅವನಿಗೆ ಕೊಲ್ಲುವ ಅಧಿಕಾರವೂ ಇದೆ ಎಂಬದಾಗಿ ಅನ್ನಿಸುತ್ತದೆ – ಯೋಬ 2:6; 1 ಕೊರಿಂಥ 5:5. ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಮೂಲಕ ಆತನು ಸೈತಾನನನ್ನು ಸೋಲಿಸಿದನು ಹಾಗೂ ಮಾನವರು ತಮ್ಮ ಪಾಪಗಳಿಗೆ ಕ್ಷಮಾಪಣೆ ಹೊಂದಲು, ನಿತ್ಯಜೀವ ಪಡೆಯಲು ಮತ್ತು ಸಂಪೂರ್ಣವಾಗಿ ಮರಣದಿಂದ ಬಿಡುಗಡೆ ಹೊಂದಲು ಸಾಧ್ಯವನ್ನಾಗಿಸಿದನು – ಯೋಹಾನ 5:24; 11:25-26; 1 ಕೊರಿಂಥ 15:54-57; 2 ತಿಮೊ 1:10. ಇದರ ಅರ್ಥ ಸೈತಾನನನ್ನು ಹೊರಹಾಕುವದು ಮತ್ತು ಕ್ರಮೇಣವಾಗಿ ಅವನನ್ನು ಹಾಗೂ ಅವನ ರಾಜ್ಯವನ್ನು ನಾಶಮಾಡುವದಾಗಿದೆ – ಯೋಹಾನ 12:31; ಪ್ರಕ 20:10,14,15.

*"ಅಧಿಕಾರ ಹೊಂದಿದ್ದಾನೆ"*– ಗ್ರೀಕ್ ಕ್ರಿಯಾಪದವು ವರ್ತಮಾನ ಕಾಲದಲ್ಲಿ ಬರೆಯಲ್ಪಟ್ಟಿದೆ. ಆದರೂ ಕೆಲವು ಆವೃತ್ತಿಯ ಭಾಷಾಂತರಗಳಲ್ಲಿ "ಅಧಿಕಾರ ಹೊಂದಿದ್ದನು" ಎಂದು ಭಾಷಾಂತರ ಮಾಡಲಾಗಿದೆ – ಅಂದರೆ ಆತನಿಗೆ ಈಗ ಅಧಿಕಾರ ಇಲ್ಲ ಎಂದು ಅದು ಸೂಚಿಸುತ್ತದೆ. ಈಗಲೂ ತಮ್ಮ ಪಾಪಗಳಲ್ಲಿಯೇ ಮುಂದುವರೆಯುವವರು ಮತ್ತು ಯೇಸು ಕ್ರಿಸ್ತನನ್ನು ತಿರಸ್ಕರಿಸುವವರ ಮೇಲೆ ಸೈತಾನನು ಮರಣದ ಅಧಿಕಾರವನ್ನು ಹೊಂದಿದ್ದಾನೆ, ಆದರೆ ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳ ಮೇಲೆ ಅವನಿಗೆ ಇಂಥ ಯಾವ ಅಧಿಕಾರವೂ ಇಲ್ಲ (1 ಕೊರಿಂಥ 5:5 ರಂಥ ಪರಿಸ್ಥಿತಿಗಳಲ್ಲಿ ಮಾತ್ರವೇ ಇರುತ್ತದೆ). ಯೇಸು ಕ್ರಿಸ್ತನು ನಮ್ಮನ್ನು ಸೈತಾನನ ಅಧಿಕಾರ ಮತ್ತು ಕತ್ತಲೆಯ ರಾಜ್ಯದಿಂದ ಬಿಡುಗಡೆ ಮಾಡಿದ್ದಾನೆ ಹಾಗೂ ನಮ್ಮನ್ನು ದೇವರ ರಾಜ್ಯದೊಳಗೆ ಸೇರಿಸಿದ್ದಾನೆ (ಅಪೊ 26:18;

ಕೊಲೊ 1:13). ಸೈತಾನನು ಮಾನವರನ್ನು ದಾಸತ್ವದಲ್ಲಿರಿಸಿಕೊಳ್ಳಲು "ಮರಣ ಭಯವನ್ನು" ಉಪಯೋಗಿಸುತ್ತಾನೆ ಎಂಬದನ್ನು ಗಮನಿಸಿರಿ. ಆ ಭಯದ ನಿಮಿತ್ತವಾಗಿ ಮಾನವರು ಸೈತಾನನ ಆದೇಶದ ಮೇರೆಗೆ ಎಲ್ಲಾ ರೀತಿಯ ಕಾರ್ಯಗಳನ್ನು ಮಾಡುತ್ತಾರೆ, ಆ ಭಯ ಇಲ್ಲದೆ ಹೋಗಿದ್ದರೆ ಅವರು ಅವುಗಳನ್ನು ಮಾಡುತ್ತಿರಲಿಲ್ಲ. "ಮರಣ ಭಯ" ಅಂದರೆ ಸತ್ತುಹೋಗುತ್ತೇವೇನೋ ಎಂಬದಾಗಿ ಭಯಪಡುವದಕ್ಕಿಂತ ಹೆಚ್ಚಿನದಾಗಿದೆ – ಅದು ಮರಣದ ನಂತರ ಏನಾಗುವದೆಂಬ ಭಯವಾಗಿದೆ. ಇದು ಮಾನವರನ್ನು ಸುಳ್ಳು ಧರ್ಮದ ಬಂಧನದೊಳಗೆ ಸಿಕ್ಕಿಸುತ್ತದೆ. ಮರಣದ ನಂತರ ಉತ್ತಮ ಸ್ಥಿತಿ ದೊರೆಯುವದೆಂದು ಒಂದುವೇಳೆ ಮಾನವರು ಯೋಚಿಸುವದಾದರೆ ಸೈತಾನನು ಅವರಿಗೆ ಹೇಳುವ ಕಾರ್ಯಗಳನ್ನೆಲ್ಲಾ ಅವರು ಮಾಡುತ್ತಾರೆ. ಯೇಸು ಕ್ರಿಸ್ತನು ವಿಶ್ವಾಸಿಗಳನ್ನು ಮರಣ ಭಯ ಮತ್ತು ಎಲ್ಲಾ ರೀತಿಯ ಬಂಧನಗಳಿಂದ ಬಿಡಿಸುತ್ತಾನೆ – ಯೋಹಾನ 8:32,36; ರೋಮಾ 6:18; 8:2,15,21; 2 ಕೊರಿಂಥ 5:6-8; ಫಿಲಿಪ್ಪಿ 1:21-23. **16**

**2:16** ಈ ವಚನವನ್ನು ಭಾಷಾಂತರ ಮಾಡುವದು ಸುಲಭವಲ್ಲ. ಗ್ರೀಕ್ ಭಾಷೆಯಲ್ಲಿ ಇರುವದೆಲ್ಲ ಏನೆಂದರೆ "ಆತನು ಖಂಡಿತವಾಗಿಯು ದೇವದೂತರನ್ನು ಹಿಡಿದುಕೊಳ್ಳಲಿಲ್ಲ, ಬದಲಾಗಿ ಅಬ್ರಹಾಮನ ಸಂತತಿಯವರನ್ನು ಕೈ ಹಿಡಿಯುವವನಾಗಿದ್ದಾನೆ". ಕೆಜೆವಿ ಕ್ರಿಯಾಪದವನ್ನು ವರ್ತಮಾನಕಾಲದಲ್ಲಿ ಬರೆದಿದೆ ಮತ್ತು "ಆತನಲ್ಲಿದ್ದ ಸ್ವಭಾವ" ಎಂಬ ಪದವನ್ನು ಸೇರಿಸಿದೆ ಮತ್ತು "ಆತನು" ಪದವನ್ನು ಇಟಾಲಿಕ್ಸ್ ನಲ್ಲಿ ಬರೆಯುವ ಮೂಲಕ, ಇವುಗಳು ಗ್ರೀಕ್ ಭಾಷೆಯಲ್ಲಿ ಇಲ್ಲ ಎಂಬದನ್ನು ಸೂಚಿಸುತ್ತವೆ. ಗ್ರೀಕ್ ಭಾಷೆಯ ಅರ್ಥ ಬಹುತೇಕ ಯೇಸು ಕ್ರಿಸ್ತನು, ದೇವದೂತರನಲ್ಲ ಬದಲಾಗಿ ಕೆಲವು ವ್ಯಕ್ತಿಗಳಿಗೆ ಸಹಾಯ ಮಾಡುವ ಸಲುವಾಗಿ ಅವರ ಕೈಹಿಡಿಯಲು ಮಾನವನಾಗಿದ್ದಾನೆ ಎಂಬದನ್ನು ಸೂಚಿಸುತ್ತದೆ (ವ 18).

"*ಅಬ್ರಹಾಮನ ಸಂತತಿ*"– ಯೇಸು ಕ್ರಿಸ್ತನು ಮಾನವರಿಗೆ ಸಹಾಯ ಮಾಡುವ ಸಲುವಾಗಿ ಮಾನವನಾದನೇ ಹೊರತು ದೇವದೂತನಾಗಲಿಲ್ಲ. ಅಬ್ರಹಾಮನ "ಸಂತತಿ" ಎಂದರೆ ಆತನ ಅಕ್ಷರಾರ್ಥ ಸಂತತಿಗಳಾಗಿರುವ (ಯೆಹೂದ್ಯರಾಗಿದ್ದು) ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರಾಗಿದ್ದಾರೆ ಮತ್ತು ಅವನ ಆತ್ಮೀಕ ಸಂತತಿಯವರು ಅವನ ಹಾಗೆ ದೇವರಲ್ಲಿ ನಂಬಿಕೆಯನ್ನಿಡುವವರಾಗಿದ್ದಾರೆ – ರೋಮಾ 4:11-12,16,17; ಗಲಾ 3:7-9. **17**

**2:17** "*ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ*"– ಇದರ ಅರ್ಥ ಯೇಸು ಕ್ರಿಸ್ತನು ಪಾಪಿಯಾಗಿದ್ದನು ಅಥವಾ ಅವರ ಹಾಗೆ ಆತನಲ್ಲಿ ಪಾಪ ಸ್ವಭಾವ ಇತ್ತು ಎಂಬದಲ್ಲ. 4:15; 7:26; ಲೂಕ 1:35; ಯೋಹಾನ 8:46; 2 ಕೊರಿಂಥ 5:21; 1 ಪೇತ್ರ 2:22 ನೋಡಿರಿ. ಹಾಗೆಯೇ ಆತನು ಮಾನವನಾಗಿದ್ದಾಗ ದೇವರಾಗಿರಲಿಲ್ಲ ಎಂಬ ಅರ್ಥವನ್ನೂ

ಕೊಡುವದಿಲ್ಲ – 1:6,8. ಇದರ ಅರ್ಥ ಆತನಿಗೆ ನಿಜವಾದ ಮಾಂಸ ಮತ್ತು ರಕ್ತವಿತ್ತು, ಮಾನವ ಸ್ವಭಾವವಿತ್ತು (ವ 14), ಮತ್ತು ಆತನು ನಿಜವಾದ ಶ್ರಮೆಗಳು ಹಾಗೂ ಶೋಧನೆಗಳನ್ನು ಎದುರಿಸಿದನು (ವ 18). ಇದಕ್ಕೆ ಎರಡು ಕಾರಣಗಳಿವೆ – ಪ್ರಾಯಶ್ಚಿತ್ತ ಯಜ್ಞವನ್ನು ಅರ್ಪಿಸುವದು ಮತ್ತು ತನ್ನ ಜನರಿಗೆ ಮಹಾಯಾಜಕನಾಗುವದು. ಪ್ರಾಯಶ್ಚಿತ್ತ ಯಜ್ಞದ ಮಾಹಿತಿಗಾಗಿ ವಿಮೋ 29:33; 25:17; ರೋಮಾ 3:25-26 ನೋಡಿರಿ.

*"ಮಹಾಯಾಜಕ"*– ಬರಹಗಾರನು ಈ ಪತ್ರಿಕೆಯ ಮಹಾ ಧ್ಯೇಯಗಳಲ್ಲಿ ಒಂದನ್ನು ಪರಿಚಯಪಡಿಸಿದ್ದಾನೆ (3:1; 4:14; 5:10; 6:20; 7:26; 8:1; 9:11; 10:21). ಸತ್ಯವೇದದಲ್ಲಿ ಯಾಜಕನು ಜನರಿಗಾಗಿ ಯಜ್ಞಗಳನ್ನು ಅರ್ಪಿಸುತ್ತಿದ್ದನು, ದೇವರ ದೇವದರ್ಶನ ಗುಡಾರ ಅಥವಾ ದೇವಾಲಯದ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೇ ಎಂದು ನೋಡಿಕೊಳ್ಳುತ್ತಾ ಇದ್ದನು ಮತ್ತು ಜನರನ್ನು ದೇವರ ಎದುರಿನಲ್ಲಿ ಪ್ರತಿನಿಧಿಸುತ್ತಾ ಇದ್ದನು. ವಿಮೋ 28:1 ರ ನೋಟ್ಸ್ ನೋಡಿರಿ. ಮಹಾಯಾಜಕನ ಯಾಜಕರ ಮೇಲೆ ನಾಯಕನಾಗಿದ್ದನು ಮತ್ತು ಆತನು ಮಾತ್ರವೇ ಕೆಲವೊಂದು ಕಾರ್ಯಗಳನ್ನು ಮಾಡಬೇಕಾಗಿತ್ತು – 5:1-3; 9:7. ಯಾಜಕಕಾಂಡ 16 ನೇ ಅಧ್ಯಾಯ ನೋಡಿರಿ. ಈಗ ದೇವರು ಹಳೆಯ ಒಡಂಬಡಿಕೆಯ ಯಾಜಕತ್ವವನ್ನು ತೆಗೆದುಹಾಕಿದ್ದಾನೆ (ಬೇರೆ ಯಾವುದೇ ಧಾರ್ಮಿಕ ಪದ್ಧತಿಯಲ್ಲಿರುವ ಯಾಜಕತ್ವವನ್ನು ದೇವರು ಎಂದಿಗೂ ಪ್ರತಿಷ್ಠಿಸಿಲ್ಲ). ಪರಲೋಕದಲ್ಲಿರುವ ಯೇಸು ಕ್ರಿಸ್ತನೊಬ್ಬನೇ ಮಹಾಯಾಜಕನಾಗಿದ್ದಾನೆ ಮತ್ತು ಭೂಲೋಕದ ಮೇಲಿರುವ ಆತನ ವಿಶ್ವಾಸಿಗಳು ಮಾತ್ರವೇ ಭೂಲೋಕದ ಮೇಲೆ ಆತನಿಗೆ ಮೆಚ್ಚಿಕೆಯಾಗುವ ಯಾಜಕರಾಗಿದ್ದಾರೆ – 1 ಪೇತ್ರ 2:5,8; ಪ್ರಕ 1:6. ಯೇಸು ಕ್ರಿಸ್ತನು ಕರುಣೆಯುಳ್ಳ ನಂಬಿಗಸ್ತನಾದ ಮಹಾಯಾಜಕನಾಗಿದ್ದಾನೆ – ಆತನು ತನ್ನ ಎಲ್ಲಾ ಕಾರ್ಯಗಳಲ್ಲಿ ಮಾನವರೊಂದಿಗೆ ಕರುಣೆಯುಳ್ಳವನು ಹಾಗೂ ದೇವರಿಗೆ ನಂಬಿಗಸ್ತನು ಆಗಿದ್ದಾನೆ.

*"ಪಾಪಗಳ ನಿವಾರಣೆ"*– ಈ ಪದ "ಸಮಾಧಾನ" ಅಥವಾ "ಪ್ರಾಯಶ್ಚಿತ್ತ ಯಜ್ಞ" ಎಂಬ ಗ್ರೀಕ್ ಪದದ ಅರ್ಥಕ್ಕಿಂತ ಉತ್ತಮವಾದ ಅರ್ಥವನ್ನು ಕೊಡುತ್ತದೆ ಎಂಬದು ಅನೇಕ ವೇದಪಂಡಿತರ ನಂಬಿಕೆಯಾಗಿದೆ. ರೋಮಾ 3:25; 1 ಯೋಹಾನ 2:2 ರಲ್ಲಿ ಇದರ ಅರ್ಥವನ್ನು ನೋಡಿರಿ. **18**

**2:18** 4:15; ಮತ್ತಾಯ 4:1-10 ನೋಡಿರಿ. ಯೇಸು ಕ್ರಿಸ್ತನು ಶೋಧನೆಯ ಚೂಪಾದ ಬಾಣಗಳನ್ನು ಅನುಭವಿಸಿದ್ದನು. ತನ್ನ ಕುರಿತಾಗಿ ಮಾತ್ರವೇ ಆಲೋಚಿಸುವ, ಶಿಲುಬೆಯನ್ನು ತಪ್ಪಿಸಿಕೊಳ್ಳುವ, ತಪ್ಪಾದ ಕಾರ್ಯಗಳನ್ನು ಮಾಡುವ ಸಲಹೆಗಳನ್ನು ಸೈತಾನನಿಂದ ಕೇಳಿ ಆತನು ಶ್ರಮೆಪಟ್ಟಿದ್ದನು. ಆತನು ಇವೆಲ್ಲವುಗಳನ್ನು ಅನುಭವಿಸಿರುವದರಿಂದ, ಆತನು ಸೈತಾನನ ಮಾರ್ಗಗಳನ್ನು ಮತ್ತು ಅವುಗಳು ಮಾನವನ ಹೃದಯ ಹಾಗೂ ಮನಸ್ಸಿಗೆ ಹೇಗೆ

ಬರುತ್ತವೆ ಎಂಬದನ್ನು ಅನುಭವದಿಂದ ತಿಳಿದಿದ್ದಾನೆ ಮತ್ತು ತನ್ನ ಜನರು ಅವುಗಳನ್ನು ಎದುರಿಸುವಾಗ ಅವರಿಗೆ ಸಹಾಯ ಮಾಡುತ್ತಾನೆ. ಶೋಧನೆಯ ವಿಷಯದಲ್ಲಿ ಹೆಚ್ಚಿನ ಮಾಹಿತಿಗಾಗಿ ಮತ್ತಾಯ 6:13; 1 ಕೊರಿಂಥ 10:13 ನೋಡಿರಿ.

# 3 1-6

**3:1-6** ಯೇಸು ಕ್ರಿಸ್ತನು ಮೋಶೆಗಿಂತ ಶ್ರೇಷ್ಠನಾಗಿದ್ದಾನೆ. ಮೋಶೆ ದೇವರ ಮನೆಯಲ್ಲಿ ಸೇವಕನಾಗಿದ್ದನು, ಆದರೆ ಯೇಸು ಕ್ರಿಸ್ತನು ದೇವರ ಮನೆಯ ಮಗನಾಗಿದ್ದನು. **1**

**3:1** *"ಆದದರಿಂದ"*– ಇದು ದೇವರ ಮಾರ್ಗವಾಗಿದೆ: ಆತನು ಅದರ ಪ್ರಕಾರ ಕಾರ್ಯಮಾಡಲು ಜನರಿಗೆ ಮನವಿ ಸಲ್ಲಿಸುವಂಥ ಮಹಿಮಾರ್ಥ ಸತ್ಯವನ್ನು ತಿಳಿಸುತ್ತಾನೆ (ರೋಮಾ 12:1; 1 ಕೊರಿಂಥ 15:58; 2 ಕೊರಿಂಥ 7:1; ಗಲಾ 5:1; ಎಫೆ 4:1; ಕೊಲೊ 3:1).

*"ದೇವಪ್ರೇಷಿತನು"*– 2:11.

*"ಪರಲೋಕದ ಕರೆ"*– ವಿಶ್ವಾಸಿಗಳಿಗೆ ಪರಲೋಕದಿಂದ ಕರೆ ಬರುತ್ತದೆ ಮತ್ತು ಅವರನ್ನು ಪರಲೋಕಕ್ಕೆ ನಡೆಸುತ್ತದೆ (ರೋಮಾ 8:30).

*"ಅಪೊಸ್ತಲನು"*– ಸತ್ಯವೇದದಲ್ಲಿಯೇ ಇದೊಂದು ಸ್ಥಳದಲ್ಲಿ ಮಾತ್ರ ಯೇಸು ಕ್ರಿಸ್ತನನ್ನು "ಅಪೊಸ್ತಲನೆಂದು" ಕರೆಯಲಾಗಿದೆ. ಇದರ ಅರ್ಥ ದೇವರು ಆತನು ಲೋಕದೊಳಗೆ ತನ್ನ ನಿಯೋಗದ ಮೇರೆಗೆ ಕಳುಹಿಸಿದನು ಮತ್ತು ಆತನ ಮೂಲಕ ಮಾತನಾಡಿದನು (1:2; ಯೋಹಾನ 6:38-39).

*"ಮಹಾಯಾಜಕನು"*– 2:17. **2**

**3:2** ಮೋಶೆ ಮತ್ತು ಯೇಸು ಕ್ರಿಸ್ತನು ಇಬ್ಬರೂ ನಂಬಿಗಸ್ತರಾಗಿದ್ದರು – ಸಂಖ್ಯಾ 12:7; ಯೋಹಾನ 8:28-29; 17:4.

*"ಮನೆ"*– ಅಂದರೆ ದೇವರ ಮನೆಯವರು, ದೇವಜನರು. **3-4**

**3:3-4** ಮೋಶೆ ದೇವರ ಮನೆಯವರಲ್ಲಿ ಭಾಗವಾಗಿದ್ದನು, ಆದರೆ ಕರ್ತನಾದ ಯೇಸು ಕ್ರಿಸ್ತನು ಅದನ್ನು ಉಂಟು ಮಾಡಿದವನಾಗಿದ್ದಾನೆ. ಆದ್ದರಿಂದ ಯೇಸು ಕ್ರಿಸ್ತನು ಮೋಶೆಗಿಂತ ಹೆಚ್ಚು ಶ್ರೇಷ್ಠನಾಗಿದ್ದಾನೆ. **5-6**

**3:5-6** ಮನೆಯಲ್ಲಿರುವ ಮಗನು, ಮನೆಯಲ್ಲಿರುವ ಸೇವಕನಿಗಿಂತಲೂ ಉನ್ನತವಾದ ಸ್ಥಾನದಲ್ಲಿದ್ದಾನೆ. ಮೋಶೆ "ನಂತರದಲ್ಲಿ ಹೇಳಬೇಕಾದ" ವಿಷಯಗಳ ಬಗ್ಗೆ ಮಾತನಾಡಿದನು. ಅಂದರೆ, ಆತನು ದೇವರಿಂದ ಬರುವ ಸತ್ಯದ ಕುರಿತು ಭವಿಷ್ಯದ ಪ್ರಕಟನೆಯನ್ನು ಸೂಚಿಸಿದನು (10:1 ರೊಂದಿಗೆ ಹೋಲಿಸಿ ನೋಡಿರಿ). ಮೋಶೆ ಯೇಸು ಕ್ರಿಸ್ತನ ವಿಷಯದಲ್ಲಿ ಸಾಕ್ಷಿ ನೀಡಿದನು – ಲೂಕ 24:27; ಯೋಹಾನ 5:46. ಯೇಸು ಕ್ರಿಸ್ತನು

ಮೋಶೆಗಿಂತ ಶ್ರೇಷ್ಠನೆಂದು ಬರಹಗಾರನು ಯಾಕೆ ತೋರಿಸಿದ್ದಾನೆ? ಮೋಶೆಯು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರತಿನಿಧಿಯಾಗಿದ್ದಾನೆ; ಯೇಸು ಕ್ರಿಸ್ತನು ಕೃಪೆಯಿಂದ ಕೂಡಿದ ಹೊಸ ಒಡಂಬಡಿಕೆಯ ಸ್ಥಾಪಕನಾಗಿದ್ದಾನೆ. ಬರಹಗಾರನು ನಂತರದಲ್ಲಿ ಹೊಸದು ಹಳೆಯದಕ್ಕಿಂತ ಶ್ರೇಷ್ಠ ಎಂಬದಾಗಿ ತೋರಿಸಿದ್ದಾನೆ (8:6-13). ಇಲ್ಲಿ ಆತನು ಸ್ಥಾಪಕನ ನಿಮಿತ್ತ ಹೊಸದು ಶ್ರೇಷ್ಠವಾದದ್ದೆಂದು ತೋರಿಸುತ್ತಾ ಇದ್ದಾನೆ. **6**

**3:6** *"ನಾವೇ ದೇವರ ಮನೆಯವರು"*– ಮೋಶೆ ಇಸ್ರಾಯೇಲ್ ಜನರ ನಡುವೆ ಸೇವೆ ಮಾಡಿದನು; ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರಿಂದ ಆತನ ಮನೆ ಉಂಟಾಗಿದೆ, ಆ ಮನೆಗೆ ಆತನೇ ಶಿರಸ್ಸಾಗಿದ್ದಾನೆ.

*"ಆದರೆ"*– ವ 14; ಕೊಲೊ 1:23; 1 ಕೊರಿಂಥ 15:2 ನೋಡಿರಿ. ಆತನ ಮನೆಯ ಸದಸ್ಯರಾಗಿರುವ ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಕಳೆದುಕೊಳ್ಳಬಹುದು ಮತ್ತು ಸದಸ್ಯರಾಗಿ ಮುಂದುವರೆಯುವದು ನಿಂತುಹೋಗಬಹುದು ಎಂಬದಾಗಿ ಇದು ಕಲಿಸುವದಿಲ್ಲ. ಇದರ ಅರ್ಥವೇನೆಂದರೆ, ನಂಬುವದನ್ನು ಮುಂದುವರೆಸುವುದೇ ಸದಸ್ಯತ್ವದ ನಿಜವಾದ ಪುರಾವೆಯಾಗಿದೆ. ವ 14 ನೋಡಿರಿ. ತನ್ನ ಧೈರ್ಯ ಹಾಗೂ ನಿರೀಕ್ಷೆಯನ್ನು ತ್ಯಜಿಸುವವನು, ಸುವಾರ್ತೆಯನ್ನು ತಿರಸ್ಕರಿಸುವವನು ಮತ್ತು ದೇವರಿಂದ ರಕ್ಷಣೆಯನ್ನು ಹೊಂದುವ ಮೊದಲು ಅಭ್ಯಾಸ ಮಾಡುತ್ತಾ ಇದ್ದ ಪಾಪದ ಕಾರ್ಯದಲ್ಲಿಯೇ ಜೀವಿಸಲು ಹಿಂಜಾರುವವನ ಬಗ್ಗೆ ಹೇಳುವುದು ಪ್ರಯೋಜನವಿಲ್ಲದ ಕಾರ್ಯವಾಗಿದೆ (10:39; ಯೋಹಾನ 10:27; 1 ಯೋಹಾನ 2:19). ದುಃಖದ ವಿಷಯವೇನೆಂದರೆ ಅನೇಕರು ದೇವರ ಮನೆಯವರಲ್ಲದಿದ್ದರೂ ನಾವು ದೇವರ ಮನೆಯವರೆಂದು ಹೊಗಳಿಕೊಳ್ಳುವವರಾಗಿದ್ದಾರೆ. **17-19**

**3:17-19** ಈ ವಚನಗಳು ಮತಭ್ರಷ್ಟತೆಗೆ ವಿರುದ್ಧವಾಗಿ ಎರಡನೆಯ ಎಚ್ಚರಿಕೆಯನ್ನು ಕೊಡುತ್ತವೆ. 7-11 ವಚನಗಳನ್ನು ಕೀರ್ತನೆ 95:7-11 ವಚನಗಳಿಂದ ತೆಗೆದುಕೊಳ್ಳಲಾಗಿದೆ. ಅಲ್ಲಿಯೇ ನೋಟ್ಸ್ ನೋಡಿರಿ. ಇಡೀ ಸಂತತಿಯು ನಾವು ದೇವರ ಮನೆಯವರು ಎಂದು ಹೇಳಿಕೊಳ್ಳಬಹುದು ಆದರೂ ಅಪನಂಬಿಕೆಯ ನಿಮಿತ್ತ ದೇವರು ನಂಬುವವರಿಗೆ (ವ 19) ಕೊಡುವೆನೆಂದು ವಾಗ್ದಾನ ಮಾಡಿರುವ ಆಶೀರ್ವಾದಗಳನ್ನು ಹೊಂದಲು ವಿಫಲರಾಗಬಹುದು ಎಂಬದನ್ನು ತೋರಿಸುತ್ತದೆ. ಇದು ಒಮ್ಮೆ ನಡೆದಿದೆ ಆದ್ದರಿಂದ ಅನೇಕ ಸಲ ನಡೆಯುವ ಸಾಧ್ಯತೆಯಿದೆ. **7**

**3:7** *"ಪವಿತ್ರಾತ್ಮನು ಹೇಳುವ ಪ್ರಕಾರ"*– ಈ ಪದಗಳನ್ನು ಗಮನಿಸಿರಿ. ಒಬ್ಬ ವ್ಯಕ್ತಿ 95 ನೇ ಕೀರ್ತನೆಯನ್ನು ಬರೆದನು ಆದರೆ ದೇವರಾತ್ಮನು ಅವನಿಗೆ ಬರೆಯುವಂತೆ ಪ್ರೇರಣೆಯನ್ನು ನೀಡಿದನು ಮತ್ತು ಅವನ ಮೂಲಕ ಮಾತನಾಡಿದನು. 9:8; 1 ತಿಮೊ 3:16; 2 ಪೇತ್ರ 1:21 ರೊಂದಿಗೆ ಹೋಲಿಸಿ ನೋಡಿರಿ.

*"ಈಹೊತ್ತು"*– ಈ ಪದವು ಹೊಸ ಪ್ರಾರಂಭ, ಅವಕಾಶಗಳ ಹೊಸ ದಿನವನ್ನು

ಸೂಚಿಸುತ್ತದೆ. ಇದರ ಅರ್ಥ ಯೇಸು ಕ್ರಿಸ್ತನ ಸುವಾರ್ತೆಯ ಈ ಯುಗ ಎಂಬದಾಗಿದೆ. 2 ಕೊರಿಂಥ 6:1-2 ರೊಂದಿಗೆ ಹೋಲಿಸಿ ನೋಡಿರಿ. **8**

**3:8** *"ಕೋಪವನ್ನೆಬ್ಬಿಸುವದು"*– ವಿಮೋ 17:1-7; ಕೀರ್ತನೆ 95:8. **9**

**3:9** *"ನಲವತ್ತು ವರ್ಷಗಳು"*– ಸಂಖ್ಯಾ 14:26-35. **10**

**3:10** *"ದುಃಖಪಡಿಸುವದು"*– ಕೋಪ ಬರುವ ರೀತಿಯಲ್ಲಿ ನಡೆದುಕೊಳ್ಳುವದು, ಹೃದಯವನ್ನು ಕಠಿಣ ಮಾಡಿಕೊಳ್ಳುವದು ಮತ್ತು ದಾರಿ ತಪ್ಪಿ ಹೋಗುವದು – ಅವೆಲ್ಲವೂ (ಮತ್ತು ಇವುಗಳು) ದೇವರಿಗೆ ದುಃಖವನ್ನುಂಟು ಮಾಡುತ್ತವೆ.

*"ಯಾವಾಗಲೂ ತಪ್ಪಿ ಹೋಗುವವರು"*– ಅವರು ಯೇಸು ಕ್ರಿಸ್ತನ ಕುರಿಮರಿಗಳಂತೆ ಇರಲಿಲ್ಲ (ಅಂದರೆ ಆತನ ಸ್ವರಕ್ಕೆ ವಿಧೇಯರಾಗಿ ಆತನನ್ನು ಹಿಂಬಾಲಿಸುತ್ತಾ ಇರಲಿಲ್ಲ – ಯೋಹಾನ 10:27). ಹೊರಗೆ ಮಾತ್ರ ದೇವಜನರು ಎಂಬ ಹೆಸರು ಅವರಿಗಿತ್ತು ಆದರೆ ಒಳಗೆ ಅವರು ಕಠಿಣರು, ಅಪನಂಬಿಕೆಯುಳ್ಳವರು ಮತ್ತು ತಿರುಗಿಬೀಳುವವರು ಆಗಿದ್ದರು. ಕೀರ್ತನೆ 58:3; ಯೆಶಾಯ 1:2-3; 53:6 ರೊಂದಿಗೆ ಹೋಲಿಸಿ ನೋಡಿರಿ. **11**

**3:11** *"ಕೋಪ"*– ಸಂಖ್ಯಾ 25:3 ರಲ್ಲಿ ದೇವರ ಕೋಪದ ಕುರಿತು ನೋಟ್ಸ್ ನೋಡಿರಿ.

*"ನನ್ನ ವಿಶ್ರಾಂತಿ"*– ಅರಣ್ಯ ಪ್ರಯಾಣ ಮತ್ತು ಕಾನಾನ್ ದೇಶದಲ್ಲಿರುವ ಅವರ ವೈರಿಗಳಿಂದ ವಿಶ್ರಾಂತಿ (ಧರ್ಮೋ 1:34-36; 12:9; ಯೆಹೋ 23:1). **12-19**

**3:12-19** ಬರಹಗಾರನು ಕೀರ್ತನೆ 95:7-11 ರ ಮಾತುಗಳನ್ನು ತನ್ನ ಸಮಯದಲ್ಲಿ ಯೆಹೂದ್ಯರ ನಡುವೆಯಿರುವ ಪರಿಸ್ಥಿತಿಗೆ ಅಳವಡಿಸುತ್ತಾ ಇದ್ದಾನೆ. ನಾವು ನಮ್ಮ ಸಮಯದಲ್ಲಿ ಸಭೆಗಳಲ್ಲಿರುವ ಪರಿಸ್ಥಿತಿಗಳಿಗೆ ಇದನ್ನು ಅಳವಡಿಸಬಹುದು. ದೇವಜನರೆಂದು ಕರೆಯಲ್ಪಡುವವರ ನಡುವೆಯಿರುವ ಅಪನಂಬಿಕೆಗೆ ವಿರುದ್ಧವಾಗಿ ಎಚ್ಚರಿಕೆಯನ್ನು ಕೊಡಲಾಗಿದೆ. **12**

**3:12** *"ನೋಡಿಕೊಳ್ಳಿರಿ"*– 12:25; ಘೋರವಾದ ಅಪನಂಬಿಕೆಯ ಸಾಧ್ಯತೆಯನ್ನು ಇಲ್ಲಿ ನೋಡಬಹುದು; ಇದರ ವಿಷಯದಲ್ಲಿ ಬಹಳ ಎಚ್ಚರಿಕೆಯುಳ್ಳವರಾಗಿರಿ. ಅಪನಂಬಿಕೆಯುಳ್ಳ ಹೃದಯವು ಪಾಪಕ್ಕೆ ಒಳಗಾಗುತ್ತದೆ. ಪಾಪದಿಂದ ಉಂಟಾಗುವ ಅಪನಂಬಿಕೆಯು ಮತ್ತಷ್ಟು ಪಾಪಕ್ಕೆ ನಡೆಸುತ್ತದೆ. ಅಪನಂಬಿಕೆಯುಳ್ಳ ಹೃದಯವನ್ನು ನೋಡಲು ಆಗುವದಿಲ್ಲ, ಆದರೆ ಜೀವಸ್ವರೂಪನಾದ ದೇವರ ಕಡೆಯಿಂದ ಹಿಂದಿರುಗುವುದೇ ಅದಕ್ಕೆ ಬಾಹ್ಯದ ಪುರಾವೆಯಾಗಿದೆ. ಮಾನವರು ಯಾವಾಗಲೇ ಆದರೂ ಆತನ ಕಡೆಯಿಂದ ಹಿಂದಿರುಗಿದರೆ ಅದಕ್ಕೆ ಕಾರಣ ಏನೆಂದು ನಾವು ಬಲ್ಲವರಾಗಿದ್ದೇವೆ – ಅವರ ಕಾರಣವಲ್ಲ, ಅವರ ಬುದ್ಧಿವಂತಿಕೆ, ಅವರ ಕಲಿಕೆ ಇತ್ಯಾದಿ. ಮಾನವರು ಏನು ಮಾಡುತ್ತಾರೆ ಎಂಬದನ್ನು ಅವರ ಹೃದಯದ ಸ್ಥಿತಿ ದೃಢಪಡಿಸುತ್ತದೆ. ಜ್ಞಾನೋ 4:23 ನೋಡಿರಿ. **13**

**3:13** ನಿಜವಾಗಿಯೂ ದೇವರನ್ನು ನಂಬುವಂತೆ ಮತ್ತು ನಂಬಿಕೆಯಲ್ಲಿ ಮುಂದೆ ಸಾಗುವಂತೆ

ಹಾಗೂ ಪಾಪದ ಕಾರ್ಯಗಳಿಂದ ದೂರ ಇರುವಂತೆ ಕ್ರೈಸ್ತರು ಸತತವಾಗಿ ಇತರೆ ಕ್ರೈಸ್ತರನ್ನು ಪ್ರೋತ್ಸಾಹಪಡಿಸಬೇಕು. ಇದು ದೇವರ ಹಸ್ತಗಳಲ್ಲಿ ಅಧಿಕವಾಗಿ ಒಳಿತಿಗೆ ಸಾಧನವಾಗಿರುತ್ತದೆ. ಪಾಪದ ಎರಡು ಗುಣಗಳನ್ನು ಗಮನಿಸಿರಿ. ಅದು ದೇವರಿಗೆ ವಿರುದ್ಧವಾಗಿ ಮಾನವರ ಹೃದಯವನ್ನು ಕಠಿಣಪಡಿಸುತ್ತದೆ, ಮತ್ತು ಅದು ವಂಚಕವಾಗಿದೆ (2 ಥೆಸ 2:10). ಪಾಪವು ತನ್ನನ್ನು ದೇವರು ಹೇಳುವ ಹಾಗೆ ಕೆಟ್ಟ ಕಾರ್ಯವನ್ನಾಗಿಯಲ್ಲ ಬದಲಾಗಿ ಒಳ್ಳೆಯ ಕಾರ್ಯವನ್ನಾಗಿ ತೋರ್ಪಡಿಸಿಕೊಳ್ಳಲು ಇಷ್ಟಪಡುತ್ತದೆ. ಅದರ ನಿಜಗುಣ ವಿಷವಾಗಿದ್ದರೂ ಅದು ತನ್ನನ್ನು ಜೇನಿನ ಹಾಗೆ ತೋರ್ಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಅದು ಆಸೆಭೋಗಗಳ ಬಗ್ಗೆ ಮಾತನಾಡುತ್ತದೆ ಆದರೆ ಅದು ಕೊಡುವ ಸಂಬಳದ ವಿಷಯದಲ್ಲಿ (ರೋಮಾ 6:23), ಮತ್ತು ಅದಕ್ಕೆ ವಿರುದ್ಧವಾಗಿರುವ ದೇವರ ಕೋಪದ ಬಗ್ಗೆ ಮೌನವಾಗಿರುತ್ತದೆ (ರೋಮಾ 1:18). ಪಾಪವು ಮೂರು ತರಹದ ವಂಚನೆಯ ಶಕ್ತಿಗಳಲ್ಲಿ ಒಂದಾಗಿದ್ದು ಮಾನವರನ್ನು ಕುರುಡರನ್ನಾಗಿ ಮಾಡುತ್ತದೆ ಮತ್ತು ಅವರನ್ನು ನಾಶನಕ್ಕೆ ನಡೆಸುವ ಅಗಲವಾದ ಮಾರ್ಗವನ್ನು ತಲುಪಿಸುತ್ತದೆ. ಉಳಿದ ಎರಡು ಶಕ್ತಿಗಳಿಗಾಗಿ ಯೆರೆ 17:9 ಮತ್ತು ಪ್ರಕ 12:9 ನೋಡಿರಿ. ಮಹಾ ವಂಚಕನಾಗಿರುವ ಸೈತಾನನು ವಂಚನೆಗೆ ಸುಲಭವಾಗಿ ಒಳಗಾಗುವ ಮಾನವನ ಹೃದಯದಲ್ಲಿ ವಂಚಿಸುವ ಪಾಪವನ್ನು ಉಪಯೋಗಿಸುವಾಗ, ವಂಚನೆಗೊಳಗಾಗುವ ಸಾಧ್ಯತೆಗಳಿಗೆ ಯಾವ ಮೇರೆಯಿರುತ್ತದೆ? **14**

**3:14** ವಚನ 6. ಈ ಕ್ರಿಯಾಪದಗಳನ್ನು ಎಚ್ಚರಿಕೆಯಿಂದ ಗಮನಿಸಿರಿ. ನಾವು ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೇವೆ (ಭೂತಕಾಲ – "ನಾವು ಪಾಲುಗಾರರಾಗುತ್ತೇವೆ" ಅಲ್ಲ) ಒಂದುವೇಳೆ ನಾವು ಕಡೆಯ ತನಕ ಆತನಲ್ಲಿ ದೃಢವಾದ ಭರವಸೆಯುಳ್ಳವರಾಗಿದ್ದರೆ (ಭವಿಷ್ಯಕಾಲದ ಬಗ್ಗೆ ಮಾತನಾಡುತ್ತದೆ). ಒಂದುವೇಳೆ ನಾವು ಯೇಸು ಕ್ರಿಸ್ತನಲ್ಲಿ ಪಾಲುಗಾರರಾಗಿದ್ದರೆ – ಭವಿಷ್ಯಕಾಲವು ಭೂತಕಾಲದಲ್ಲಿ ನಡೆದಿರುವ ನಿಜವಾದ ಘಟನೆಯನ್ನು ಅಳಿಸಿಹಾಕಲಾರದು. ಅದು ಅದನ್ನು ದೃಢಪಡಿಸುತ್ತದಷ್ಟೆ. ನಾವು ನಿಜವಾಗಿಯೂ ಯೇಸು ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೇವೋ ಇಲ್ಲವೋ ಎಂಬದನ್ನು ಅದು ಪ್ರಕಟಿಸುತ್ತದೆ. ಬರಹಗಾರನು ನಿಜವಾದ ದೇವಜನರನ್ನು ವ್ಯಾಖ್ಯಾನಿಸುತ್ತಾ ಇದ್ದಾನೆ – ಅವರು ಯೇಸು ಕ್ರಿಸ್ತನಲ್ಲಿ ಪಾಲುಗಾರರಾಗಿರುತ್ತಾರೆ ಮತ್ತು ನಂಬಿಕೆಯನ್ನು ಮುಂದುವರೆಯುವ ಮೂಲಕ ಅದನ್ನು ದೃಢಪಡಿಸುತ್ತಾರೆ. ನಂಬಿಕೆಯನ್ನು ವಿಚಾರಿಸಲಾಗುತ್ತದೆ, ಅದರ ವೃತ್ತಿಯನ್ನು ಪರೀಕ್ಷಿಸಲಾಗುತ್ತದೆ. ಯಥಾರ್ಥವಾದ ವಿಶ್ವಾಸಿಯು ನಂಬಿಕೆಯಲ್ಲಿ ತನಗಿರುವ ಪರಿಶ್ರಮದಿಂದ ತೋರ್ಪಡಿಸಿಕೊಳ್ಳುವನು. ಕ್ರೈಸ್ತನಾಗಿ ಯಾವುದೇ ರೀತಿಯ ಪ್ರಾರಂಭವನ್ನು ಮಾಡಿದರೆ ಸಾಲದು. ನಾವು ಕಡೇ ತನಕ ನಂಬುವದನ್ನು ಮುಂದುವರೆಸಬೇಕು. ನಿಜವಾದ ವಿಶ್ವಾಸಿಗಳು ಈ ಕಾರ್ಯವನ್ನು ಮಾಡುತ್ತಾರೆ. ಮತಭ್ರಷ್ಟರು ಇದನ್ನು ಮಾಡುವದಿಲ್ಲ, ಯಾಕಂದರೆ ಅವರು ನಮ್ಮಲ್ಲಿದೆ ಇದೆ ಎಂದು ನಂಬಿಕೆ ಯಥಾರ್ಥವಾದ ನಂಬಿಕೆಯಲ್ಲ

(10:35-39; ರೋಮಾ 5:9-10; ಯೋಹಾನ 10:27; 17:11-12; ಲೂಕ 22:31-32; 1 ಯೋಹಾನ 2:19 ರೊಂದಿಗೆ ಹೋಲಿಸಿ ನೋಡಿರಿ). **15**

**3:15** ಹೃದಯವನ್ನು ಕಠಿಣಮಾಡಿಕೊಳ್ಳುವದು ಮತ್ತು ದೇವರಿಗೆ ವಿರುದ್ಧವಾಗಿ ತಿರುಗಿಬೀಳುವದು ಅಪನಂಬಿಕೆಯುಳ್ಳ ಹೃದಯದ ಗುರುತಾಗಿದೆ. **16**

**3:16** *"ಎಲ್ಲರೂ ಅಲ್ಲ"*– ಇಬ್ಬರನ್ನು ಹೊರತುಪಡಿಸಿ, ಇಸ್ರಾಯೇಲ್ ಜನರೆಲ್ಲರೂ (ಸಂಖ್ಯಾ 14:1-2,30).

*"ಐಗುಪ್ತದೇಶದಿಂದ ಹೊರಬಂದವರು"*– ವಿಮೋ 14:29-31. **17**

**3:17** ವಚನ 10; 1 ಕೊರಿಂಥ 10:1-12; ಎಫೆ 5:6; ಕೊಲೊ 3:6. ತನ್ನ ತಲೆಮಾರಿನ ಇಬ್ರಿಯರು ಸಹ ದೇವರ ಕೋಪವನ್ನು ಎದಿರುಸುವ ಸಾಧ್ಯತೆಯಿದೆ ಎಂದು ಬರಹಗಾರನು ಅವರಿಗೆ ಎಚ್ಚರಿಕೆಯನ್ನು ಕೊಡುತ್ತಾ ಇದ್ದಾನೆ. ಯೇಸು ಕ್ರಿಸ್ತನಲ್ಲಿ ದೇವರು ಅವರಿಗೆ ಕೊಟ್ಟಿರುವ ಪ್ರಕಟನೆಯನ್ನು ನಂಬುವದು ಮತ್ತು ಅದಕ್ಕೆ ವಿಧೇಯರಾಗುವದು ಬಹಳ ಪ್ರಾಮುಖ್ಯವಾಗಿತ್ತು. **18-19**

**3:18-19** ವಚನ 11; ಸಂಖ್ಯಾ 14:11; ಧರ್ಮೋ 9:24; ಕೀರ್ತನೆ 78:10-12,21,22; ಅಪೊ 7:51-53. **18**

**3:18** *"ನಂಬಲು ನಿರಾಕರಿಸಿದರು"* – ಯೋಹಾನ 3:36 ರ ನೋಟ್ಸ್ ನೋಡಿರಿ. "ಅವಿಧೇಯರಾದರು"ಎಂಬದಾಗಿಯೂ ಇದನ್ನು ಭಾಷಾಂತರ ಮಾಡಬಹುದು. ಅವಿಧೇಯತೆ ಮತ್ತು ಅಪನಂಬಿಕೆ (ವ 19) ಜೊತೆಜೊತೆಯಾಗಿ ಕಾರ್ಯಮಾಡುತ್ತವೆ. ಇವೆರೆಡು ದೇವರು ಹಾಗೂ ಮಾನವನಿಗೆ ವಿರುದ್ಧವಾಗಿ ಮಾಡುವ ಪ್ರತಿಯೊಂದು ಕಾರ್ಯಗಳಲ್ಲಿಯೂ ಜೊತೆಯಾಗಿರುತ್ತವೆ. ಇದಲ್ಲದೆ ಇವುಗಳು ಜೋಡಿ ಕಳ್ಳರಂತಿದ್ದು ದೇವರು ಎಲ್ಲರಿಗೂ ಕೊಡುವ ಅವಕಾಶಗಳನ್ನು ಹೊಂದುವ ಹಾಗೂ ಸಂತೋಷಿಸುವ ಕಾರ್ಯಗಳನ್ನು ಕದ್ದುಕೊಳ್ಳುತ್ತವೆ. ಇಸ್ರಾಯೇಲ್ಯರು ವಾಗ್ದಾನ ಮಾಡಲ್ಪಟ್ಟ ಕಾನಾನ್ ದೇಶವನ್ನು ಪ್ರವೇಶಿಸದಂತೆ ಅವರನ್ನು ತಡೆದವು. ಈಗ, ಜನರು ಪರಲೋಕ ಪ್ರವೇಶಿಸದಂತೆ ಖಂಡಿತವಾಗಿಯೂ ಅವರನ್ನು ತಡೆಯುತ್ತಿವೆ.

# 4 1-13

**4:1-13** ಈ ಭಾಗದ ಧ್ಯೇಯ ದೇವರ ವಿಶ್ರಾಂತಿಯಲ್ಲಿ ಸೇರುವದಾಗಿದೆ – ವ 1. ಯೇಸು ಕ್ರಿಸ್ತನ ವಿಶ್ವಾಸಿಗಳು ಅದರೊಳಗೆ ಸೇರುತ್ತಾರೆ, ಆದರೆ ಅಪನಂಬಿಕೆಯುಳ್ಳ ಇಸ್ರಾಯೇಲ್ಯರು ಸೇರುವದಿಲ್ಲ – ವ 2,3. ಈ ವಿಶ್ರಾಂತಿಯು ಇಸ್ರಾಯೇಲ್ಯರ ಕಾಲದಲ್ಲಿ ಅಸ್ತಿತ್ವದಲ್ಲಿತ್ತು ಮತ್ತು ಅವರು ಅದರೊಳಗೆ ಸೇರಬಹುದಾಗಿತ್ತು – ವ 4-6. ಅವರು ಸೇರಲಿಲ್ಲವಾದ್ದರಿಂದ, ಅದರಲ್ಲಿ ಕೆಲವರು ಸೇರಲೇಬೇಕೆಂಬದು ದೇವರ ಉದ್ದೇಶವಾಗಿರುವದರಿಂದ, ಆತನು

ಬೇರೊಂದು ದಿನ ಹಾಗೂ ಸಮಯವನ್ನು ನೇಮಿಸಿದ್ದಾನೆ – ವ 6-8. ಮುಕ್ತಾಯ: ಒಂದು ವಿಶ್ರಾಂತಿಯಿದೆ ಅದರೊಳಗೆ ನಾವು ಈಗ ಸೇರಬಹುದಾಗಿದೆ – ವ 9,10. ಬುದ್ಧಿವಾದ: ಅದರೊಳಗೆ ಸೇರಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿರಿ – ವ 11, ಯಾಕಂದರೆ ದೇವರ ವಾಕ್ಯವು ವಿವೇಚನೆಯುಳ್ಳದ್ದು ಮತ್ತು ಅವಿಶ್ವಾಸಿಗಳು ಅದರೊಳಗೆ ಸೇರದಂತೆ ಸದಾಕಾಲವೂ ತಡೆಯುತ್ತದೆ – ವ 12,13. **1**

**4:1** *"ದೇವರ ವಿಶ್ರಾಂತಿ"*– ಅಂದರೆ ಆತ್ಮೀಕ ವಿಶ್ರಾಂತಿ, ಯೇಸು ಕ್ರಿಸ್ತನು ಮತ್ತಾಯ 11:28 ರಲ್ಲಿ ಹೇಳಿರುವ ವಿಶ್ರಾಂತಿ. ಇದು ಯೇಸು ಕ್ರಿಸ್ತನಲ್ಲಿ ದೊರೆಯುವ ರಕ್ಷಣೆಗೆ ಸೂಚನೆಯಾಗಿದೆ. ಕಾನಾನ್ ದೇಶವು ಈ ವಿಶ್ರಾಂತಿಯ ವಿಧಾನ ಮಾತ್ರವಲ್ಲ ಬದಲಾಗಿ ಚಿತ್ರಣವಾಗಿದೆ (ಯೆಹೋ 1:18 ರ ನೋಟ್ಸ್ ನೋಡಿರಿ).

*"ನಿಮ್ಮೊಳಗೆ ಯಾವನಾದರು"*– "ನಮ್ಮೊಳಗೆ ಯಾವನಾದರು" ಎಂದು ಆತನು ಹೇಳಿಲ್ಲ. ವಿಶ್ವಾಸಿಗಳಿಗೆ ಅವರು ರಕ್ಷಣೆ ಹೊಂದಿದ್ದಾರೋ ಅಥವಾ ಇಲ್ಲವೋ ಎಂದು ತಿಳಿದುಕೊಳ್ಳಲು ಆಗುವದಿಲ್ಲ ಅಥವಾ ನಾವು ನಾಶವಾಗುತ್ತೇವೋ ಎಂದು ಅವರು ಭಯದಲ್ಲಿ ಜೀವಿಸುವ ಅವಶ್ಯಕತೆಯಿಲ್ಲ ಎಂದು ಹೇಳುತ್ತಿಲ್ಲ (2:15; ಲೂಕ 12:32; ರೋಮಾ 8:13; 1 ಯೋಹಾನ 5:13 ನೋಡಿರಿ). ಬರಹಗಾರನು ತನ್ನ ವಿಷಯದಲ್ಲಿ ಹೆದರಿಕೆಯುಳ್ಳವನಾಗಿಲ್ಲ ಬದಲಾಗಿ ಕೆಲವರ ವಿಷಯದಲ್ಲಿ ಹೆದರಿಕೆಯುಳ್ಳವನಾಗಿದ್ದನು. ಕ್ರೈಸ್ತರೆಂದು ಹೇಳಿಕೊಳ್ಳುವವರು ಅಪನಂಬಿಕೆ ಮತ್ತು ಅವಿಧೇಯತೆಯ ಗುರುತುಗಳನ್ನು ತೋರಿಸುವದಾದರೆ ನಾವೆಲ್ಲರೂ ಎಚ್ಚರಿಕೆಯುಳ್ಳವರಾಗಿರಬೇಕು. ನಾವು ಸಹ ಎಚ್ಚರಿಕೆಯಿಂದ ಅವರನ್ನು ಗದರಿಸಬೇಕು ಮತ್ತು ಅವರಿಗೆ ಬುದ್ಧಿವಾದಗಳನ್ನು ಹೇಳಬೇಕು – 3:13; 1 ತಿಮೊ 5:20. **2**

**4:2** ಇಸ್ರಾಯೇಲ್ಯರಿಗೆ ಸಾರಲಾದ ಶುಭವಾರ್ತೆ ಏನೆಂದರೆ: ವಾಗ್ದಾನ ದೇಶವು ನಿಮ್ಮೆದುರಿಗಿದೆ; ಹೋಗಿರಿ ಅದನ್ನು ಸ್ವಾಧೀನಪಡಿಸಿಕೊಳ್ಳಿರಿ – ಧರ್ಮೋ 1:19-21. ಈಗ ಜನರಿಗೆ ಸಾರಲಾಗುವ ಶುಭವಾರ್ತೆ ಏನೆಂದರೆ: ದೇವರು ನಿಮಗೆ ಯೇಸು ಕ್ರಿಸ್ತನಲ್ಲಿ ವಿಶ್ರಾಂತಿ ಹಾಗೂ ರಕ್ಷಣೆಯನ್ನು ಕೊಡುತ್ತಾನೆ. ಆತನಲ್ಲಿ ನಂಬಿಕೆಯನ್ನಿಡುವ ಮೂಲಕ ಅವುಗಳನ್ನು ಪಡೆದುಕೊಳ್ಳಿರಿ. ಇಸ್ರಾಯೇಲ್ ಜನರು ದೇಶವನ್ನು ಸ್ವಾಧೀನ ಮಾಡಿಕೊಳ್ಳಲಿಲ್ಲ. ಈ ರೀತಿ ಅವರು ತಮ್ಮ ಅಪನಂಬಿಕೆ ಹಾಗೂ ಅವಿಧೇಯತೆಯನ್ನು ತೋರಿಸಿದರು. ಜನರು ಈಗ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳದೆ ಮತ್ತು ಆತನಲ್ಲಿ ದೇವರ ಆಶೀರ್ವಾದಗಳನ್ನು ಸ್ವಾಧೀನಪಡಿಸಿಕೊಳ್ಳದೆ ತಮ್ಮ ಅಪನಂಬಿಕೆಯನ್ನು ತೋರಿಸುವವರಾಗಿದ್ದಾರೆ. ಸುವಾರ್ತೆಯನ್ನು ಕೇಳಿಸಿಕೊಂಡರೆ ಸಾಲದು. ಕೇಳಿಸಿಕೊಳ್ಳುವದು ನಂಬಿಕೆಯೊಂದಿಗೆ ಬೆರೆಯಬೇಕು, ಈ ರೀತಿಯ ನಂಬಿಕೆಯ ಫಲಿತಾಂಶವು ವಿಧೇಯತೆಯಾಗಿರುತ್ತದೆ. **3**

**4:3** ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದೊಂದೇ ದೇವರ ವಿಶ್ರಾಂತಿಯಲ್ಲಿ ಸೇರಲು

ಮಾರ್ಗವಾಗಿದೆ – ದೇವರು ಕೀರ್ತನೆ 95:11 ರಲ್ಲಿ ಈ ವಿಶ್ರಾಂತಿಯ ಬಗ್ಗೆ ಮಾತನಾಡಿದ್ದಾನೆ. **4-5**

**4:4-5** ಬರಹಗಾರನು ಆದಿ 2:2 ಮತ್ತು ಕೀರ್ತನೆ 95:11 (ಮತ್ತೊಮ್ಮೆ) ಉಪಯೋಗಿಸುವ ಮೂಲಕ ದೇವರ "ವಿಶ್ರಾಂತಿ" ಇದೆ ಮತ್ತು ಅದು ಸೃಷ್ಟಿಯ ಪ್ರಾರಂಭದಿಂದಲೂ ಇದೆ ಎಂಬದನ್ನು ತೋರಿಸಿದ್ದಾನೆ. ದೇವರ ವಿಶ್ರಾಂತಿಯು, ಆತನು ವಿಶ್ವಾಸಿಗಳಿಗೆ ಕೊಡುವ ಆತ್ಮೀಕ ವಿಶ್ರಾಂತಿಯ ಚಿತ್ರಣವಾಗಿದೆ. **6-8**

**4:6-8** ಮಾನವರಲ್ಲಿ ಕೆಲವರು ಆತನ ವಿಶ್ರಾಂತಿಗೆ ಸೇರಬೇಕೆಂಬದು ದೇವರ ಉದ್ದೇಶವಾಗಿದೆ. ಇಸ್ರಾಯೇಲ್ಯರು (ವಿಶ್ರಾಂತಿಯ ವಿಧ ಅಥವಾ ಚಿತ್ರಣವಾಗಿದ್ದ) ಕಾನಾನ್ ದೇಶ ತಲುಪಿದರೂ ಆತನ ವಿಶ್ರಾಂತಿಯೊಳಗೆ ಸೇರಲಿಲ್ಲ. ಯೆಹೋಶುವ ಮೂಲಕ ದೇವರು ಮಾನವ ವೈರಿಗಳಿಂದ ವಿಶ್ರಾಂತಿ ಕೊಟ್ಟನು (ಯೆಹೋ 21:44; 22:4) ಆದರೆ ಅದು ಆತ್ಮೀಕ ವಿಶ್ರಾಂತಿಯಲ್ಲ. ಆದ್ದರಿಂದ ದೇವರು ಹೊಸ ಸಮಯವನ್ನು ನೇಮಿಸಿದನು ಮತ್ತು ಅದನ್ನು "ಈಹೊತ್ತು" ಎಂದು ಕರೆದನು. "ಈಹೊತ್ತು" ಎಂದರೆ ಯೇಸು ಕ್ರಿಸ್ತನು ಬಂದಾಗಿನಿಂದ ಈ ಯುಗ 3:7 ನೋಡಿರಿ. ದೇವರು ಕೊಡಬೇಕೆಂದು ಬಯಸಿದ ವಿಶ್ರಾಂತಿಯನ್ನು ಯೆಹೋಶುವನಾಗಲಿ, ಮೋಶೆಯಾಗಲಿ, ಧರ್ಮಶಾಸ್ತ್ರವಾಗಲಿ, ಇಡೀ ಹಳೆಯ ಒಡಂಬಡಿಕೆಯಾಗಲಿ ಕೊಡಲು ಆಗಲಿಲ್ಲ. ಆದ್ದರಿಂದ ದೇವರು ಬೇರೆ ಸಮಯ ಮತ್ತು ಬೇರೊಂದು ಒಡಂಬಡಿಕೆಯನ್ನು ನೇಮಿಸಿದನು. **9**

**4:9** *"ಸಬ್ಬತೆಂಬ ವಿಶ್ರಾಂತಿ"*– ಗ್ರೀಕ್ ಭಾಷೆಯಲ್ಲಿ "ಸಬ್ಬತಿಸ್ಮೋಸ್" ಸಬ್ಬತ್ "ಆಚರಣೆ" ಅಥವಾ "ವಿಶ್ರಾಂತಿ". ಸಬ್ಬತ್ ವಿಷಯದಲ್ಲಿ ವಿಮೋ 20:8-11 ನೋಡಿರಿ. ಯೆಹೂದ್ಯರು ಸಬ್ಬತ್ ದಿನವನ್ನು ಮುಂದಣ ಲೋಕದ ವಿಧ ಅಥವಾ ಚಿತ್ರಣ ಎಂದು ಪರಿಗಣಿಸುತ್ತಾ ಇದ್ದರು – "ಇಸ್ರಾಯೇಲ್ಯರು ಹೇಳುತ್ತಾ ಇದ್ದದ್ದೇನೆಂದರೆ, ಓ ದೇವರೇ, ಇಡೀ ಲೋಕದ ಕರ್ತನೇ, ಮುಂಬರುವ ಲೋಕದ ರೀತಿಯನ್ನು ನಮಗೆ ತೋರಿಸು. ದೇವರು ಅವರಿಗೆ ಉತ್ತರಿಸಿದ್ದೇನೆಂದರೆ, ಸಬ್ಬತ್ ಆ ವಿಧವಾಗಿದೆ" (ಯೆಹೂದ್ಯ ವ್ಯಾಖ್ಯಾನ ಪುಸ್ತಕದಲ್ಲಿ ಈ ಪದಗಳನ್ನು ನಾವು ನೋಡಬಹುದು). ಅವರು 92 ನೇ ಕೀರ್ತನೆಯು "ಸಬ್ಬತ್ ದಿನದ ಕೀರ್ತನೆ ಎಂದು ಹೇಳುತ್ತಾ ಇದ್ದರು ಯಾಕಂದರೆ ಅದು ಮುಂಬರುವ ಲೋಕವನ್ನು ಸೂಚಿಸುತ್ತದೆ, ಇದು ಸಬ್ಬತ್ ಆಗಿತ್ತು ನಿತ್ಯಜೀವದ ತನಕ ವಿಶ್ರಾಂತಿಯಾಗಿದೆ". ಈ ಪತ್ರಿಕೆಯ ಬರಹಗಾರನು ಸಹ ಇದನ್ನೇ ಇಲ್ಲಿ ಕಲಿಸುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ. **10**

**4:10** ವಿಶ್ವಾಸಿಗಳು ದೇವರ ವಿಶ್ರಾಂತಿಯೊಳಗೆ ಯಾವಾಗ ಸೇರುತ್ತಾರೆ? ಖಂಡಿತವಾಗಿಯೂ ತಮ್ಮ ಈ ಲೋಕ ಜೀವಿತದ ಕೊನೆಯಲ್ಲಿ ಸೇರುತ್ತಾರೆ. ಆಗ ಅವರಿಗೆ ತಮ್ಮ ಪರಿಶ್ರಮಗಳಿಂದ ಉಪಶಮನವಾಗುತ್ತದೆ ಮತ್ತು ಅವರು ದೇವರ ಪ್ರಸನ್ನತೆಯಲ್ಲಿ ವಿಶ್ರಮಿಸಿಕೊಳ್ಳುತ್ತಾರೆ.

ಪ್ರಕ 14:13; 2 ಕೊರಿಂಥ 5:8; ಫಿಲಿಪ್ಪಿ 1:21-24 ರೊಂದಿಗೆ ಹೋಲಿಸಿ ನೋಡಿರಿ. ಆದರೆ, ಒಂದರ್ಥದಲ್ಲಿ, ಅವರು ತಕ್ಕ ಮಟ್ಟಿಗೆ ಈಗಲೇ ಅವರು ವಿಶ್ರಾಂತಿಯಲ್ಲಿ ಸೇರುತ್ತಾರೆ – ಮತ್ತಾಯ 11:28-29. ಈಗಿನ ವಿಶ್ರಾಂತಿಯು ಅಂತಿಮವಾದ ಸಬ್ಬತ್ ವಿಶ್ರಾಂತಿಯಲ್ಲ, ಬದಲಾಗಿ ಅದರ ಪೂರ್ವ ಅನುಭವವಾಗಿದೆ. ಇದಲ್ಲದೆ ಒಬ್ಬನು ತನ್ನ ಸ್ವಂತ ಕಾರ್ಯಗಳಿಂದ ರಕ್ಷಣೆ ಹೊಂದಲು ಮಾಡುವ ಪ್ರಯತ್ನಗಳನ್ನು ತೊರೆದು ರಕ್ಷಣೆ ಹೊಂದಲು ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವದಾಗಿದೆ (ರೋಮಾ 4:4-5 ನೋಡಿರಿ). ಈ ವಿಶ್ರಾಂತಿಯು ಈಗ ಪ್ರಾರಂಭವಾಗುತ್ತದೆ ಮತ್ತು ದೇವರ ಪ್ರಸನ್ನತೆಯಲ್ಲಿ ದೊರೆಯುವ ಅಂತಿಮವಾದ ಪರಿಪೂರ್ಣ ವಿಶ್ರಾಂತಿಗೆ ನಡೆಸುತ್ತದೆ. ಒಂದುವೇಳೆ ನಾವು ಈಗ ಈ ವಿಶ್ರಾಂತಿಯನ್ನು ಯೇಸು ಕ್ರಿಸ್ತನಲ್ಲಿ ಪ್ರಾರಂಭಿಸದೆ ಹೋದರೆ, ಮುಂದಿನ ಲೋಕದಲ್ಲಿ ನಮಗೆ ಸಬ್ಬತ್ ವಿಶ್ರಾಂತಿ ಸಿಗುವದಿಲ್ಲ ಎಂಬದು ನಿಶ್ಚಯವಾಗಿದೆ. **11**

**4:11** ಮತ್ತಾಯ 11:12; ಲೂಕ 13:24; 2 ಕೊರಿಂಥ 13:5; 2 ಪೇತ್ರ 1:10 ರೊಂದಿಗೆ ಹೋಲಿಸಿ ನೋಡಿರಿ. ನಾವೆಲ್ಲರೂ ನಮ್ಮಲ್ಲಿ ಮತ್ತು ಇತರರಲ್ಲಿ ಅವಿಧೇಯತೆ ಹಾಗೂ ಅಪನಂಬಿಕೆ ಕಾಣಿಸಿಕೊಳ್ಳದಂತೆ ಎಚ್ಚರವಾಗಿರೋಣ ಮತ್ತು ನಂಬಿಕೆಯಿಂದ ಗುರಿ ಮುಟ್ಟಲು ಪ್ರಯತ್ನಿಸೋಣ. ಯೇಸು ಕ್ರಿಸ್ತನು ವಾಗ್ದಾನ ಮಾಡಿರುವ ವಿಶ್ರಾಂತಿ ಈಗ ನಮ್ಮಲ್ಲಿದೆ ಮತ್ತು ನಾವು ಆತನ ನೊಗವನ್ನು ಹೊತ್ತುಕೊಂಡು ಮುಂದೆ ಸಾಗುತ್ತಾ ಇದ್ದೇವೆ ಎಂಬದನ್ನು ದೃಢಪಡಿಸಿಕೊಂಡು ಅಂತಿಮ ವಿಶ್ರಾಂತಿಯಲ್ಲಿ ಸೇರುತ್ತೇವೆಂದು ಭರವಸೆಯುಳ್ಳವರಾಗಿರೋಣ.

*"ಪ್ರಯಾಸಪಡೋಣ"*– ಕ್ರಿಯೆಗಳ ಮೂಲಕ ರಕ್ಷಣೆ ದೊರೆಯುವದೆಂದು ಅವನು ಹೇಳುತ್ತಿಲ್ಲ ಬದಲಾಗಿ ಮತ್ತೊಮ್ಮೆ ಸತತ ಪ್ರಯತ್ನದ ನಂಬಿಕೆಗೆ ಆದ್ಯತೆಯನ್ನು ಕೊಡುತ್ತಾ ಇದ್ದಾನೆ (3:14). **12-13**

**4:12-13** ಬರಹಗಾರನು "ಅಪನಂಬಿಕೆಯುಳ್ಳ ಕೆಟ್ಟ ಹೃದಯವು", "ಪಾಪದ ವಂಚನೆಯಿಂದ ಕಠಿಣವಾಗಿರುವ" ಹೃದಯವು (3:12-13), ದೇವರಿಗೆ ಮರೆಯಾಗಿರಲು ಸಾಧ್ಯವೇ ಇಲ್ಲ ಎಂಬದನ್ನು ಹೇಳುತ್ತಾ ಇದ್ದಾನೆ. ದೇವರ ವಾಕ್ಯವು ಆಂತರ್ಯದ ವ್ಯಕ್ತಿಯನ್ನು ಬೆಳಕಿಗೆ ತರುತ್ತದೆ ಮತ್ತು ತನ್ನ ವಾಕ್ಯವನ್ನು ಕೊಟ್ಟಿರುವ ದೇವರು ಯಾರನ್ನು ವಿಶ್ರಾಂತಿಗೆ ಸೇರಿಸಿಕೊಳ್ಳಬೇಕು ಮತ್ತು ಯಾರನ್ನು ಹೊರಗೆ ಇರಬೇಕು ಎಂಬದನ್ನು ಚನ್ನಾಗಿ ಬಲ್ಲವನಾಗಿದ್ದಾನೆ. **12**

**4:12** *"ಸಜೀವವಾದದ್ದು, ಕಾರ್ಯಸಾಧಕವಾದದ್ದು"*– 1 ಪೇತ್ರ 1:23. ಕೆಜೆವಿ ಯಲ್ಲಿ ಭಾಷಾಂತರ ಮಾಡಲಾಗಿರುವ "ತ್ವರಿತ" ಎಂಬ ಗ್ರೀಕ್ ಪದದ ಅರ್ಥ ಕೂಡಲೇ ಕಾರ್ಯ ಮಾಡುವದು ಎಂಬದಲ್ಲ ಬದಲಾಗಿ "ಸಜೀವವಾದದ್ದು" ಎಂಬದಾಗಿದೆ.

*"ಕತ್ತಿ"*– ಎಫೆ 6:17; ಯೆರೆ 23:29 ರೊಂದಿಗೆ ಹೋಲಿಸಿ ನೋಡಿರಿ. **13**

**4:13** *"ಆತನ ದೃಷ್ಟಿಗೆ"*– 2 ಪೂರ್ವ 16:9; ಕೀರ್ತನೆ 14:2; 90:8; 139:1-12; ಯೆರೆ 23:24; ಮತ್ತಾಯ 6:4.

*"ಲೆಕ್ಕ ಒಪ್ಪಿಸಬೇಕು"*– ಮತ್ತಾಯ 12:36; ಅಪೊ 17:31; ರೋಮಾ 14:12; ಪ್ರಕ 22:12. **14**

**4:14** ಬರಹಗಾರನು 2:17 ರಲ್ಲಿ ಪರಿಚಯಪಡಿಸಿದ ವಿಷಯಕ್ಕೆ ಮತ್ತೆ ಹೋಗುತ್ತಾ ಇದ್ದಾನೆ – ಯೇಸು ಕ್ರಿಸ್ತನು ಮಹಾಯಾಜಕನಾಗಿದ್ದಾನೆ. ಆತನು ಬುದ್ಧಿವಾದಗಳು ಮತ್ತು ಎಚ್ಚರಿಕೆಗಳಿಗೆ ಕೆಲವು ವಿರಾಮಗಳನ್ನು ಕೊಡುತ್ತಾ 10:18 ರ ತನಕ ಈ ವಿಷಯದಲ್ಲಿಯೇ ಮುಂದುವರೆಯುತ್ತಿದ್ದಾನೆ.

*"ಶ್ರೇಷ್ಠ ಮಹಾಯಾಜಕನು ನಮಗಿದ್ದಾನೆ"*– ಎಲ್ಲಾ ಕಡೆಗಳಲ್ಲಿರುವ ಮಾನವರಿಗೆ ಯಾಜಕನ ಅವಶ್ಯಕತೆ ಇದೆ ಎಂಬದಾಗಿ ಅನ್ನಿಸುತ್ತದೆ – ತಮಗಿಂತ ದೇವರಿಗೆ ಹತ್ತಿರದಲ್ಲಿರುವವರು ಯಾರೂ ಇದ್ದಾರೆ ಮತ್ತು ನಮ್ಮನ್ನು ದೇವರ ಮುಂದೆ ಪ್ರತಿನಿಧಿಸುವರು ಎಂಬದಾಗಿ ಅವರು ಅಂದುಕೊಳ್ಳುವವರಾಗಿದ್ದಾರೆ. ಭೂಲೋಕದ ಮೇಲಿರುವ ಪ್ರತಿಯೊಂದು ಧರ್ಮದಲ್ಲಿಯೂ ಈ ಆಲೋಚನೆಯು ದೃಢವಾಗಿದೆ. ಯೇಸು ಕ್ರಿಸ್ತನು ಈ ಲೋಕಕ್ಕೆ ಬರುವದಕ್ಕಿಂತ ಮುಂಚೆ ಯೆಹೂದ್ಯರು 1400 ವರ್ಷಗಳ ಕಾಲ ಯಾಜಕರು ಮತ್ತು ಮಹಾಯಜಕರನ್ನು ಹೊಂದಿದ್ದರು. ಆದರೆ ಯೇಸು ಕ್ರಿಸ್ತನ ಹಿಂಬಾಲಕರಿಗೆ ಕಣ್ಣಿಗೆ ಕಾಣುವಂಥ ಮಹಾಯಾಜಕನು ಇಲ್ಲ, ಮತ್ತು ಯೇಸು ಕ್ರಿಸ್ತನನ್ನು ನಂಬದೆ ಇದ್ದ ಯೆಹೂದ್ಯರು, ಭೂಲೋಕದಲ್ಲಿ ಅವರಿಗೆ ಕಣ್ಣಿಗೆ ಕಾಣುವ ಮಹಾಯಾಜಕನು ಯಾರೂ ಇಲ್ಲವಾದ್ದರಿಂದ, ಅವರಿಗೆ ಯಾರೂ ಇಲ್ಲವೇ ಇಲ್ಲ ಎಂಬದಾಗಿ ಅಂದುಕೊಳುತ್ತಿದ್ದರು ಮತ್ತು ಹೇಳುತ್ತಾ ಇದ್ದರು. ಈ ಪತ್ರಿಕೆಯ ಬರಹಗಾರು ತಪ್ಪಾಗಿರುವ ಈ ಹೇಳಿಕೆಯನ್ನು ತಿರಸ್ಕರಿಸುವವನಾಗಿದ್ದಾನೆ. ಯೇಸು ಕ್ರಿಸ್ತನಲ್ಲಿ ವಿಶ್ವಾಸವನ್ನಿಟ್ಟಿರುವವರಿಗೆ ಸಾಧ್ಯವಾದ ಶ್ರೇಷ್ಠ ಮಹಾಯಾಜಕನಿದ್ದಾನೆ – ದೇವಕುಮಾರನಾಗಿರುವ ಆತನೇ ಮಹಾಯಾಜಕನು. ಆತನು ಭೂಲೋಕದಲ್ಲಿ ಇಲ್ಲ ಮತ್ತು ಎಲ್ಲರಿಗೂ ಕಾಣಿಸುವದಿಲ್ಲ ಎಂಬ ವಿಷಯದಿಂದ ಯಾವುದೇ ಅನಾನುಕೂಲತೆ ಇಲ್ಲ-ಇದಕ್ಕೆ ವಿರುದ್ಧವಾದದ್ದಾಗಿದೆ. ಯಾಕಂದರೆ ಆತನು ಆಕಾಶಮಂಡಲವನ್ನು ದಾಟಿ ಉನ್ನತದಲ್ಲಿರುವ ದೇವರ ಪ್ರಸನ್ನತೆಗೆ ಹೋಗಿದ್ದಾನೆ. ಆತನು ಅಲ್ಲಿರುವದರಿಂದ ಭೂಲೋಕದಲ್ಲಿರುವ ಮಹಾಯಾಜಕನು ಜನರನ್ನು ದೇವರೆದುರಿನಲ್ಲಿ ಪ್ರತಿನಿಧಿಸುವದಕ್ಕಿಂತ ಹೆಚ್ಚಾಗಿ ಅವರನ್ನು ಪ್ರತಿನಿಧಿಸುತ್ತಾನೆ. ಈ ಸತ್ಯದ ಅರಿವು ಇಲ್ಲದೆ ಇರುವದರಿಂದ ಜನರು ಎಲ್ಲಾ ಕಡೆಗಳಲ್ಲಿಯೂ ಮಾನವ ಯಾಜಕತ್ವದ ಬಂಧನದೊಳಗೆ ಸಿಕ್ಕಿಕೊಂಡಿದ್ದಾರೆ. ಆದ್ದರಿಂದಲೇ ಬರಹಗಾರನು ಯೇಸು ಕ್ರಿಸ್ತನನ್ನು ಮಹಾಯಾಜಕನನ್ನಾಗಿ ವ್ಯಕ್ತಪಡಿಸಲು ಮತ್ತು ಆತನು ತನ್ನ ಕಾರ್ಯದಲ್ಲಿ ಎಷ್ಟು ಯುಕ್ತವಾಗಿ ಹೊಂದಿಕೊಂಡಿದ್ದಾನೆ ಎಂಬದನ್ನು ತೋರಿಸಲು

ಬಹಳ ಶ್ರಮಪಟ್ಟಿದ್ದಾನೆ.

*"ಹೀಗಿರಲಾಗಿ . . . ನಾವು"*– 3:1; 4:1. ನಾವು ಅಳವಡಿಸಿಕೊಳ್ಳಬೇಕೆಂಬ ಕಾರಣದಿಂದ ದೇವರು ತನ್ನ ಸತ್ಯವನ್ನು ನಮಗೆ ತಿಳಿಸುತ್ತಾನೆ. **15**

**4:15** *"ಅನುತಾಪವಿಲ್ಲದವನಲ್ಲ"*– ದೇವರು ಇಸ್ರಾಯೇಲಿನಲ್ಲಿ ತನ್ನ ಜನರಿಗಾಗಿ ಯಾಜಕತ್ವವನ್ನು ಸ್ಥಾಪಿಸಲು ಇದು ಒಂದು ಕಾರಣವಾಗಿದೆ. ಆದರ್ಶನಾಗಿರುವ ಯಾಜಕನು ತನ್ನ ಜನರ ಬಲಹೀನತೆಗಳು, ದುಃಖಗಳು, ಕಷ್ಟಗಳು ಮತ್ತು ಅವಶ್ಯಕತೆಗಳನ್ನು ಬಲ್ಲವನಾಗಿರುತ್ತಾನೆ ಹಾಗೂ ಅನುತಾಪದಿಂದ ಅವರನ್ನು ದೇವರಿಗೆ ಒಪ್ಪಿಸುತ್ತಾನೆ – 5:1-2; ವಿಮೋ 28:29 ರೊಂದಿಗೆ ಹೋಲಿಸಿ ನೋಡಿರಿ. ಇಸ್ರಾಯೇಲಿನಲ್ಲಿ ಅಥವಾ ಭೂಲೋಕದಲ್ಲಿ ಯಾವುದೇ ಭಾಗದಲ್ಲಿರುವ ಯಾಜಕನಿಗಿಂತಲೂ ಕರ್ತನಾದ ಯೇಸು ಕ್ರಿಸ್ತನು ಈ ಕಾರ್ಯವನ್ನು ಉತ್ತಮವಾಗಿ ಮಾಡುವವನಾಗಿದ್ದಾನೆ.

*"ನಮ್ಮ ನಿರ್ಬಲಾವಸ್ಥೆ"*– ಪ್ರತಿಯೊಬ್ಬರಲ್ಲಿಯೂ ಇವೆಲ್ಲವುಗಳಿಗಿಂತ ಹೆಚ್ಚಿನ ಕಾರ್ಯಗಳು ಇವೆ. ಮತ್ತಾಯ 26:41; ರೋಮಾ 7:18; 8:26; 1 ಕೊರಿಂಥ 2:3; 2 ಕೊರಿಂಥ 12:5,9; ಗಲಾ 5:17.

*"ಶೋಧನೆಗೆ ಗುರಿಯಾದನು"*– 2:18; ಮತ್ತಾಯ 4:1-10. ಆದ್ದರಿಂದ ಆತನು ನಮಗೆ ಕರುಣೆಯನ್ನು ತೋರಿಸುತ್ತಾನೆ. ಭೂಲೋಕದಲ್ಲಿ ಮಾನವರಿಗೆ ಎಲ್ಲಾ ರೀತಿಯ ಶೋಧನೆಗಳನ್ನು ಯೇಸು ಕ್ರಿಸ್ತನು ಎದುರಿಸಿದನು. ಆತನು ನಿಜವಾದ ಮಾಂಸ ಮತ್ತು ರಕ್ತ, ನಿಜವಾದ ಮಾನವ ಸ್ವಭಾವವುಳ್ಳವನಾಗಿದ್ದನು – 2:14. ದೇವರಿಗೆ ಸೇರಿದವರೆಲ್ಲರಿಗೆ ವಿರುದ್ಧವಾಗಿ ಸೈತಾನನು ಹೇಗೆ ಕಾರ್ಯಗಳನ್ನು ಮಾಡುತ್ತಾನೆ ಎಂಬದನ್ನು ಆತನು ಅನುಭವಿದಿಂದ ತಿಳಿದುಕೊಂಡನು. ಆತನು ನಮಗೆ ಮತ್ತು ನಮ್ಮ ನಂಬಿಕೆಗೆ ವಿರುದ್ಧವಾಗಿ ಸೈತಾನನು ತರುವ ಘೋರವಾದ ದುಷ್ಟ ಶಕ್ತಿಗಳನ್ನು ಆತನು ಬಲ್ಲವನಾಗಿದ್ದಾನೆ. ಸೈತಾನನು ಬೀಸುವ ಪ್ರತಿಯೊಂದು ಅಗ್ನಿಬಾಣವನ್ನು ಆತನು ಎದುರಿಸಿದ್ದಾನೆ. ಆದರೂ ಆತನು "ಪಾಪ ಮಾತ್ರ ಮಾಡಲಿಲ್ಲ". ಇದರ ಅರ್ಥ ಆತನು ಎಂದಿಗೂ ಪಾಪ ಮಾಡಲಿಲ್ಲ ಬದಲಾಗಿ ಶೋಧನೆ ಎದುರಾಗುವಾಗಲೆಲ್ಲಾ ಜಯಶೀಲನಾಗುತ್ತಾ ಇದ್ದನು ಎಂಬದಾಗಿದೆ. ಅಥವಾ ಇದ ಅರ್ಥ ಆತನಲ್ಲಿ ಪಾಪದ ಸ್ವಭಾವವು ಇರಲಿಲ್ಲ ಎಂಬದಾಗಿದೆ. ಖಂಡಿತವಾಗಿ, ಎರಡೂ ಸತ್ಯವಾಗಿದೆ (2:17 ರ ನೋಟ್ಸ್ ನೋಡಿರಿ). ಪಾಪದ ಸ್ವಭಾವವೇ ಇಲ್ಲದೆ ಇರುವವರಿಗೆ ಶೋಧನೆಗಳು ಎದುರಾಗುವ ಸಾಧ್ಯತೆಯಿದೆಯೇ? ಖಂಡಿತವಾಗಿಯೂ ಇದೆ. ಆದಿ 3:1-6 ನೋಡಿರಿ. ಹಾಗೆಯೇ 2 ಪೇತ್ರ 2:4; ಯೂದ 6 ಸಹ ನೋಡಿರಿ. ನಿಜವಾಗಿ ಹೇಳುವದಾದರೆ, ಪಾಪವಿಲ್ಲದ ವ್ಯಕ್ತಿ ಶೋಧನೆಗೆ ಒಳಗಾಗದೆ ಇರುವಾಗ ಶೋಧನೆಯ ಶಕ್ತಿಗೆ ಪೂರ್ತಿಯಾಗಿ ಒಳಗಾಗುತ್ತಾನೆ, ಅದು ಪಾಪವಿರುವ ವ್ಯಕ್ತಿ ಒಳಗಾಗುವ ರೀತಿಯಲ್ಲಿಯೇ ಇರುತ್ತದೆ. **16**

**4:16** *"ಕೃಪಾಸನ"*– ದೇವರ ಸಿಂಹಾಸನ ಆತನು ಅದರ ಮೇಲೆ ಕುಳಿತು ಇಡೀ ಲೋಕದ ಮೇಲೆ ಆಳ್ವಿಕೆ ಮಾಡುತ್ತಾನೆ. ನಮ್ಮ ಮಹಾಯಾಜಕನಾಗಿರುವ ಯೇಸು ಕ್ರಿಸ್ತನು ಆತನ ಪಕ್ಕದಲ್ಲಿ ಅದರ ಮೇಲೆ ಕೂತಿದ್ದಾನೆ – 1:3; ಪ್ರಕ 3:21. ನಮ್ಮ ಪಾಪಗಳಿಗಾಗಿ ಆತನು ಅರ್ಪಿಸಿರುವ ಯಜ್ಞದಿಂದ ಈಗ ಕೃಪೆಯು ಆಳ್ವಿಕೆ ಮಾಡುತ್ತಲಿದೆ. ರೋಮಾ 5:21; 6:14 ನೋಡಿರಿ. ನಮಗೆ ಬೇಕಾಗಿರುವ ಎಲ್ಲವುಗಳಿಗಾಗಿ ನಾವು ದೇವರ ಬಳಿಗೆ ಹೋಗಬೇಕೆಂದು ಆತನು ತಾನೇ ನಮಗೆ ಹೇಳಿದ್ದಾನೆ – ಮತ್ತಾಯ 6:9-13; 7:7-10; ಯೋಹಾನ 16:23-24. ಕರುಣೆ ಮತ್ತು ಕೃಪೆ ನಮಗಿರುವ ದೊಡ್ಡ ಅವಶ್ಯಕತೆಗಳಾಗಿವೆ. ಪಾಪವನ್ನು ಎದುರಿಸಲು ಮತ್ತು ಒಂದುವೇಳೆ ಪಾಪಕ್ಕೆ ಒಳಗಾಗಿದ್ದರೆ ಕ್ಷಮಾಪಣೆ ಹೊಂದಲು ನಾವು ದೃಢವಾಗಿರಬೇಕು. ಕೃಪೆ ನಮಗೆ ಕೊಡುವ ಬಲ ನಮ್ಮಲ್ಲಿರಬೇಕು ಮತ್ತು ನಾವು ನಮ್ಮ ಬಲಹೀನತೆಗಳಿಂದ ಸೋತುಹೋಗುವಾಗ ನಮಗೆ ದಯೆ ಹಾಗೂ ಕರುಣೆ ಬೇಕು. ನಾವು ಇಡೀ ಲೋಕದ ಸಿಂಹಾಸನದೆದುರಿಗೆ ಬರುವದರಿಂದ, ನಮಗೆ ಬೇಕಾಗಿರುವದನ್ನು ದೇವರು ಕೊಡುವದರಿಂದ ಯಾವ ಶಕ್ತಿಯೂ ಅದನ್ನು ತಡೆಯಲಾರದು ಎಂಬ ದೃಢತೆ ನಮಗಿರಬೇಕು. ಅದು ಕೃಪೆಯ ಸಿಂಹಾಸನವಾಗಿರುವದರಿಂದ ನಮಗೆ ಬೇಕಾಗಿರುವದನ್ನು ಆತನು ಕೊಡುತ್ತಾನೆ ಎಂಬದು ನಮಗೆ ಗೊತ್ತಿದೆ (ಫಿಲಿಪ್ಪಿ 4:19 ರೊಂದಿಗೆ ಹೋಲಿಸಿ ನೋಡಿರಿ). ಆತ್ಮವಿಶ್ವಾಸದೊಂದಿಗೆ ನಮ್ಮನ್ನು ಪ್ರೇರೇಪಿಸಲು ಮತ್ತು ನಂಬಿಕೆಯಿಂದ ಆತನ ಬಳಿಗೆ ಬರಲು ನಮಗೆ ಇನ್ನು ಎಷ್ಟು ಸತ್ಯ ಬೇಕು?

# 5 1-10

**5:1-10** ಯೇಸು ಕ್ರಿಸ್ತನು ಮಹಾಯಾಜಕನಾಗಿದ್ದಾನೆಂಬ ವಿಷಯವನ್ನು ಆತನು ಮುಂದುವರೆಸುತ್ತಾ ಇದ್ದಾನೆ. 1-4 ವಚನಗಳು ಇಸ್ರಾಯೇಲ್ಯರ ನಡುವೆಯಿರುವ ಒಳ್ಳೆಯ ಮಹಾಯಾಜಕನ ಅರ್ಹತೆಗಳನ್ನು ತಿಳಿಸುತ್ತವೆ. 5-10 ವಚನಗಳು ಯೇಸು ಕ್ರಿಸ್ತನಲ್ಲಿ ಈ ಅರ್ಹತೆಗಳಿವೆ ಎಂದು ತೋರಿಸುತ್ತವೆ. **1**

**5:1** *"ಪ್ರತಿಯೊಬ್ಬ"*– ಮೋಶೆ ಮತ್ತು ಯೇಸು ಕ್ರಿಸ್ತನ ನಡುವೆಯ ಸಮಯದಲ್ಲಿ ಇಸ್ರಾಯೇಲ್ಯರಲ್ಲಿದ್ದ ಧಾರ್ಮಿಕ ಪದ್ಧತಿಯನ್ನು ಆತನು ಸೂಚಿಸುತ್ತಾ ಇದ್ದಾನೆ. **2**

**5:2** *"ಜ್ಞಾನವಿಲ್ಲದವರು"*– ಯಾಜಕ 4:2; 5:17; ಸಂಖ್ಯಾ 15:28. ಯಾಜಕನು ಅಂಥ ಪ್ರಕರಣಗಳಲ್ಲಿ ಬುದ್ಧಿವಂತಿಕೆಯಿಂದ ನಡೆದುಕೊಳ್ಳುತ್ತಿದ್ದನು. ಆದರೆ ಬೇಕೆಂದು ಅಹಂಕಾರದಿಂದ ಪಾಪ ಮಾಡುತ್ತಾ ಇದ್ದರಿಂದ ಶಿಕ್ಷೆ ಘೋರವಾಗಿರುತ್ತಾ ಇತ್ತು – 2:2; ಸಂಖ್ಯಾ 15:30-36. **3**

**5:3** *"ತನಗೋಸ್ಕರ ಪಾಪನಿವಾರಣಾರ್ಥವಾದ ಯಜ್ಞಗಳು"*– ಯಾಜಕ 16:3-6. ಇತರರ ಹಾಗೆ ಇಸ್ರಾಯೇಲಿನ ಮಹಾಯಾಜಕನು ದುರ್ಬಲನಾಗಿದ್ದನು ಮತ್ತು ಪಾಪದ ಕಾರ್ಯಗಳಿಗೆ

ಒಳಗಾಗುವವನಾಗಿದ್ದನು. ಮೊದಲನೆಯ ಮಹಾಯಾಜಕನಾದ ಆರೋನನ ಬಲಹೀನತೆಯನ್ನು ವಿಮೋಚನಕಾಂಡ 32 ನೇ ಅಧ್ಯಾಯದಲ್ಲಿ ನೋಡಿರಿ.

*"ಜನರಿಗೋಸ್ಕರ"*– ಯಾಜಕ 16:15-16,32-34. **4**

**- 5:4** ವಿಮೋ 28:1. **5**

**- 5:5** 1:5; ಕೀರ್ತನೆ 2:7. **6**

**5:6** ವಚನ 10; 6:20; 7:17. ಕೀರ್ತನೆ 110:4 ನೋಡಿರಿ. ಕೀರ್ತ 110 ಯೇಸು ಕ್ರಿಸ್ತನ ಕುರಿತಾದ ಪ್ರವಾದನೆಯಾಗಿದೆ, 5 ನೇ ವಚನದ "ಮಗನು". ತಂದೆಯಾದ ದೇವರು ಆರೋನನನ್ನು ನೇಮಿಸಿದ ಹಾಗೆ ಆತನನ್ನು ಮಹಾಯಾಜಕನನ್ನಾಗಿ ನೇಮಿಸಿದನು.

*"ಮೆಲ್ಕಿಜೆದೇಕನು"*– 7 ನೇ ಅಧ್ಯಾಯದ ನೋಟ್ಸ್ ನೋಡಿರಿ. **7-9**

**5:7-9** ಮಹಾಯಾಜಕನಿಗಿರಬೇಕಾದ ಇತರೆ ಗುಣಗಳೂ ಯೇಸು ಕ್ರಿಸ್ತನಲ್ಲಿದ್ದವು ಎಂಬದನ್ನು ಬರಹಗಾರನು ತೋರಿಸುತ್ತಾ ಇದ್ದಾನೆ ಅದೇನೆಂದರೆ – ಜನರಿಗೆ "ಕರುಣೆಯನ್ನು ತೋರಿಸುವ" ಸಾಮರ್ಥ್ಯ. ಆತನು ಭೂಲೋಕದಲ್ಲಿ ಅನುಭವಿಸಿದ ಶ್ರಮೆಗಳ ನಿಮಿತ್ತ ಈ ಸಾಮರ್ಥ್ಯವು ಸಿದ್ಧಿಗೆ ಬಂದಿತು. ಆತನು ಈ ಪತ್ರಿಕೆಯ ಇತರೆ ಭಾಗಗಳಲ್ಲಿ ಯೇಸು ಕ್ರಿಸ್ತನು ಮಹಾಯಾಜಕನಾಗಿ, ಜನರನ್ನು ದೇವರ ಎದುರಿನಲ್ಲಿ ಪ್ರತಿನಿಧಿಸುತ್ತಾ (ವ 1; 7:25; 9:24) ಮತ್ತು ಪಾಪಗಳಿಗಾಗಿ ಯಜ್ಞವನ್ನು ಅರ್ಪಿಸುತ್ತಾ (7:27; 8:3; 9:11-12; 10:28; 10:10,14) ತನ್ನ ಜವಾಬ್ದಾರಿಕೆಗಳನ್ನು ಹೇಗೆ ನಿಭಾಯಿಸಿದನು ಎಂಬದನ್ನು ತೋರಿಸಿದ್ದಾನೆ. **7**

**5:7** *"ಪ್ರಾರ್ಥನೆ ವಿಜ್ಞಾಪನೆಗಳು"*– ಕರ್ತನಾದ ಯೇಸು ಕ್ರಿಸ್ತನು ಭೂಲೋಕದಲ್ಲಿರುವಾಗ ಪ್ರಾರ್ಥನೆಯ ವ್ಯಕ್ತಿಯಾಗಿದ್ದನು (ಮತ್ತಾಯ 14:23; ಲೂಕ 5:16). ಆದರೆ ಬರಹಗಾರನು ಇಲ್ಲಿ ಆತನು ಮರಣವನ್ನು ಎದುರಿಸುತ್ತಾ ಇದ್ದ ನಿರ್ದಿಷ್ಟವಾದ ಸಮಯವನ್ನು ಸೂಚಿಸುತ್ತಾ ಇದ್ದಾನೆ ಅನ್ನಿಸುತ್ತದೆ. ಆತನು ಬಹುತೇಕ ಯೇಸು ಕ್ರಿಸ್ತನು ಗೆತ್ಸೇಮನೆ ತೋಟದಲ್ಲಿ ಕಳೆದ ಸಮಯವನ್ನು ಸೂಚಿಸುತ್ತಾ ಇದ್ದಾನೆ ಅನ್ನಿಸುತ್ತದೆ (ಮತ್ತಾಯ 26:36-46; ಮಾರ್ಕ 14:32-42; ಲೂಕ 22:39-46). ಆತನು ಅಲ್ಲಿ ಮರಣದ ಅಂಚಿಗೆ ಬಂದದ್ದರಿಂದ ದುಃಖದಿಂದ ತುಂಬಿದ್ದನು. ಆತನು ಬಹಳ ವೇದನೆಯಲ್ಲಿದ್ದನು ಮತ್ತು ಆತನ ಬೆವರು ರಕ್ತದ ಹನಿಗಳಂತಿದ್ದವು. ಮತ್ತು ದೇವರು ಆತನನ್ನು ಬಲಪಡಿಸಲು ದೇವದೂತನನ್ನು ಕಳುಹಿಸಿದನು. ಇವೆಲ್ಲವೂ ಶೋಧನೆಯ ಘೋರವಾದ ಸಮಯ ಮತ್ತು ಶಾರೀರಿಕ ಬಲಹೀನತೆಯ ಅನುಭವದ ಬಗ್ಗೆ ಮಾತನಾಡುತ್ತವೆ (2 ಕೊರಿಂಥ 13:4 ರೊಂದಿಗೆ ಹೋಲಿಸಿ ನೋಡಿರಿ). ಇದಲ್ಲದೆ ಆತನು ಗಟ್ಟಿಯಾಗಿ ಕೂಗುತ್ತಾ ಕಣ್ಣೀರಿಡುತ್ತಾ ಇದ್ದನು.

*"ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನು"*– ಸೈತಾನನು ಯೇಸು ಕ್ರಿಸ್ತನನ್ನು ಗೆತ್ಸೇಮನೆ ತೋಟದಲ್ಲಿ ಕೊಲ್ಲಲು ಪ್ರಯತ್ನಿಸುತ್ತಿದ್ದನು ಆದರೆ ಯೇಸು ಕ್ರಿಸ್ತನು ತನ್ನನ್ನು

ಅಲ್ಲಿಂದ ಬಿಡಿಸುವಂತೆ ಮತ್ತು ಪಾಪ ಪರಿಹಾರಕ ಯಜ್ಞವಾಗಿ ಶಿಲುಬೆಯ ಮೇಲೆ ಪ್ರಾಣ ಕೊಡಲು ಬಲಪಡಿಸುವಂತೆ ಪ್ರಾರ್ಥಿಸುತ್ತಿದ್ದನು ಎಂದು ಕೆಲವು ವ್ಯಾಖ್ಯಾನಕಾರರು ಹೇಳುತ್ತಾರೆ. ಆದರೆ ಸತ್ಯವೇದದಲ್ಲಿ ಇಂಥ ಯಾವ ಬೋಧನೆಯೂ ಇಲ್ಲ. ಇನ್ನು ಕೆಲವರಂತೂ ಆತನನ್ನು ತನ್ನನ್ನು ಶಿಲುಬೆಯ ಮರಣದಿಂದ ತಪ್ಪಿಸುವಂತೆ ಪ್ರಾರ್ಥನೆ ಮಾಡುತ್ತಾ ಇದ್ದನು ಎಂಬದಾಗಿ ಹೇಳುತ್ತಾರೆ. ಇದು ಸತ್ಯವಲ್ಲ. ತಾನು ತನ್ನ ಪ್ರಾಣ ಕೊಡುವ ಉದ್ದೇಶಕ್ಕಾಗಿಯೇ ಬಂದಿರುವದು ಎಂಬದು ಆತನಿಗೆ ಚೆನ್ನಾಗಿ ತಿಳಿದಿತ್ತು (ಮತ್ತಾಯ 20:28; ಯೋಹಾನ 10:17-18). ಈ ಕಾರ್ಯಕ್ಕಾಗಿ ಆತನನ್ನು ತನ್ನನ್ನು ದೇವರಿಗೆ ಸಮರ್ಪಿಸಿದನು (ಮತ್ತಾಯ 16:21; ಯೋಹಾನ 12:27-28). ಇದಲ್ಲದೆ ಬರಹಗಾರನು ಹೇಳಿರುವದೇನೆಂದರೆ ಯೇಸು ಕ್ರಿಸ್ತನ ಪ್ರಾರ್ಥನೆಯು "ಕೇಳಲ್ಪಟ್ಟಿತು"– ಅಂದರೆ, ಆತನ ಪ್ರಾರ್ಥನೆಗೆ ಉತ್ತರ ಸಿಕ್ಕಿತು. ಇದಲ್ಲದೆ ಶಿಲುಬೆಯ ಮರಣದಿಂದ ಆತನು ತಪ್ಪಿಸಿಕೊಳ್ಳಲಿಲ್ಲ ಎಂಬದು ನಮ್ಮೆಲ್ಲರಿಗೂ ತಿಳಿದದೆ, ಆದ್ದರಿಂದ ಆತನು ಅದಕ್ಕಾಗಿ ಪ್ರಾರ್ಥನೆ ಮಾಡಲಿಲ್ಲ. ಅತ್ಯಂತ ಯುಕ್ತವಾದ ವಿವರಣೆ ಏನೆಂದರೆ: ಯೇಸು ಕ್ರಿಸ್ತನು ತಂದೆಯಾದ ದೇವರಿಗೆ ತಾನು ಸತ್ತ ನಂತರ ತನ್ನನ್ನು ಮರಣದ ರಂಗದಿಂದ ಬಿಡಿಸುವಂತೆ, ಅಂದರೆ ಮರಣವು ಆತನನ್ನು ಹಿಡಿದಿಟ್ಟುಕೊಳ್ಳದಂತೆ ಪ್ರಾರ್ಥನೆ ಮಾಡಿದನು (ಅಪೊ 2:24); ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರು ಆತನನ್ನು ಮರಣದಿಂದ ಎಬ್ಬಿಸುವಂತೆ ಪ್ರಾರ್ಥನೆ ಮಾಡಿದನು. ಕೀರ್ತನೆ 22:15-21 ರೊಂದಿಗೆ ಹೋಲಿಸಿ ನೋಡಿರಿ (19-21 ವಚನಗಳು ಆತನು ಪುನರುತ್ಥಾನಕ್ಕೆ ಮಾಡಿದ ಪ್ರಾರ್ಥನೆ ಎಂದು ತೋರುತ್ತವೆ). ಆದರೆ ಆತನಿಗೆ ದೇವರು ಆತನನ್ನು ಎಬ್ಬಿಸುವನೆಂದು ಗೊತ್ತಿರಲಿಲ್ಲವೇ? ಅದರ ವಿಷಯದಲ್ಲಿ ಆತನು ಯಾಕೆ ಪ್ರಾರ್ಥನೆ ಮಾಡಿದನು? ದೇವರು ಆತನನ್ನು ಎಬ್ಬಿಸುವಂತೆ ಪ್ರಾರ್ಥನೆ ಮಾಡಿದನು ಎಂಬದು ಆತನಿಗೆ ತಿಳಿದಿತ್ತು (ಕೀರ್ತನೆ 16:10). ಆದರೆ ಇದು ಪ್ರಾರ್ಥನೆಯಲ್ಲಿ ಅತ್ಯಂತ ಪ್ರಾಮುಖ್ಯವಾಗಿರುವ ವಿಷಯಗಳಲ್ಲಿ ಒಂದಾಗಿದೆ – ತನ್ನ ವಾಗ್ದಾನಗಳನ್ನು ನೆರವೇರಿಸುವಂತೆ ದೇವರನ್ನು ಬೇಡಿಕೊಳ್ಳುವದು (ಯೋಹಾನ 17; ದಾನಿ 10:2-19 ರೊಂದಿಗೆ ಹೋಲಿಸಿ ನೋಡಿರಿ). ಮತ್ತು 2 ಕೊರಿಂಥ 5:21 ರ ಭೀಕರವಾದ ಅನುಭವದಿಂದ ಕೂಡಿದ "ಪಾತ್ರೆಯನ್ನು" (ಮತ್ತಾಯ 26:39) ಮತ್ತು ತನ್ನ ಮೇಲೆ ಬರಲಿಕ್ಕಿದ್ದ ಕತ್ತಲೆಯ ಸಮಯವನ್ನು (ಲೂಕ 22:53) ಎದುರುಗೊಳ್ಳಬೇಕಾದ್ದರಿಂದ, ಯೇಸು ಕ್ರಿಸ್ತನು ವೇದನೆಗೊಳಗಾಗಿ ಕಣ್ಣೀರಿನಿಂದ ಪ್ರಾರ್ಥನೆ ಮಾಡಿದನು. ಮತ್ತು ದೇವರು ಆತನ ಪ್ರಾರ್ಥನೆಯನ್ನು ಕೇಳಿದನು (ಮತ್ತಾಯ 28:6). ಇದಕ್ಕೆ ಕಾರಣ ಆತನ "ಭಕ್ತಿ" ಅಥವಾ "ಭಯವಾಗಿದೆ" (ಇದನ್ನು ಈ ರೀತಿಯಾಗಿ ಭಾಷಾಂತರ ಮಾಡಬಹುದಾಗಿದೆ, ಇದರ ಅರ್ಥ ದೇವರಲ್ಲಿ ಭಯಭಕ್ತಿಯುಳ್ಳವನಾಗಿರುವದು – ಯೆಶಾಯ 11:2; ಆದಿ 20:11; ಕೀರ್ತನೆ 34:11-14; 111:10; ಜ್ಞಾನೋ 1:7 ರ ನೋಟ್ಸ್ ನೋಡಿರಿ). **8**

**5:8** *"ವಿಧೇಯತೆಯ ಅರ್ಥವನ್ನು ಕಲಿತುಕೊಂಡನು"*– ಇದರ ಅರ್ಥ ಆತನು ಒಂದು ಕಾಲದಲ್ಲಿ ಅವಿಧೇಯನಾಗಿದ್ದನು ಆದರೆ ಕ್ರಮೇಣವಾಗಿ ವಿಧೇಯತೆಯನ್ನು ಕಲಿತುಕೊಂಡನು ಎಂಬದಲ್ಲ. ಅವಿಧೇಯತೆಯು ಪಾಪವಾಗಿದೆ ಮತ್ತು ಆತನು ಒಮ್ಮೆಯೂ ಅವಿಧೇಯನಾಗಲಿಲ್ಲ (ಯೋಹಾನ 4:34; 6:38; 8:29; ಫಿಲಿಪ್ಪಿ 2:6-8; 1 ಪೇತ್ರ 2:21-22). ಆದರೆ ಆತನು ನಿಜವಾದ ಅನುಭವದ ಮೂಲಕ ವಿಧೇಯತೆ, ಸ್ವ-ನಿರಾಕರಣೆ ಮತ್ತು ಶೋಧನೆ ಹಾಗೂ ಶ್ರಮೆಗಳು ಅಂದರೆ ಏನು ಎಂಬದನ್ನು ಕಲಿತುಕೊಂಡನು. ಮತ್ತು "ಪಾತ್ರೆಯೊಂದಿಗೆ"(ಮತ್ತಾಯ 26:39) ಮುಖಾಮುಖಿಯಾಗಿ ವಿಧೇಯತೆ ಸುಲಭವಲ್ಲ ಎಂಬದನ್ನು ಅನುಭವದಿಂದ ಆತನು ಕಲಿತುಕೊಂಡನು. **9**

**5:9** *"ಸಿದ್ಧಿಗೆ ಬಂದನು"*– ಆತನ ಸ್ವಭಾವದಲ್ಲಿ ಏನೋ ದೋಷವಿತ್ತು ಅದನ್ನು ಸರಿಪಡಿಸಬೇಕಾಯಿತು ಎಂಬದು ಇದರ ಅರ್ಥವಲ್ಲ. 2:10 ರ ನೋಟ್ಸ್ ನೋಡಿರಿ. ನಮ್ಮ ಮಹಾಯಾಜಕನಾಗಲು ಸೂಕ್ತವಾಗಿ ಹೊಂದಿಕೊಳ್ಳುವ ಸಲುವಾಗಿ ದೇವರು ಆತನನ್ನು ಶ್ರಮೆಗಳಿಗೆ ಒಳಪಡಿಸಿದನು. ಈ ವಿಧಾನವಿಲ್ಲದೆ ಹೋಗಿದ್ದರೆ ಆತನು ನಮಗೆ ಅವಶ್ಯವಿರುವ ಹಾಗೆ ಪರಿಪೂರ್ಣನಾಗಿರಲು ಆಗುತ್ತಾ ಇರಲಿಲ್ಲ.

*"ತನಗೆ ವಿಧೇಯರಾಗುವವರೆಲ್ಲರಿಗೆ"*– ಈ ವಾಕ್ಯ (ಮತ್ತು ಇದಕ್ಕೆ ಸಮಾನವಾಗಿರುವ ವಾಕ್ಯಗಳಾದ ಯೋಹಾನ 3:36; ಅಪೊ 5:32; 2 ಥೆಸ 1:8 ರ ಬೆಳಕಿನಲ್ಲಿ) ಕರ್ತನಾದ ಯೇಸು ಕ್ರಿಸ್ತನಿಗೆ ವಿಧೇಯನಾಗಲು ನಿರಾಕರಿಸುವವನಿಗೆ ರಕ್ಷಣೆ ದೊರೆಯುವದೆಂದು ನಾವು ಯೋಚಿಸಲು ಸಾಧ್ಯವೇ? ರಕ್ಷಣೆಯು ಕ್ರಿಯೆಗಳಿಂದ ದೊರೆಯುವದಿಲ್ಲ ಬದಲಾಗಿ ಪೌಲನು ಕರೆದಿರುವ ವಿಧೇಯತೆಯ ನಂಬಿಕೆಯಿಂದ (ರೋಮಾ 1:5) ದೊರೆಯುತ್ತದೆ ಎಂಬದು ಇದರ ಅರ್ಥವಲ್ಲ. ಕೃಪೆ ನಮಗೆ ವಿಧೇಯರಾಗಲು ಬೇಕಾದ ನಂಬಿಕೆ ಹಾಗೂ ಹೃದಯವನ್ನು ಕೊಡುತ್ತದೆ (ಎಫೆ 2:8-9). ಅಪೊ 22:10 ರ ನೋಟ್ಸ್ ನೋಡಿರಿ. **11-14**

**5:11-14** ಬರಹಗಾರನು ಮತ್ತೊಂದು ಬುದ್ಧಿಮಾತು ಮತ್ತು ಎಚ್ಚರಿಕೆಯನ್ನು ಪ್ರಾರಂಭಿಸುತ್ತಾ ಇದ್ದಾನೆ ಅದು 6:12 ರಲ್ಲಿ ಕೊನೆಗೊಳ್ಳುತ್ತದೆ. ಇದು ಹಿಂಜಾರುವದರ ವಿರುದ್ಧ ಕೊಡಲಾಗಿರುವ ಎಚ್ಚರಿಕೆಯಾಗಿದೆ (6:6). ಆತನು ಕೆಲವು ಇಬ್ರಿಯ ಕ್ರೈಸ್ತರ ಕ್ರೈಸ್ತೀಯ ಜೀವಿತದಲ್ಲಿ ಬೆಳವಣಿಗೆ ಆಗದೆ ಇರುವದನ್ನು ಗಮನಿಸಿ ಈ ಎಚ್ಚರಿಕೆಯನ್ನು ಕೊಟ್ಟಿದ್ದಾನೆ. **12-14**

**5:12-14** ಇದು ನಿಸ್ಸಂದೇಹವಾಗಿ ಇಂದು ಬಹುತೇಕ ಸಭಾಪಾಲಕ, ಬೋಧಕ ಮತ್ತು ಸೌವಾರ್ತಿಕ ಮಾಡುವ ಆರೋಪವಾಗಿದೆ. ಅನೇಕ ಕ್ರೈಸ್ತರು, ಹಲವಾರು ವರ್ಷಗಳಿಂದ ಕ್ರೈಸ್ತರಾಗಿದ್ದರೂ ಈಗಲೂ ಹಾಲನ್ನು ಬಯಸುವವರಾಗಿದ್ದಾರೆ ಮತ್ತು ಹಾಲು ಕುಡಿಯಲು ಮಾತ್ರವೇ ಶಕ್ತರಾಗಿದ್ದಾರೆ, ಅಂದರೆ, ಸುವಾರ್ತೆಯ ಕುರಿತಾಗಿರುವ ಸರಳವಾದ ಸತ್ಯಗಳನ್ನು ಬಯಸುವವರಾಗಿದ್ದಾರೆ. ಅವರು ಸುವಾರ್ತಾ ಕೂಟಗಳಲ್ಲಿ ಭಾಗಿಯಾಗುತ್ತಾರೆ ಮತ್ತು

ಸತ್ಯವೇದ ಅಧ್ಯಯನದ ಕೂಟಗಳಿಂದ ದೂರ ಉಳಿಯುತ್ತಾರೆ. ಇದಲ್ಲದೆ ಪ್ರಾಥಮಿಕ ಸತ್ಯಗಳೂ ಅವರಿಂದ ಜಾರಿರುವ ಹಾಗೆ ಅನ್ನಿಸುತ್ತವೆ ಆದ್ದರಿಂದ ಅವುಗಳನ್ನು ಅವರಿಗೆ ಮತ್ತೆ ಕಲಿಸುವ ಅವಶ್ಯಕತೆ ಇಲ್ಲ. **12**

**5:12** *"ಗಟ್ಟಿಯಾದ ಆಹಾರ"*– ಅಂದರೆ ಯೇಸು ಕ್ರಿಸ್ತನು ಮಹಾಯಾಜಕನಾಗಿದ್ದಾನೆ ಮತ್ತು ಆತನಿಗೆ ಸಂಬಂಧಿಸಿದ ಇತರೆ ಸಿದ್ಧಾಂತಗಳ ವಿಷಯವಾಗಿರುವ ಗಂಭೀರವಾದ ಬೋಧನೆಗಳು. ದೇವರ ವಾಕ್ಯಗಳ ಆಳವಾದ ಸತ್ಯಗಳನ್ನು ತಿಳಿಯಲು ನಿರಾಕರಿಸುವದು ಪರಿಪಕ್ವತೆಯಿಲ್ಲದೆ ಇರುವದನ್ನು ಪ್ರಕಟಿಸುತ್ತದೆ. ಹಾಗೆಯೇ 1 ಕೊರಿಂಥ 3:1-4 ನೋಡಿರಿ. **13**

**5:13** *"ಬೋಧನೆಯಲ್ಲಿ ಅನುಭವ ಇಲ್ಲದೆ ಇರುವದು"*– ಆತ್ಮೀಕ ಜೀವಿತದಲ್ಲಿ ಕೂಸಿನಂತಿರುವವರು ನೀತಿಯ ಕುರಿತಾದ ಬೋಧನೆಯನ್ನು ಕೇಳುತ್ತಾರೆ, ಆದರೆ ಅದನ್ನು ತಮ್ಮ ಜೀವಿತಗಳಿಗೆ ಅಳವಡಿಸಿಕೊಳ್ಳಲು ಬೇಕಾದ ಕೌಶಲ್ಯ ಅಥವಾ ಅನುಭವ ಅವರಿಗೆ ಇರುವದಿಲ್ಲ.

*"ನೀತಿವಾಕ್ಯ"*– ಇದು ಸಹ 12 ನೇ ವಚನದ ಗಟ್ಟಿಯಾದ ಆಹಾರದ ಅರ್ಥವನ್ನೇ ಕೊಡುತ್ತದೆ. ಪೌಲನು ಪರಿಪಕ್ವತೆಯುಳ್ಳ ವಿಶ್ವಾಸಿಗಳಿಗೆ ಕಲಿಸಿದ "ಜ್ಞಾನದ" ಅರ್ಥವನ್ನೇ ಇದು ಕೊಡುತ್ತದೆ (1 ಕೊರಿಂಥ 2:6-10). **14**

**5:14** *"ಪ್ರಾಯಸ್ಥರು"*– ಆತ್ಮೀಕ ತಿಳುವಳಿಕೆ ಮತ್ತು ದೇವರ ವಾಕ್ಯಗಳ ಅಭ್ಯಾಸಗಳಲ್ಲಿ ದೃಢವಾಗಿ ಬೆಳೆದಿರುವವರು. ಕೆಲವೊಮ್ಮೆ ಕೆಟ್ಟದ್ದು ಮತ್ತು ಒಳ್ಳೆಯದು ಹಾಗೂ ಸರಿ ಮತ್ತು ತಪ್ಪುಗಳ ನಡುವೆಯಿರುವ ವ್ಯತ್ಯಾಸವನ್ನು ಕಂಡುಹಿಡಿಯುವದು ಕಷ್ಟವಾಗಿರುತ್ತದೆ. ಅದಕ್ಕೆ ಸರಿಯಾದ "ತರಬೇತಿ"ಇರಬೇಕು, ದೇವರ ವಾಕ್ಯದಲ್ಲಿರುವ ಆಳವಾದ ಅರ್ಥವನ್ನು ಕಲಿಯಲು ಪರಿಶ್ರಮ ಬೇಕು ಮತ್ತು ಅವುಗಳನ್ನು ನಮಗೆದುರಾಗುವ ಪರಿಸ್ಥಿತಿಗಳಿಗೆ ಅಳವಡಿಸಿಕೊಳ್ಳುವ ಸಾಮರ್ಥ್ಯಬೇಕು. ಇದರ ಅರ್ಥ ಸತತ ಪರಿಶ್ರಮ, ಅಧ್ಯಯನ ಹಾಗೂ ಕ್ರಮಶಿಕ್ಷಣ. ಆತ್ಮೀಕವಾಗಿ ಕೂಸುಗಳಾಗಿರುವವರು, ಆತ್ಮೀಕವಾಗಿ ಬೆಳವಣಿಗೆ ಸಾಧಿಸಲು ಕಡಿಮೆ ಸಮಯ ಹಾಗೂ ಅವಕಾಶಗಳನ್ನು ಹೊಂದಿರುತ್ತಾರೆ ಅಥವಾ ಅವರು ದೇವರ ವಿಷಯಗಳಲ್ಲಿ ಬೆಳೆಯಲು ಯಾವುದೇ ಪರಿಶ್ರಮಗಳನ್ನು ಹಾಕದವರಾಗಿರುತ್ತಾರೆ.

# 6 1

**6:1** *"ಪರಿಪೂರ್ಣತೆ"*– ಅಥವಾ "ಪರಿಪಕ್ವತೆ" ಅಥವಾ "ಪೂರ್ಣ ಬೆಳವಣಿಗೆ" – 5:14; ಎಫೆ 4:13-15.

*"ಅಸ್ತಿವಾರ"*– ಅಸ್ತಿವಾರ ಎಂದರೆ ಏನು ಎಂಬದು ಸಂಪೂರ್ಣವಾಗಿ ಸ್ಪಷ್ಟವಾಗಿಲ್ಲ. ಆತನು ಕ್ರೈಸ್ತರಾಗಿರುವ ಯೆಹೂದ್ಯರಿಗೆ ಬರೆಯುತ್ತಾ ಇದ್ದಾನೆ. ಆತನು ಬಹುಶಃ ಅವರು

ಯೆಹೂದ್ಯರಾಗಿದ್ದಾಗ ಹೊಂದಿಕೊಂಡಿದ್ದ ಹಳೆ ಒಡಂಬಡಿಕೆಯ ಅಸ್ತಿವಾರದ ಬಗ್ಗೆ ಮಾತನಾಡುತ್ತಾ ಇರಬಹುದು. ಅಥವಾ ಹೊಸ ಒಡಂಬಡಿಕೆಯ ಯುಗಕ್ಕಾಗಿ ಅಪೊಸ್ತಲರು ಹಾಕಿರುವ ಹೊಸ ಅಸ್ತಿವಾರದ ಬಗ್ಗೆ ಮಾತನಾಡುತ್ತಾ ಇರಬಹುದು. ಆತನ ಮಾತಿನ ಅರ್ಥ ಸಂದೇಹವುಳ್ಳದ್ದಾಗಿದೆ ಯಾಕಂದರೆ ಆತನು ಇಲ್ಲಿ ತಿಳಿಯಪಡಿಸಿರುವ ಆರು ವಿಷಯಗಳಲ್ಲಿ ಒಂದು ಸಹ ಯುಕ್ತವಾಗಿ ಕ್ರೈಸ್ತೀಯವಲ್ಲ; ಎಲ್ಲವೂ ಹಳೆಯ ಒಡಂಬಡಿಕೆಯಲ್ಲಿ ಹಾಕಲಾಗಿರುವ ಅಸ್ತಿವಾರಕ್ಕೆ ಸುಲಭವಾಗಿ ಹೊಂದಿಕೊಳ್ಳುವವುಗಳಾಗಿವೆ.

"*ಪಶ್ಚಾತ್ತಾಪ . . . ದೇವರಲ್ಲಿ ನಂಬಿಕೆ*"– ಬರಹಗಾರನು "ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದು" ಎಂಬದಾಗಿ ಬರೆಯದಿರುವದನ್ನು ಗಮನಿಸಿರಿ. ಒಂದುವೇಳೆ ನಾವು ಕ್ರೈಸ್ತೀಯ ಅಸ್ತಿವಾರದ ಬಗ್ಗೆ ಮಾತನಾಡುತ್ತಾ ಇರುವದಾದರೆ ಇದನ್ನು ತಿಳಿಸಲಾಗಿರುವ ರೀತಿ ಬಹಳ ಅಪರಿಚಿತವೆನಿಸುತ್ತದೆ (ಮತ್ತಾಯ 3:3 ರಲ್ಲಿ ಪಶ್ಚಾತ್ತಾಪದ ಕುರಿತಾದ ನೋಟ್ಸ್ ನೋಡಿರಿ). **2**

**6:2** "*ದೀಕ್ಷಾಸ್ನಾನಗಳು* – ಬಹುವಚನವನ್ನು ಗಮನಿಸಿರಿ. ಒಂದುವೇಳೆ ಆತನು ಕ್ರೈಸ್ತೀಯ ದೀಕ್ಷಾಸ್ನಾನವನ್ನು ಸೂಚಿಸುತ್ತಾ ಇರುವದಾದರೆ ಏಕವಚನವನ್ನು ಉಪಯೋಗಿಸುತ್ತಾ ಇದ್ದನಲ್ಲವೇ? ಎಫೆ 4:5 ನೋಡಿರಿ. "ಶುಚಿಮಾಡಿಕೊಳ್ಳುವದು" ಇಲ್ಲಿ ಯುಕ್ತವಾದ ಮತ್ತು ಉತ್ತಮವಾದ ಭಾಷಾಂತರವಾಗಿರುವದು ಎಂಬದಾಗಿ ಅನ್ನಿಸುತ್ತದೆ. ಹಳೆ ಒಡಂಬಡಿಕೆಯಲ್ಲಿ ವಿವಿಧ ರೀತಿಯಲ್ಲಿ ಶುಚಿಮಾಡಿಕೊಳ್ಳಲಾಗುತ್ತಿತ್ತು – ವಿಮೋ 29:4; 30:19-21; ಯಾಜಕ 11:25; 13:6; 14:8; 16:26; 17:16; ಸಂಖ್ಯಾ 8:17; 19:18.

"*ಹಸ್ತಾರ್ಪಣೆ*"– ಇದನ್ನೂ ಹಳೆ ಒಡಂಬಡಿಕೆಯಲ್ಲಿ ನೋಡಬಹುದು – ಸಂಖ್ಯಾ 8:10; 27:18; ವಿಮೋ 29:10; ಯಾಜಕ 1:4.

"*ಪುನರುತ್ಥಾನ*"– (ದಾನಿ 12:2; ಯೆಶಾಯ 26:19; ಕೀರ್ತನೆ 16:10), ಮತ್ತು "ನ್ಯಾಯತೀರ್ಪು" (ಕೀರ್ತನೆ 9:8; 82:8; ದಾನಿ 7:9-10; ಯೋವೇಲ 3:12) ಇವುಗಳೂ ಹಳೆ ಒಡಂಬಡಿಕೆಯಲ್ಲಿವೆ. ಆದರೂ, ಕೆಲವು ಪಂಡಿತರು ಈ ವಿಷಯಗಳನ್ನು ವ್ಯತ್ಯಾಸವಾಗಿ ಕಾಣುವವರಾಗಿದ್ದಾರೆ. ಬರಹಗಾರನ ಮನಸ್ಸಿನಲ್ಲಿ "ದೇವರಲ್ಲಿ ನಂಬಿಕೆಯಿಡುವದೆಂದರೆ" ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವುದು; "ದೀಕ್ಷಾಸ್ನಾನಗಳೆಂದರೆ" ಯೋಹಾನನ ದೀಕ್ಷಾಸ್ನಾನ, ಕ್ರೈಸ್ತೀಯ ದೀಕ್ಷಾಸ್ನಾನ ಮತ್ತು ಪವಿತ್ರಾತ್ಮನ ದೀಕ್ಷಾಸ್ನಾನ; ಮತ್ತು ಹಸ್ತಾರ್ಪಣೆ ಎಂದರೆ ಮೊದಲನೆ ಶತಮಾನದ ಕ್ರೈಸ್ತರ ಆಚರಣೆಗಳಾಗಿರಬಹುದು ಎಂದು ಹೇಳುತ್ತಾರೆ (ಅಪೊ 6:6; 8:16-18; 13:3). ಆದರೂ ಒಬ್ಬನು ಕ್ರೈಸ್ತೀಯ ಜೀವಿತದ ಅಸ್ತಿವಾರವನ್ನು ವಿವರಿಸಲು ಬಯಸಿದರೂ ಈ ಕಾರ್ಯಗಳ ಪಟ್ಟಿ ಅಪರಿಚಿತವೇ ಆಗಿದೆ – ಇದರಲ್ಲಿ ಯೇಸು ಕ್ರಿಸ್ತನು, ಆತನು ಮಾನವನಾಗಿ ಬಂದದ್ದು ಮತ್ತು ಪಾಪಪರಿಹಾರಕ ಯಜ್ಞವನ್ನರ್ಪಿಸಿದ್ದು ಅಥವಾ ಪವಿತ್ರಾತ್ಮನನ್ನು ಕೊಟ್ಟಿದ್ದು ಅಥವಾ ಯೇಸು ಕ್ರಿಸ್ತನ ಸಭೆಯ ಕುರಿತಾದ ಬೋಧನೆ ಅಥವಾ

ಯೇಸು ಕ್ರಿಸ್ತನ ಮೂಲಕ ದೊರೆಯುವ ನಿತ್ಯಜೀವ ಇವುಗಳ ಪ್ರಸ್ತಾಪವೇ ಇಲ್ಲ. ಆದರೆ ಈ ವಚನಗಳ ಅರ್ಥವು ಸಂದೇಹಾಸ್ಪದವಾಗಿದೆ ಮತ್ತು ಅವುಗಳ ವಿಷಯದಲ್ಲಿ ನಾವು ಸಹ ತೀರಾ ಅನುಭವ ಇರುವ ಹಾಗೆ ಮಾತನಾಡಬಾರದು. **4-6**

**6:4-6** ಈ ವಾಕ್ಯಗಳನ್ನು ಸಹ ವ್ಯಾಖ್ಯಾನಿಸುವದು ಸುಲಭವಲ್ಲ ಮತ್ತು ಇವುಗಳ ಅರ್ಥಗಳ ವಿಷಯದಲ್ಲಿಯೂ ವೇದಪಂಡಿತರ ನಡುವೆ ವಿಪರೀತವಾದ ಭಿನ್ನಾಭಿಪ್ರಾಯಗಳಿವೆ. ಈ ವಚನಗಳ ಕುರಿತು ನಾಲ್ಕು ಪ್ರಾಥಮಿಕ ವ್ಯಾಖ್ಯಾನಗಳಿವೆ. ಮೊದಲನೆಯದು, ಇವು ಯೇಸು ಕ್ರಿಸ್ತನಲ್ಲಿರುವ ನಿಜವಾದ ವಿಶ್ವಾಸಿಗಳನ್ನು ವಿವರಿಸುತ್ತವೆ ಮತ್ತು ಅವರು ಯೇಸು ಕ್ರಿಸ್ತನಿಂದ ಹಿಂಜಾರಬಹುದು ಮತ್ತು ತಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದು ಎಂದು ಕಲಿಸುತ್ತವೆ. ಎರಡನೆಯದು, ಇವು ವಿಶ್ವಾಸಿಗಳನ್ನು ವಿವರಿಸುತ್ತವೆ, ಒಂದುವೇಳೆ ಅವರು ಹಿಂಜಾರಿದರೂ ತಮ್ಮ ರಕ್ಷಣೆಯನ್ನು ಕಳೆದುಕೊಳ್ಳುವದಿಲ್ಲ ಬದಲಾಗಿ ನಂಬಿಗಸ್ತರಾಗಿ ಸೇವೆ ಮಾಡಿದ್ದರೆ ಸಂಪಾದಿಸಿಕೊಳ್ಳಬಹುದಾಗಿದ್ದ ಬಹುಮಾನಗಳನ್ನು ಮಾತ್ರ ಕಳೆದುಕೊಳ್ಳುತ್ತಾರೆ. ಮೂರನೆಯದು, ಹಿಂಜಾರಿಹೋಗುವದರಿಂದ ನಿಜವಾದ ಅಪಾಯವು ಎದುರಾಗುತ್ತದೆ, ಆದ್ದರಿಂದ ಅದರ ವಿಷಯದಲ್ಲಿ ಎಚ್ಚರಿಕೆಗಳನ್ನು ಕೇಳಿಸಿಕೊಂಡಿರುವ ನಿಜವಾದ ವಿಶ್ವಾಸಿಗಳು ವ್ಯಾಖ್ಯಾನಿಸುತ್ತದೆ, ಆದರೆ ಅವರು ನಿಜವಾಗಿಯೂ ಹಿಂಜಾರುವದಿಲ್ಲ. ನಾಲ್ಕನೆಯದು, ಇವು ನಿಜವಾದ ವಿಶ್ವಾಸಿಗಳನ್ನು ವ್ಯಾಖ್ಯಾನಿಸುವುದೇ ಇಲ್ಲ – ಈ ವಚನಗಳಲ್ಲಿ ಪಟ್ಟಿ ಮಾಡಲಾಗಿರುವ ಕಾರ್ಯಗಳು ವಿಶ್ವಾಸಿಗಳ ವಿಷಯದಲ್ಲಿ ಸತ್ಯವಾಗಿವೆ ಆದರೆ ನಿಜವಾದ ವಿಶ್ವಾಸಿಗಳಾಗದೆ ಇರುವ ಕ್ರೈಸ್ತರ ವಿಷಯದಲ್ಲಿಯೂ ಇವು ಸತ್ಯವಾಗಿವೆ. ಈ ನೋಟ್ಸ್ ಗಳ ಬರಹಗಾರರು ಮೊದಲೆರೆಡು ವ್ಯಾಖ್ಯಾನಗಳನ್ನು ತಿರಸ್ಕರಿಸುತ್ತಾರೆ. ಯೇಸು ಕ್ರಿಸ್ತನಲ್ಲಿರುವ ನಿಜವಾದ ವಿಶ್ವಾಸಿಗಳು ಬಿದ್ದು ಹೋಗುವದಿಲ್ಲ ಅಥವಾ ಅಂತಿಮವಾದ ಮತಭ್ರಷ್ಟತೆಗೆ ಸಂಬಂಧಿಸಿದ ಪಾಪಗಳನ್ನೂ ಮಾಡುವದಿಲ್ಲ (2:1-4 ರ ನೋಟ್ಸ್ ನೋಡಿರಿ) ಎಂಬದು ಅವರ ನಂಬಿಕೆಯಾಗಿದೆ. 10:39; ಯೋಹಾನ 10:27; 1 ಯೋಹಾನ 3:9; 5:18 ನೋಡಿರಿ. ಹಾಗೆಯೇ ಯೋಹಾನ 5:24; 6:37-40; 10:27-29; 17:11-12; ರೋಮಾ 5:9-10; 8:28-39; ಫಿಲಿಪ್ಪಿ 1:6; 1 ಪೇತ್ರ 1:5 ರೊಂದಿಗೆ ಹೋಲಿಸಿ ನೋಡಿರಿ. ಸ್ಪಷ್ಟವಾಗಿರುವವುಗಳನ್ನು ಕಡೆಗಣಿಸುವ ಸಲುವಾಗಿ ನಾವು ಎಂದಿಗೂ (ಇಬ್ರಿಯ ಪತ್ರಿಕೆಯಲ್ಲಿ ಇರುವಂಥ ಕೆಲವು) ಅಸ್ಪಷ್ಟವಾಗಿರುವ ಮತ್ತು ಕಷ್ಟದ ವಚನಗಳನ್ನು ಉಪಯೋಗಿಸಬಾರದು. ಇಬ್ರಿಯ ಪತ್ರಿಕೆಯಲ್ಲಿರುವ ಈ ವಚನಗಳು ಯೇಸು ಕ್ರಿಸ್ತನಲ್ಲಿರುವ ನಿಜವಾದ ವಿಶ್ವಾಸಿಗಳು ಹಿಂಜಾರಬಹುದು ಮತ್ತು ನಾಶವಾಗಬಹುದು ಎಂದು ಸ್ಪಷ್ಟವಾಗಿ ಹೇಳುವದಿಲ್ಲ. ನಿಜವಾಗಿ ಹೇಳುವದಾದರೆ, ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರ ಬಗ್ಗೆ ಈ ವಚನಗಳಲ್ಲಿ ಹೇಳಿಯೇ ಇಲ್ಲ. ಮೇಲೆ ಕೊಡಲಾಗಿರುವ ಮೂರನೆಯ ವ್ಯಾಖ್ಯಾನವು ಹೊಸ ಒಡಂಬಡಿಕೆಯ ಬೋಧನೆಗೆ ಹೊಂದಿಕೆಯಾಗುವ ಹಾಗೆ ಅನ್ನಿಸುತ್ತದೆ. ವಿಶ್ವಾಸಿಗಳು ಹಿಂಜಾರಿ

ಹೋಗುವಂತೆ ಮಾಡಲು ಸೈತಾನನು ಪ್ರಯತ್ನಿಸುತ್ತಾನೆ ಮತ್ತು ಅವರು ಅಪಾಯದಲ್ಲಿದ್ದಾರೆ. ಅವರು ಅಪಾಯದಲ್ಲಿದ್ದಾರೆ ಎಂದ ಮಾತ್ರಕ್ಕೆ ನಿಜವಾಗಿಯೂ ಹಿಂಜಾರಿ ಹೋಗುತ್ತಾರೆ ಎಂಬದು ಇದರ ಅರ್ಥವಲ್ಲ. ದೇವರ ವಾಕ್ಯ, ದೇವರ ಕಾಪಾಡುವ ಶಕ್ತಿ ಮತ್ತು ಅವರಿಗಾಗಿ ಯೇಸು ಕ್ರಿಸ್ತನು ಮಾಡುವ ಪ್ರಾರ್ಥನೆ ಇಲ್ಲದೆ ಹೋದರೆ ಬಹುಶಃ ಅವರು ಹಿಂಜಾರಿಹೋಗಬಹುದು (ಲೂಕ 22:31-32; ಯೋಹಾನ 17:11-12; 1 ಪೇತ್ರ 1:5 ರೊಂದಿಗೆ ಹೋಲಿಸಿ ನೋಡಿರಿ). ಆದರೆ ಇವುಗಳ ನಿಮಿತ್ತ ಅವರ ಬಿದ್ದುಹೋಗದಂತೆ ಸುರಕ್ಷಿರಾಗಿದ್ದಾರೆ. ಹಿಂಜಾರಿಹೋಗುವ ವಿಷಯದಲ್ಲಿ ಕೊಡಲಾಗಿರುವ ಎಚ್ಚರಿಕೆಗಳೇ, ಅಪಾಯಗಳು ಎದುರಾಗುವಾಗ ಬಿದ್ದುಹೋಗದಂತೆ ತಡೆಯುವ ಸಹಾಯಗಳಾಗಿವೆ. ಆದರೆ ಮೇಲೆ ಕೊಡಲಾಗಿರುವ ನಾಲ್ಕನೇ ವ್ಯಾಖ್ಯಾನವು ಬಹುಶಃ ಸತ್ಯ ಎಂಬದಾಗಿ ಅನ್ನಿಸುತ್ತದೆ. 4-6 ವಚನಗಳು ಸತ್ಯವನ್ನು ತಿಳಿದಿರುವವರು, ಅದರ ಪ್ರಭಾವಕ್ಕೆ ಒಳಗಾಗಿರುವವರು, ದೇವರ ರಾಜ್ಯಕ್ಕೆ ಸಮೀಪವಾಗಿರುವವರು ಆದರೆ ನಿಜವಾಗಿಯೂ ಅದರೊಳಗೆ ಇನ್ನೂ ಪ್ರವೇಶ ಮಾಡದೆ ಇರುವವರ ವಿವರಣೆಯಾಗಿರಬಹುದು. ದೇವರ ಮಕ್ಕಳಲ್ಲದೆ ಇರುವವರು, ನಾವು ದೇವರ ಮಕ್ಕಳೆಂದು ಹೇಳಿಕೊಂಡರೂ, ಒಂದು ಸಮಯದಲ್ಲಿ ಆಗಿದ್ದ ಹಾಗೆ ಕಾಣಿಸಿಕೊಳ್ಳಬಹುದು (ಮತ್ತಾಯ 13:18-23,24-30; 25:1-12; 2 ಕೊರಿಂಥ 11:14-15 ರೊಂದಿಗೆ ಹೋಲಿಸಿ ನೋಡಿರಿ). 4-6 ವಚನಗಳಲ್ಲಿ ವಿಶ್ವಾಸಿಗಳ ಬಗ್ಗೆ ಹೇಳಲಾಗಿರುವ ಸಂಗತಿಗಳೆಲ್ಲವೂ ಸತ್ಯವಾಗಿವೆ, ಆದರೂ ವಿಶ್ವಾಸಿಗಳಲ್ಲದಿದ್ದರೂ ವಿಶ್ವಾಸಿಗಳಂತೆ ತೋರ್ಪಡಿಸಿಕೊಳ್ಳುವವರ ವಿಷಯದಲ್ಲಿಯೂ ಸತ್ಯವಾಗಿರುವ ಸಾಧ್ಯತೆಗಳಿವೆ. **4**

**6:4** *"ಜ್ಞಾನಪ್ರಕಾಶ"*– ಸತ್ಯ ತಿಳಿದುಕೊಂಡಿರುವ ಜನರನ್ನು ವಿವರಿಸುತ್ತದೆ. 10:26 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನ ಬೆಳಕು ಅವರ ಮೇಲೆ ಪ್ರಕಾಶಿಸಿದೆ. ಆದರೆ ಇದರ ಅರ್ಥ ಅವರು ತಮ್ಮ ಭರವಸೆಯನ್ನು ಬೆಳಕಿನ ಮೇಲಿಟ್ಟಿದ್ದಾರೆ ಅಥವಾ "ಬೆಳಕಿನ ಮಕ್ಕಳಾಗಿದ್ದಾರೆ" ಎಂಬದಾಗಿ ಇರಬೇಕೆಂದೇನೂ ಇಲ್ಲ (ಯೋಹಾನ 12:35-36). ಪಶ್ಚಾತ್ತಾಪಪಡದೆ ಮತ್ತು ರಕ್ಷಣೆಗಾಗಿ ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡದೆ ಜನರು ಸತ್ಯವನ್ನು ತಿಳಿದುಕೊಳ್ಳಬಹುದು.

*"ಪರಲೋಕದಿಂದಾದ ದಾನದ ಅನುಭವ"*– ಇದರ ಅರ್ಥ ಅವರು ಪರಲೋಕದಿಂದ ದಾನವನ್ನು ಪಡೆದಿದ್ದಾರೆ ಎಂಬದಲ್ಲ. ಬರಹಗಾರನು ಇಲ್ಲಿ ಅನುಭವ ಎಂಬ ಪದವನ್ನು ತಿನ್ನುವದಕ್ಕೆ ವ್ಯತ್ಯಾಸವಾಗಿ ಉಪಯೋಗಿಸಿರಬಹುದು (ಯೋಹಾನ 6:57). ಸಂಖ್ಯಾ 13:23,26 ರೊಂದಿಗೆ ಹೋಲಿಸಿ ನೋಡಿರಿ. ಅಪನಂಬಿಕೆಯ ನಿಮಿತ್ತ ಕಾನಾನ್ ದೇಶದೊಳಗೆ ಎಂದಿಗೂ ಹೋಗದ ಇಸ್ರಾಯೇಲ್ಯರು (3:19), ಕಾನಾನ್ ದೇಶದ ಹಣ್ಣುಗಳ ರುಚಿ ನೋಡಿರಬಹುದು.

*"ಪವಿತ್ರಾತ್ಮವರದಲ್ಲಿ ಪಾಲುಗಾರರು"*– "ಪವಿತ್ರಾತ್ಮವರವನ್ನು ಹೊಂದಿದರು" ಎಂದು

ಬರಹಗಾರನು ಹೇಳಿಲ್ಲ. ಪಾಲುಗಾರರಾಗುವದು ಅಥವಾ "ಹಂಚಿಕೊಳ್ಳುವದು" ಒಂದುವೇಳೆ ಈ ಅರ್ಥವನ್ನು ಕೊಡಬಹುದು ಅಥವಾ ಕೊಡದೆ ಇರಬಹುದು. ಸುಳ್ಳು ಪ್ರವಾದಿಯಾದ ಬಿಳಾಮನು ಹೊಂದಿದ್ದನು (ಸಂಖ್ಯಾ 24:3). ಮತಭ್ರಷ್ಟನಾದ ಇಸ್ಕರಿಯೋತ ಯೂದನು ಹೊಂದಿದ್ದನು ಅನ್ನಿಸುತ್ತದೆ (ಮತ್ತಾಯ 10:1; ಯೋಹಾನ 6:70-71). ಅಪೊ 8:9-24 ವಚನಗಳಲ್ಲಿ ಬರುವ ಸೀಮೋನನು ಇದಕ್ಕೆ ಉದಾಹರಣೆಯಾಗಿದ್ದಾನೆ. ಬಹುಶಃ ಇಲ್ಲಿ ಪಾಲುಗಾರರಾಗುವದು ಎಂದರೆ ಪವಿತ್ರಾತ್ಮನು ಶಕ್ತಿಯುತವಾಗಿ ಕಾರ್ಯ ಮಾಡುವಾಗ, ಪವಿತ್ರಾತ್ಮನಿಂದ ಮನವರಿಕೆ ಹೊಂದಲು (ಯೋಹಾನ 16:8-11) ಅಲ್ಲಿ ಉಪಸ್ಥಿತರಿರುವದಾಗಿದೆ ಮತ್ತು ದೇವರ ರಾಜ್ಯದ ಗಡಿಯ ಸಮೀಪ ಅಂದರೆ ಪಶ್ಚಾತ್ತಾಪದ ಸ್ಥಳಕ್ಕೆ ದೇವರಾತ್ಮನಿಂದ ಕರೆದುಕೊಂಡು ಬರುವದಾಗಿದೆ. **5**

**6:5** "*ದೇವರ ವಾಕ್ಯದ ಶ್ರೇಷ್ಠತೆ*"– ಮತ್ತಾಯ 13:20-21 ರೊಂದಿಗೆ ಹೋಲಿಸಿ ನೋಡಿರಿ.

"*ಮುಂದಣ ಯುಗದ ಮಹತ್ವ*"– ಮತ್ತಾಯ 7:22-23 ರೊಂದಿಗೆ ಹೋಲಿಸಿ ನೋಡಿರಿ. ಅವರು ಯೇಸು ಕ್ರಿಸ್ತನಲ್ಲಿ ನಂಬಿಕೆ ಇಟ್ಟಿದ್ದರು ಅಥವಾ ನಿತ್ಯಜೀವ ಹೊಂದಿದ್ದರು ಅಥವಾ ರಕ್ಷಣೆ ಹೊಂದಿದ್ದರು ಇತ್ಯಾದಿ ವಿಷಯಗಳನ್ನು ಬರಹಗಾರನು ಹೇಳದೆ ಇರುವದು ಪ್ರಾಮುಖ್ಯವಾಗಿರಬಹುದು ಅಥವಾ ಪ್ರಾಮುಖ್ಯವಾಗಿರದೆ ಇರಬಹುದು. ಒಂದುವೇಳೆ ಅವನು ಇದನ್ನು ಹೇಳಿಲ್ಲವೆಂದರೆ, ಇದನ್ನು ನಾವು ಹೇಳುವದು ಬುದ್ಧಿವಂತಿಕೆಯಾಗಿದೆಯೇ? **6**

**6:6** "*ಒಂದುವೇಳೆ*"– ನಿಜವಾಗಿಯೂ ಈ ವಚನ 4,5 ವಚನಗಳಲ್ಲಿ ವಿವರಿಸಲಾಗಿರುವ ಜನರು ಹಿಂಜಾರಿ ಹೋಗುತ್ತಾರೆ ಎಂದು ಕಲಿಸುವದಿಲ್ಲ. ಅವರು ಹಿಂಜಾರಿ ಹೋದರೆ ಏನಾಗುವದೆಂದು ಮಾತ್ರವೇ ಇದು ತಿಳಿಸುತ್ತದೆ. ಆದರೆ ಬರಹಗರನು ಖಂಡಿತವಾಗಿಯೂ ಇದರಿಂದಾಗುವ ಅಪಾಯದ ಬಗ್ಗೆ ಕಲಿಸುತ್ತಾ ಇದ್ದಾನೆ ಅನ್ನಿಸುತ್ತದೆ.

"*ಭ್ರಷ್ಟರಾದರೆ*"– ಭ್ರಷ್ಟರಾದರೆ ಎಂಬದು ಪಾಪಕ್ಕೆ ಒಳಗಾಗುವದಕ್ಕಿಂತಲೂ ಘೋರವಾದ ಕಾರ್ಯವಾಗಿದೆ. ಪೇತ್ರನು ಬಹಳ ಹೀನಾಯವಾಗಿ ಸೋತುಹೋದನು ಆದರೆ ಪಶ್ಚಾತ್ತಾಪದ ಮೂಲಕ ಅವನು ಪುನರುಜ್ಜೀವನ ಹೊಂದಿದನು (ಮತ್ತಾಯ 26:69-75). ಒಂದುವೇಳೆ ನಾವು ಪಾಪದಲ್ಲಿ ಬಿದ್ದರೆ ನಮಗೆ ಕ್ಷಮಾಪಣೆ ದೊರೆಯುತ್ತದೆ (1 ಯೋಹಾನ 1:9; 2:1; ಮತ್ತಾಯ 6:12; 12:31-32. ಜ್ಞಾನೋ 24:16 ನೋಡಿರಿ). ಬಿದ್ದುಹೋಗುವದು ಎಂದರೆ ಅಂತಿಮವಾದ ಭ್ರಷ್ಟತೆಯಾಗಿದೆ, ನಂಬಿಕೆಯನ್ನು ತೊರೆಯುವದಾಗಿದೆ. ಇದರ ಅರ್ಥ ಸತ್ಯವನ್ನು ಸಂಪೂರ್ಣವಾಗಿ ತ್ಯಜಿಸುವದಾಗಿದೆ (2:1-4 ರ ನೋಟ್ಸ್ ನೋಡಿರಿ). ಅವರನ್ನು ಮತ್ತೆ ಮಾನಸಾಂತರಕ್ಕೆ ನಡೆಸುವದು ಅಸಾಧ್ಯ ಎಂದು ಬರಹಗಾರನು ಯಾಕೆ ಹೇಳಿದ್ದಾನೆ? ಒಂದುವೇಳೆ ಆತನು ವಿವರಿಸುತ್ತಿರುವ ಜನರಲ್ಲಿ ನಂಬಿಕೆಯಿರುವದಾದರೆ, "ಅವರನ್ನು ಮತ್ತೆ ಮಾನಸಾಂತರಕ್ಕೆ" ನಡೆಸಬಹುದು ಎಂದು ಬರಹಗಾರನು ಯಾಕೆ ಹೇಳಿಲ್ಲ? ಪಶ್ಚಾತ್ತಾಪ ಎಂದರೆ ಮನಸ್ಸು ಬದಲಾಗುವದು ಮತ್ತು ಇಲ್ಲಿ ಅದರ ಅರ್ಥ ಹೀಗಿರಬಹುದು: ಈ

ಇಬ್ರಿಯರು ಪ್ರಾರಂಭದಲ್ಲಿ ಯೇಸು ಕ್ರಿಸ್ತನು ತಮ್ಮ ಮೆಸ್ಸೀಯನಲ್ಲ ಎಂಬದಾಗಿ ಅಂದುಕೊಂಡಿದ್ದರು. ಆದರೆ ಅವರು ತಮ್ಮ ಮನಸ್ಸು ಬದಲಾಯಿಸಿಕೊಂಡು ಆತನೇ ಮೆಸ್ಸೀಯನೆಂದು ತಿಳಿದುಕೊಂಡರು. ಒಂದುವೇಳೆ 4,5 ವಚನಗಳಲ್ಲಿ ಅವರ ಬಗ್ಗೆ ಇವುಗಳನ್ನೇ ಹೇಳಲಾಗಿರುವದಾದರೆ, ಅವರು ಸಂಪೂರ್ಣವಾಗಿ ಆತನ ಕಡೆಯಿಂದ ತಿರುಗಿಕೊಂಡರೆ, ಮತ್ತೊಮ್ಮೆ ಅವರ ಮನಸ್ಸು ಬದಲಾಯಿಸುವದು ಹೇಗೆ?

"*ಪುನಃ ಶಿಲುಬೆಗೆ ಹಾಕುವವರು*"– ಅವರಿಗೆ ಯಾಕೆ ಪುನಃ ಪಶ್ಚಾತ್ತಾಪಪಡಲು ಸಾಧ್ಯವಿಲ್ಲ ಎಂಬದಕ್ಕೆ ಇದುವೇ ಕಾರಣವಾಗಿದೆ. ಅವರು ಯೇಸು ಕ್ರಿಸ್ತನನ್ನು ನಿರಾಕರಿಸುತ್ತಾರೆ ಮತ್ತು ಯೂದನ ಹಾಗೆ ಆತನನ್ನು ಕೊಲೆಮಾಡಬೇಕೆಂದು ಬಯಸುವವರ ಸಂಗಡ ಸೇರಿಕೊಳ್ಳುತ್ತಾರೆ. ಬರಹಗಾರನು ಹಿಂಜಾರುವದಕ್ಕಿಂತಲೂ ಘೋರವಾಗಿರುವ ಕಾರ್ಯದ ಬಗ್ಗೆ ಮಾತನಾಡುತ್ತಾ ಇದ್ದಾನೆ. ಹಿಂಜಾರುವವರನ್ನು ಪಶ್ಚಾತ್ತಾಪ ಹಾಗೂ ನಂಬಿಕೆಗೆ ನಡೆಸುವ ಸಾಧ್ಯತೆಯಿದೆ (2 ಕೊರಿಂಥ 2:5-11; ಗಲಾ 6:1; ಯಾಕೋಬ 4:8-10; ಕೀರ್ತನೆ 32:3-5; 51:1-12; ಯೆರೆ 3:12; ಯೆಹೆಜ್ಕೇಲ 18:30-32; ಹೋಶೇಯ 14:1-4).

"*ಎಲ್ಲರ ಮುಂದೆ ಅವಮಾನಪಡಿಸುವವರು*"– ಒಂದುವೇಳೆ ಇಬ್ರಿಯರು ಯೇಸು ಕ್ರಿಸ್ತನನ್ನು ನಿರಾಕರಿಸಿ, ಯೆಹೂದ್ಯ ಧರ್ಮಕ್ಕೆ ಹಿಂದಿರುಗಿ ಹೋದರೆ ಅದು ಎಲ್ಲರಿಗೂ ಗೊತ್ತಾಗುತ್ತದೆ. ಮತ್ತು ಒಂದುವೇಳೆ ಯಾವನಾದರೂ ಯೇಸು ಕ್ರಿಸ್ತನನ್ನು ಅಲ್ಲಗಳೆದು ಬೇರೊಂದು ಧರ್ಮಕ್ಕೆ ಹೋದರೆ ಅದು ಅನೇಕ ಜನರಿಗೆ ಗೊತ್ತಾಗುತ್ತದೆ. ಇದರ ಅರ್ಥ ಸಾರ್ವಜನಿಕವಾಗಿ ಯೇಸು ಕ್ರಿಸ್ತನಿಗೆ ಹಾಗೂ ಆತನ ಸುವಾರ್ತೆಗೆ ಅವಮಾನವಾಗುತ್ತದೆ ಮತ್ತು ಇದರ ನಿಮಿತ್ತ ಜನರು ನಿಜವಾದ ದೇವರಿಗೆ ಅಗೌರವ ಕೊಡುವವರಾಗುತ್ತಾರೆ. **7-8**

**6:7-8** ಬರಹಗಾರನು ತನ್ನ ಅರ್ಥವನ್ನು ಸ್ಪಷ್ಟಪಡಿಸಲು ಈ ಉದಾಹರಣೆಯನ್ನು ಕೊಟ್ಟಿದ್ದಾನೆ. ಬೆಳೆಯನ್ನು ಕೊಡುವ ಭೂಮಿಯು ವಿಶ್ವಾಸಿಗಳಿಗೆ ಸೂಚನೆಯಾಗಿದೆ (ಮತ್ತಾಯ 13:23 ನೋಡಿರಿ). ಬೆಳೆಯನ್ನು ಕೊಡದ ಭೂಮಿಯು ಅವಿಶ್ವಾಸಿಗಳಿಗೆ ಅಥವಾ ಭ್ರಷ್ಟರಾಗುವವರಿಗೆ ಸೂಚನೆಯಾಗಿದೆ. ಅವರು ದೇವರಿಗಾಗಿ ಯಾವ ಫಲವನ್ನೂ ಕೊಡುವದಿಲ್ಲ (ಮತ್ತಾಯ 13:19-22; ಲೂಕ 13:6-9 ರೊಂದಿಗೆ ಹೋಲಿಸಿ ನೋಡಿರಿ). ಎರಡೂ ತರಹದ ಭೂಮಿಯ ಮೇಲೆ ಮಳೆ ಸುರಿಯುತ್ತದೆ (ಇಲ್ಲಿ ಮಳೆ ಎಂಬದು ದೇವರ ಸತ್ಯ ಮತ್ತು ಪವಿತ್ರಾತ್ಮನ ಪ್ರಭಾವವನ್ನು ಸೂಚಿಸುತ್ತದೆ) ಆದರೆ ಎರಡೂ ದೇವರಿಗಾಗಿ ಫಲವನ್ನು ಕೊಡುವದಿಲ್ಲ. ಒಬ್ಬ ವ್ಯಕ್ತಿಯ ಜೀವಿತದಿಂದ ಏನು ಹೊರಗೆ ಬರುತ್ತದೋ ಅದು ಅವನು ಯೇಸು ಕ್ರಿಸ್ತನಲ್ಲಿ ಇದ್ದಾನೋ ಅಥವಾ ಇಲ್ಲವೋ ಎಂಬದನ್ನು ಪ್ರಕಟಪಡಿಸುತ್ತದೆ. ಮುಳ್ಳುಗಳು ಮತ್ತು ಕಳೆಗಳು ಅಂಥವರಲ್ಲಿ ಯೇಸು ಕ್ರಿಸ್ತನು ಇರಲೇ ಇಲ್ಲ ಎಂಬದಕ್ಕೆ ಸಾಕ್ಷಿಗಳಾಗಿವೆ (1 ಯೋಹಾನ 2:19 ರೊಂದಿಗೆ ಹೋಲಿಸಿ ನೋಡಿರಿ). ಮತ್ತಾಯ 3:8; 7:16-20 ನೋಡಿರಿ. **9-10**

**6:9-10** ಆತನ ಮಾತುಗಳಿಂದ ಅವರಲ್ಲಿ ಅನಾವಶ್ಯಕವಾದ ಏನಾದರೂ ಗೊಂದಲಗಳು ಉಂಟಾಗಿದ್ದರೆ ಅವುಗಳನ್ನು ತೆಗೆಯಬೇಕೆಂದು ಆತನು ಬಯಸಿದನು (4:1; ರೋಮಾ 8:15 ರೊಂದಿಗೆ ಹೋಲಿಸಿ ನೋಡಿರಿ). ಅವರು "ಬಿದ್ದುಹೋಗುವದಿಲ್ಲ", "ಶಾಪಕ್ಕೆ" ಗುರಿಯಾಗುವದಿಲ್ಲ ಅಥವಾ "ಸುಟ್ಟುಹೋಗುವದಿಲ್ಲ" ಎಂಬದಾಗಿ ಅವನು ಆತ್ಮವಿಶ್ವಾಸದಿಂದಿರಲು ಸರಳವಾದ ಕಾರಣ ಏನೆಂದರೆ: ಅವರ ಜೀವಿತಗಳಲ್ಲಿ ಆತ್ಮೀಕ ಫಲಗಳು ಕಾಣಿಸಿಕೊಳ್ಳುತ್ತಿವೆ. ಅವರು ದೇವರನ್ನು ಪ್ರೀತಿಸುತ್ತಾ ಇದ್ದರು, ದೇವರಿಗಾಗಿ ಕಾರ್ಯಮಾಡುತ್ತಾ ಇದ್ದರು ಮತ್ತು ದೇವಜನರಿಗೆ ಸಹಾಯ ಮಾಡುತ್ತಾ ಇದ್ದರು (10:32-34 ನೋಡಿರಿ). ಒಂದುವೇಳೆ ಇಂಥ ಕಾರ್ಯಗಳು ಒಬ್ಬ ಕ್ರೈಸ್ತನ ಜೀವಿತದಲ್ಲಿ ಕಾಣಿಸಿಕೊಳ್ಳದೆ ಹೋದರೆ ಅವನು ವಿಶ್ವಾಸಿಯಾಗಿದ್ದಾನೆ ಎಂಬದಕ್ಕೆ ಸಾಕ್ಷಿ ಏನಾಗಿದೆ? ಒಂದುವೇಳೆ 4,5 ವಚನಗಳ ಎಲ್ಲಾ ವಿಷಯಗಳು ಅವನ ವಿಷಯದಲ್ಲಿ ಸತ್ಯವಾಗಿದ್ದರೂ, ಅವನ ಜೀವಿತದಲ್ಲಿ ದೇವರಿಗಾಗಿ ಯಾವ ಫಲವೂ ಇಲ್ಲದೆ ಹೋದರೆ ಎಲ್ಲವೂ ವ್ಯರ್ಥವಾಗಿದೆ. ಅವನು ಮುಳ್ಳುಗಳು ಮತ್ತು ಕಳೆಗಳು ಬಿಡುವ ಭೂಮಿಗೆ ಸಮಾನನಾಗಿರುತ್ತಾನೆ. **10**

**6:10** *"ನೀವು ಮಾಡುವ ಸೇವೆ"*– ಮತ್ತಾಯ 25:34-40; 1 ಥೆಸ 1:3. **11-12**

**6:11-12** ಆತನು 4-8 ವಚನಗಳಲ್ಲಿ ಕೊಟ್ಟಿರುವ ಎಚ್ಚರಿಕೆಯಿಂದ ಅವರು ಕಲಿತುಕೊಳ್ಳಬೇಕೆಂದು ಆತನು ಬಯಸಿದ ಪಾಠವನ್ನು ನಾವು ಇಲ್ಲಿ ನೋಡಬಹುದು. ಒಂದುವೇಳೆ ಕ್ರೈಸ್ತೀಯ ಜೀವಿತದಲ್ಲಿ ಮುಂದುವರೆಯಲು ಅವುಗಳಿಂದ ಯಾವುದೇ ಪ್ರಯೋಜನ ಆಗದೆ ಹೋದರೆ, ಅವುಗಳ ಅರ್ಥದ ಬಗ್ಗೆ ಯೋಚಿಸುವದರಿಂದ ಅವರಿಗೆ (ಅಥವಾ ನಮಗೆ) ಯಾವುದೇ ಪ್ರಯೋಜನ ಆಗುವದಿಲ್ಲ. ಪ್ರಾಮುಖ್ಯವಾದ ವಿಷಯವೇನೆಂದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದನ್ನು ಮುಂದುವರೆಸಬೇಕು ಮತ್ತು ಭೂಲೋಕದಲ್ಲಿ ನಾವು ಜೀವಿದಿಂದಿರುವ ತನಕ ಆತನ ಸೇವೆ ಮಾಡಬೇಕು. ಒಂದುವೇಳೆ ನಾವು ಈ ಕಾರ್ಯಗಳನ್ನು ಮಾಡುವದಾದರೆ ಭ್ರಷ್ಟರಾಗುವದಿಲ್ಲ ಮತ್ತು ಹೆದರಿಕೊಳ್ಳುವ ಅವಶ್ಯಕತೆಯೂ ಇಲ್ಲ. **11**

**6:11** *"ಪೂರ್ಣ ದೃಢತೆ"*– 2 ಕೊರಿಂಥ 13:5; 2 ಪೇತ್ರ 1:10; 1 ಯೋಹಾನ 5:13.

*"ಕಡೇ ತನಕ"*– 3:6,14; 10:36. **12**

**6:12** *"ಮಂದಮತಿಗಳು"*– ಮತ್ತಾಯ 25:26; ಜ್ಞಾನೋ 18:9; 24:30. ಮಂದಿಮತಿಗಳಾಗಿರುವದು ಆತ್ಮೀಕ ವಿಷಯಗಳಲ್ಲಿ ಮಾತ್ರವಲ್ಲ ಬದಲಾಗಿ ಯಾವ ವಿಷಯಗಳಲ್ಲಿ ಆದರೂ ಅಘಾತಕಾರಿಯಾಗಿದೆ.

*"ಕಾದಿರುವದು"*– 10:36; ರೋಮಾ 8:25; ಯಾಕೋಬ 1:4. **13-20**

**6:13-20** ಇಲ್ಲಿ ಬರಹಗಾರನು ಬುದ್ಧಿಮಾತುಗಳ ಈ ಭಾಗವನ್ನು ಇಲ್ಲಿಗೆ ಮುಗಿಸುತ್ತಿದ್ದಾನೆ (5:11 ರಲ್ಲಿ ಪ್ರಾರಂಭವಾಯಿತು) ಮತ್ತು ಯೇಸು ಕ್ರಿಸ್ತನು

ಮಹಾಯಾಜಕನಾಗಿದ್ದಾನೆ ಎಂಬ ವಿಷಯವನ್ನು ಮತ್ತೆ ಪ್ರಾರಂಭಿಸುತ್ತಾ ಇದ್ದಾನೆ (ವ 20). ಆತನು 11,12 ವಚನಗಳಲ್ಲಿ ಪೂರ್ಣ ಆಸಕ್ತಿ, ನಂಬಿಕೆ ಮತ್ತು ತಾಳ್ಮೆಯ ಬಗ್ಗೆ ಮಾತನಾಡಿದ್ದಾನೆ. ಈಗ ಆತನು ಭೂತಕಾಲದಲ್ಲಿ ಇವುಗಳನ್ನೆಲ್ಲಾ ಅಭ್ಯಾಸ ಮಾಡಿದಾತನ ಉದಾಹರಣೆಯನ್ನು ತಿಳಿಸುತ್ತಾ ಇದ್ದಾನೆ ಮತ್ತು ಈಗಿನ ಎಲ್ಲಾ ವಿಶ್ವಾಸಿಗಳಿಗೆ ಅಳವಡಿಸುತ್ತಾ ಇದ್ದಾನೆ. **13-15**

**6:13-15** ಅಬ್ರಹಾಮನು ಇಬ್ರಿಯರೆಲ್ಲರಿಗೆ ಮೂಲಪಿತೃವಾಗಿದ್ದಾನೆ. ಇದಲ್ಲದೆ ನಂಬುವವರೆಲ್ಲರಿಗೆ ಅವನೇ ಆತ್ಮೀಕ ತಂದೆಯಾಗಿದ್ದಾನೆ (ರೋಮಾ 4:11,16). ಅಬ್ರಹಾಮನ ನಂಬಿಕೆಯನ್ನು 11:18-19 ರಲ್ಲಿ ವಿವರಿಸಲಾಗಿದೆ. ನಂಬಿಕೆ ಮತ್ತು ತಾಳ್ಮೆಗೆ ಅವನು ಶ್ರೇಷ್ಠ ಉದಾಹರಣೆಯಾಗಿದ್ದಾನೆ. **13**

**6:13** *"ವಾಗ್ದಾನ"*– ಆದಿ 22:16-18. **16-18**

**6:16-18** ಒಂದುವೇಳೆ ಮಾನವರು ಸತ್ಯವನ್ನೇ ಹೇಳುವ ಪ್ರಮಾಣ ಮಾಡಿದರೆ ಬೇರೆ ಇನ್ನೇನು ಎದುರುನೋಡಲಾಗುತ್ತದೆ? ನಿಜವಾಗಿ ಹೇಳುವದಾದರೆ, ಮಾನವರು ದೇವರಿಂದ ಇನ್ನೇನು ಬಯಸುತ್ತಾರೆ? ಮಾನವರು ಕೆಲವೊಮ್ಮೆ ಪ್ರತಿಜ್ಞೆಗಳನ್ನು ಮಾಡಿದ್ದರೂ ಸುಳ್ಳು ಹೇಳುತ್ತಾರೆ, ಆದರೆ ದೇವರು ಎಂದಿಗೂ ಸುಳ್ಳು ಹೇಳುವದಿಲ್ಲ (ತೀತ 1:2). ಆತನು ಒಂದುವೇಳೆ ಏನಾದರೂ ಮಾಡುವದಾಗಿ ಪ್ರಮಾಣ ಮಾಡಿದರೆ ಅದನ್ನು ಖಂಡಿತವಾಗಿಯೂ ಮಾಡುತ್ತಾನೆ. "ಬದಲಾಯಿಸಲು ಆಗದ ಎರಡು ಕಾರ್ಯಗಳು" (ವ 18) ಎಂದರೆ ದೇವರ ವಾಗ್ದಾನ ಮತ್ತು ಪ್ರತಿಜ್ಞೆ. ವಿಶ್ವಾಸಿಗಳಿಗೆ "ಬಲವಾದ ಪ್ರೋತ್ಸಾಹ" ದೊರೆಯಲಿ, ಅವರಿಗೆ ನಂಬುವ ಪ್ರೋತ್ಸಾಹ ದೊರೆಯಲಿ ಮತ್ತು ಕೊನೆಯ ತನಕ ಅವರು ನಂಬುತ್ತಾ ಸಾಗಲಿ ಎಂಬ ಕಾರಣಕ್ಕೆ ಆತನು ಎರಡನ್ನೂ ಕೊಟ್ಟಿದ್ದಾನೆ. ವಿಶ್ವಾಸಿಗಳು "ಆಶ್ರಯ ಸ್ಥಾನಗಳಿಗೆ" ಹೋಗಿದ್ದಾರೆ – ಪಾಪದಿಂದ ದೂರವಾಗಿದ್ದಾರೆ ಮತ್ತು ಬಿದ್ದುಹೋಗಿರುವ ಲೋಕದ ಮೇಲೆ ದೇವರಿಗಿರುವ ಕೋಪದಿಂದ ದೂರ ಹೋಗಿದ್ದಾರೆ, ತಾವು ರಕ್ಷಣೆ ಹೊಂದದಂತೆ ತಮ್ಮನ್ನು ತಡೆಯುವ ಕಾರ್ಯಗಳಿಂದ ದೂರವಾಗಿದ್ದಾರೆ (ಸಂಖ್ಯಾ 35:9-29 ರೊಂದಿಗೆ ಹೋಲಿಸಿ ನೋಡಿರಿ). ಅವರು ನಿತ್ಯವಾದ ರಕ್ಷಣೆಯ ವಿಷಯದಲ್ಲಿ ದೇವರು ಕೊಟ್ಟಿರುವ ವಾಗ್ದಾನವನ್ನು ಬಿಗಿಯಾಗಿ ಹಿಡಿದುಕೊಂಡಿದ್ದಾರೆ. **18**

**6:18** *"ಆಶ್ರಯ"*– ಕೀರ್ತನೆ 7:1; 18:2; 91:2. **19-20**

**6:19-20** ಸತ್ಯವೇದವು ತಿಳಿಸುತ್ತಿರುವ ನಿರೀಕ್ಷೆಯು ದುರ್ಬಲ ಮತ್ತು ಚಂಚಲದ ವಿಷಯವಲ್ಲ. ಅದು ದೃಢ ಹಾಗೂ ಭರವಸೆಯುಳ್ಳ ಚುಕ್ಕಾಣಿಯಾಗಿದೆ. ಅದು ಎಂದಿಗೂ ಸೋಲುವದಿಲ್ಲ (ರೋಮಾ 5:2-5 ರೊಂದಿಗೆ ಹೋಲಿಸಿ ನೋಡಿರಿ). ಚುಕ್ಕಾಣಿಯು ಸಮುದ್ರದಲ್ಲಿ ಹಡಗನ್ನು ಒಂದು ಸ್ಥಳದಲ್ಲಿ ದೃಢವಾಗಿ ನಿಲ್ಲಿಸುತ್ತದೆ. ನಿರೀಕ್ಷೆಯು ವಿಶ್ವಾಸಿಗಳನ್ನು ಒಂದು ಸ್ಥಳದಲ್ಲಿ ದೃಢವಾಗಿ ನಿಲ್ಲಿಸುತ್ತದೆ – ಅಂದರೆ "ತೆರೆಯ ಹಿಂದೆ

ಅಂತರ್ಯದ ವಿಷಯಗಳಲ್ಲಿ" (ಪರಲೋಕ, ಯೇಸು ಕ್ರಿಸ್ತನು ಇರುವ ಸ್ಥಳ). ಅವರು ಹಿಂಜಾರಿ ಹೋಗುವಿಕೆಯ ಯಾವುದೇ ಬಿರಾಗಳಿಯಿಂದ ಧೈರ್ಯಗೆಡುವದಿಲ್ಲ. **19**

**6:19** *"ತೆರೆ"*– 10:19-20; ಮತ್ತಾಯ 27:51. ದೇವದರ್ಶನ ಗುಡಾರ ಮತ್ತು ದೇವಾಲಯದೊಳಗಿದ್ದ ತೆರೆ ಅಥವಾ ಪರದೆಯು ಪರಿಶುದ್ಧ ಸ್ಥಳವನ್ನು ಮಹಾಪರಿಶುದ್ಧ ಸ್ಥಳದಿಂದ (ಒಳಾಂಗಣ) ಬೇರ್ಪಡಿಸುತ್ತಾ ಇತ್ತು. ಮಹಾಪರಿಶುದ್ಧ ಸ್ಥಳವು ಪರಲೋಕವನ್ನು ಸೂಚಿಸುತ್ತದೆ. ಆ ವಿಶ್ವಾಸಿಗಳು ಅದರೊಳಗೆ ಇನ್ನೂ ಪ್ರವೇಶ ಪಡೆದಿಲ್ಲ ಆದರೆ ಯೇಸು ಕ್ರಿಸ್ತನು ಅದರೊಳಗೆ ಪ್ರವೇಶಿಸಿದ್ದಾನೆ. ಮತ್ತು ಅವರು ನಂಬಿಕೆ ಹಾಗೂ ನಿರೀಕ್ಷೆಯಿಂದ ಶಾಶ್ವತವಾಗಿ ಆತನಿಗೆ ಒಳಗಾಗಿದ್ದಾರೆ. ಆತನು "ಅವರಿಗಾಗಿ", "ಮುಂಚಿತವಾಗಿಯೇ" ಅಲ್ಲಿಗೆ ಹೋಗಿದ್ದಾನೆ – 4:14; 9:24; ಎಫೆ 2:6; ಕೊಲೊ 3:1-4. ಆತನು ಅಲ್ಲಿದ್ದಾನೆ ಮತ್ತು ಅವರೆಲ್ಲರೂ ಅಲ್ಲಿಗೆ ಹೋಗಲು ಬೇಕಾದ ವ್ಯವಸ್ಥೆಗಳನ್ನು ಮಾಡುತ್ತಾನೆ (ಯೋಹಾನ 17:24).

# 7 1-3

**7:1-3** ಮೆಲ್ಕಿಜೆದೆಕನು, ಅರಸ ಹಾಗೂ ಯಾಜಕನಾಗಿರುವ ಯೇಸು ಕ್ರಿಸ್ತನ ರೀತಿ ಅಥವಾ ಚಿತ್ರಣವಾಗಿದ್ದಾನೆ – 5:6,10; 6:20. ಮೆಲ್ಕಿಜೆದೆಕನು ಹಳೆ ಒಡಂಬಡಿಕೆಯ ಚರಿತ್ರೆಯಲ್ಲಿ ಕೇವಲ ಒಮ್ಮೆ ಮಾತ್ರವೇ ಕಾಣಿಸಿಕೊಂಡಿದ್ದಾನೆ – ಆದಿ 14:18-20, ಇಬ್ರಿಯರಿಗೆ ಈ ಪತ್ರಿಕೆಯನ್ನು ಬರೆಯುವ ತನಕ ಸತ್ಯವೇದದಲ್ಲಿ ಕೇವಲ ಇನ್ನೊಂದು ಸಲ ಮಾತ್ರ ಬರೆಯಲಾಗಿದೆ – ಕೀರ್ತನೆ 110:4. ಆತನ ಬಗ್ಗೆ ಹೆಚ್ಚಿನ ಮಾಹಿತಿ ಏನೂ ಗೊತ್ತಿಲ್ಲ. 3 ನೇ ವಚನದಲ್ಲಿ ಉಪಯೋಗಿಸಲಾಗಿರುವ ಭಾಷೆಯು ಅಸ್ಪಷ್ಟವಾಗಿದೆ. ಈ ಕಾರಣದಿಂದ ಕೆಲವು ವೇದ ಪಂಡಿತರು ಅದು ನಿಜವಾಗಿಯೂ ಯೇಸು ಕ್ರಿಸ್ತನೇ ಎಂದು ಯೋಚಿಸುವವರಾಗಿದ್ದಾರೆ. ಆದರೆ ಒಂದುವೇಳೆ ಮೆಲ್ಕಿಜೆದೆಕನು ನಿಜವಾಗಿಯೂ ಕಾನಾನ್ ದೇಶದಲ್ಲಿದ್ದ ಸಾಲೇಮಿನ ಅರಸನಾಗಿದ್ದರೆ ಆತನು ಯೇಸು ಕ್ರಿಸ್ತನಾಗಿರಲು ಸಾಧ್ಯವಿಲ್ಲ. ಬರಹಗಾರನು ಇಲ್ಲಿ ಹೇಳುವದೇನೆಂದರೆ, ಆತನು ದೇವಕುಮಾರನಲ್ಲ ಬದಲಾಗಿ, ದೇವಕುಮಾರನಿಗೆ "ಸಮಾನನಾಗಿದ್ದಾನೆ". ಹೀಗಿರುವಾಗ, ಆತನು "ತಂದೆ ಅಥವಾ ತಾಯಿ" ಇಲ್ಲದವನಾಗಿದ್ದನು ಎಂಬದಾಗಿ ಹೇಳಿರುವದರ ಅರ್ಥವೇನು? ಇದರ ಅರ್ಥ ಆ ವಿಷಯಗಳ ಕುರಿತು ಯಾವುದೇ ದಾಖಲೆಗಳು ಇಲ್ಲ ಎಂಬದಾಗಿದೆ. ಆತನ ತಂದೆತಾಯಿಗಳು, ವಂಶಾವಳಿ, ಜನನ ಮತ್ತು ಮರಣದ ಬಗ್ಗೆ ನಮಗೆ ಏನೂ ಗೊತ್ತಿಲ್ಲ. ಆತನು ಅನಿರೀಕ್ಷಿತವಾಗಿ ಸತ್ಯವೇದದಲ್ಲಿ ಕಾಣಿಸಿಕೊಳ್ಳುತ್ತಾನೆ ಮತ್ತು ಒಂದೇ ರೀತಿ ಕಾಣಿಸಿಕೊಳ್ಳುತ್ತಾನೆ, ಯಾವಾಗಲೂ ಅರಸನು ಮತ್ತು ಯಾಜಕನಾಗಿ, ಯೇಸು ಕ್ರಿಸ್ತನ ಚಿತ್ರಣವನ್ನು ಸೂಚಿಸುತ್ತಾನೆ. ಆತನು ಒಳ್ಳೆಯ ಚಿತ್ರಣವಾಗಿದ್ದಾನೆ. ಯೇಸು ಕ್ರಿಸ್ತನು ನೀತಿಯ ಅರಸನಾಗಿದ್ದಾನೆ, ಸಮಾಧಾನದ

ಪ್ರಭುವಾಗಿದ್ದಾನೆ, ಅಬ್ರಹಾಮನಿಗಿಂತ ಶ್ರೇಷ್ಠನಾಗಿದ್ದಾನೆ ಮತ್ತು ಆತನಿಗೆ ಆದಿ ಅಂತ್ಯ ಇಲ್ಲ (1:2-3,8,10-12), ಮತ್ತು ಆತನು ಸದಾಕಾಲವೂ ಯಾಜಕನಾಗಿದ್ದಾನೆ (5:6). **4-10**

**7:4-10** ಬರಹಗಾರನು ಮೆಲ್ಕಿಜೆದೆಕನ ಶ್ರೇಷ್ಠತೆಯನ್ನು ತೋರಿಸುತ್ತಾ ಇದ್ದಾನೆ – ಆತನು ಅಬ್ರಹಾಮನಿಗಿಂತಲೂ ಶ್ರೇಷ್ಠನಾಗಿದ್ದಾನೆ (ವ 4-8), ಮತ್ತು ಲೇವಿಯರಿಗಿಂತಲೂ ಶ್ರೇಷ್ಠನಾಗಿದ್ದಾನೆ (ವ 9,10). ಇದರ ಅರ್ಥ ಉನ್ನತವಾದ ಸ್ಥಾನವಾಗಿದೆ. ಯೇಸು ಕ್ರಿಸ್ತನ ಯಾಜಕತ್ವವು ಲೇವಿ ಕುಲದ ಯಾಜಕರ ಯಾಜಕತ್ವಕ್ಕಿಂತಲೂ ಶ್ರೇಷ್ಠವಾಗಿದೆ ಎಂಬದನ್ನು ನಮಗೆ ತೋರಿಸುವದು ಆತನ ಉದ್ದೇಶವಾಗಿದೆ. **4**

**7:4** ಆದಿ 14:20. **5**

**7:5** *"ಲೇವಿ"*– ಇದು ಇಸ್ರಾಯೇಲ್ಯರ ಕುಲಗಳಲ್ಲಿ ಒಂದಾಗಿದ್ದು ಹಳೆ ಒಡಂಬಡಿಕೆಯ ಯಾಜಕರೆಲ್ಲರೂ ಈ ಕುಲದವರೇ ಆಗಿದ್ದಾರೆ (ಸಂಖ್ಯಾ 1:48-53; 3:5-10).

*"ದಶಮಭಾಗಗಳು"*– ಯಾಜಕ 27:30; ಸಂಖ್ಯಾ 18:24-28. **6**

**7:6** *"ಅವರ ವಂಶಾವಳಿಗೆ ಸೇರದೆ ಇರುವವನು"*– ಮೆಲ್ಕಿಜೆದೆಕನು.

*"ಆಶೀರ್ವಾದ ಕೊಟ್ಟನು"*– ಆದಿ 14:19. **7**

**7:7** *"ದೊಡ್ಡವನು"*– ಅಂದರೆ, ಉನ್ನತವಾದ ಸ್ಥಾನದಲ್ಲಿ ಇರುವವನು. **8**

**7:8** *"ಇದಲ್ಲದೆ"*– ಲೇವಿ ಕುಲದಿಂದ ಯಾಜಕರಾಗಿರುವವರ ವಿಷಯದಲ್ಲಿ.

*"ನೋಡಿದರೆ"*– ಮೆಲ್ಕಿಜೆದೆಕನ ವಿಷಯದಲ್ಲಿ.

*"ಜೀವಿಸುತ್ತಿದ್ದಾನೆಂದು"*– ವ 3. **9-10**

**7:9-10** ಲೇವಿಯನು ಮತ್ತು ಅವನ ಕುಲದ ಯಾಜಕರು ಸೇರಿ, ಅಬ್ರಹಾಮನ ಸಂತತಿಯವರೆಲ್ಲರಿಗಿಂತಲೂ ಮೆಲ್ಕಿಜೆದೆಕನು ಉನ್ನತ ಸ್ಥಾನದಲ್ಲಿದ್ದಾನೆ. ಅಬ್ರಹಾಮನು ಮೆಲ್ಕಿಜೆದೆಕನಿಗೆ ಹತ್ತರಲ್ಲೊಂದು ಭಾಗವನ್ನು ಕೊಟ್ಟು ಸುಮಾರು 150 ವರ್ಷಗಳಾದ ನಂತರ ಲೇವಿಯನು ಜನಿಸಿದನು. **11-19**

**7:11-19** ಈ ಅಧ್ಯಾಯದ ಉಳಿದ ಭಾಗದಲ್ಲಿ (ಮತ್ತು 10:18 ರ ತನಕ) ಯೇಸು ಕ್ರಿಸ್ತನು ಯಾಜಕನಾಗಿ ಲೇವಿ ಕುಲದ ಯಾಜಕರಿಗಿಂತ ಹೇಗೆ ಶ್ರೇಷ್ಠನಾಗಿದ್ದಾನೆ ಎಂಬದನ್ನು ಬರಹಗಾರನು ತೋರಿಸುತ್ತಾ ಇದ್ದಾನೆ. ಈ ವಚನಗಳಲ್ಲಿ ಆತನು ಹಳೆ ಒಡಂಬಡಿಕೆಯ ಯಾಜಕತ್ವವು ಸಂಪೂರ್ಣವಾಗಿ ಅಸಮಾಧಾನಕರವಾಗಿತ್ತು ಎಂಬದನ್ನು ತೋರಿಸುವ ಮೂಲಕ ಆತನು ಪ್ರಾರಂಭಿಸುತ್ತಾ ಇದ್ದಾನೆ. ದೇವರು ಯಾವ ಕಾರ್ಯಗಳಾಗ ಬೇಕೆಂದು ಬಯಸಿದ್ದನೋ ಅದನ್ನು ನೆರವೇರಿಸಲು ಒಂದುವೇಳೆ ಅದು ಶಕ್ತವಾಗಿದ್ದರೆ, ಮೆಲ್ಕಿಜೆದೆಕನ ಕ್ರಮದ ನಂತರ ದೇವರು ಮತ್ತೊಂದು ರೀತಿಯ ಯಾಜಕನನ್ನು ವಾಗ್ದಾನ ಮಾಡುತ್ತಾ ಇರಲಿಲ್ಲ. **11**

**7:11** *"ಸಂಪೂರ್ಣ ಸಿದ್ಧಿ"*– 10:14. ಲೇವಿ ಕುಲದ ಯಾಜಕತ್ವವು ಮಾನವರ ಪಾಪಗಳನ್ನು

ಪರಿಹರಿಸಲು ಅಥವಾ ಅವರ ಹೃದಯಗಳನ್ನು ಬದಲಾಯಿಸಲು ಅಥವಾ ಅವರನ್ನು ಪರಲೋಕಕ್ಕೆ ನಡೆಸಲು ಶಕ್ತವಾಗಿರಲಿಲ್ಲ.

*"ಧರ್ಮಶಾಸ್ತ್ರ"*– ದೇವರು ಮೋಶೆಯ ಮೂಲಕ ಧರ್ಮಶಾಸ್ತ್ರ ಕೊಡುವ ಮೊದಲು ಲೇವಿ ಕುಲದವರ ಯಾಜಕತ್ವವು ಇರಲಿಲ್ಲ. ಆ ಯಾಜಕತ್ವವು ಹಳೆ ಒಡಂಬಡಿಕೆಯ ಭಾಗವಾಗಿತ್ತು (ವಿಮೋ 19:5).

*"ಆರೋನನು"*– ಧರ್ಮಶಾಸ್ತ್ರದ ಪ್ರಕಾರ ಮೊದಲನೆಯ ಮಹಾಯಾಜಕನು. ಅವನು, ಲೇವಿ ಕುಲದವನಾಗಿದ್ದನು – ವಿಮೋ 6:16-20; 28:1-3. **12**

**7:12** ಧರ್ಮಶಾಸ್ತ್ರ ಮತ್ತು ಹಳೆ ಒಡಂಬಡಿಕೆಯ ಯಾಜಕತ್ವ ಎರಡೂ ಒಟ್ಟಿಗೆ ಬಂಧಿಸಲ್ಪಟ್ಟಿದ್ದವು. ಒಂದೇನಾದರೂ ವಿಫಲವಾದರೆ ಇಡೀ ವ್ಯವಸ್ಥೆಯೇ ವಿಫಲವಾಗುತ್ತದೆ, ಇಡೀ ಹಳೆ ಒಡಂಬಡಿಕೆ ವಿಫಲವಾಗುತ್ತದೆ (ಬರಹಗಾರನು ಇದನ್ನು 8ನೇ ಅಧ್ಯಾಯದಲ್ಲಿ ತೋರಿಸಿದ್ದಾನೆ). ಆದ್ದರಿಂದ ದೇವರು ಅದನ್ನು ಪಕ್ಕಕ್ಕೆ ಸರಿಸಿದನು ಮತ್ತು ಅದಕ್ಕೆ ಬದಲಾಗಿರುವ ಉತ್ತಮವಾಗಿರುವ ಹೊಸದನ್ನು ಜಾರಿಗೆ ತಂದನು. **14**

**7:14** *"ಯೆಹೂದ"*– ಕರ್ತನಾದ ಯೇಸು ಕ್ರಿಸ್ತನು ಮಾನವನಾಗಿ ಯೆಹೂದ ಕುಲದವನಾಗಿದ್ದಾನೆ (ಮತ್ತಾಯ 1:1,3-6,16). ಯೇಸು ಕ್ರಿಸ್ತನು ಭೂಲೋಕದಲ್ಲಿ ಇದ್ದಾಗ ದೇವಾಲಯದ ಅಧಿಕಾರಿಗಳು ಮಹಾಪರಿಶುದ್ಧ ಸ್ಥಳದೊಳಗೆ ಹೋಗಲು ಅಥವಾ ಯಜ್ಞವೇದಿಯ ಬಳಿಯಲ್ಲಿ ಸೇವೆ ಮಾಡಲು ಅನುಮತಿಸುತ್ತಿರಲಿಲ್ಲ, ಹಾಗೆಯೇ ಆತನೂ ಆ ಕಾರ್ಯಗಳನ್ನು ಮಾಡಲು ಪ್ರಯತ್ನಿಸುತ್ತಾ ಇರಲಿಲ್ಲ (8:4; ಸಂಖ್ಯಾ 3:10 ನೋಡಿರಿ). **15-17**

**7:15-17** ಯಾಜಕತ್ವ ಮತ್ತು ಧರ್ಮಶಾಸ್ತ್ರದಲ್ಲಿ ಬದಲಾವಣೆಯಾಗಿದೆ ಎಂದು ಬರಹಗಾರನು ಈಗಾಗಲೇ ಹೇಳಿದ್ದಾನೆ – ವ 12. ದೇವರು ಯೆಹೂದ ಕುಲದಿಂದ ಒಬ್ಬನನ್ನು ಮಹಾಯಾಜಕನನ್ನಾಗಿ ನೇಮಕ ಮಾಡಿರುವದರಿಂದ ಇದು ಸ್ಪಷ್ಟವಾಗಿರುವದು ಮಾತ್ರವಲ್ಲ ಬದಲಾಗಿ ದೇವರು ಹೊಸ ಆಧಾರದ ಮೇರೆಗೆ ಮಾಡಿರುವದರಿಂದಲೂ ಸ್ಪಷ್ಟವಾಗಿದೆ. ಹಳೆ ಒಡಂಬಡಿಕೆಯ ಯಾಜಕರನ್ನು ಅವರ ವಂಶಾವಳಿಯ ಆಧಾರದ ಮೇರೆಗೆ ಆಯ್ಕೆ ಮಾಡಲಾಗುತ್ತಾ ಇತ್ತು. ಅವರು ಲೇವಿ ಮತ್ತು ಆರೋನನ ವಂಶದವರಾಗಿರಬೇಕಿತ್ತು. ಆದರೆ ದೇವರು ಯೇಸು ಕ್ರಿಸ್ತನ "ಅಂತ್ಯವಿಲ್ಲದ ಜೀವಿತದ" ನಿಮಿತ್ತ ಆತನನ್ನು ಆಯ್ಕೆ ಮಾಡಿದನು – ವ 16,24. **17**

**7:17** ಕೀರ್ತನೆ 110:4 ರಲ್ಲಿ ಹೇಳಲಾಗಿರುವ ಪ್ರವಾದನೆಯು, ದೇವರು ಹಳೆ ಒಡಂಬಡಿಕೆಯೊಂದಿಗೆ ಅದರ ಯಾಜಕತ್ವ ಹಾಗೂ ಧರ್ಮಶಾಸ್ತ್ರವನ್ನು ಪಕ್ಕಕಿಡುವ ಪ್ರವಾದನೆಯೂ ಆಗಿದೆ ಎಂಬದನ್ನು ಬರಹಗಾರನು ತೋರಿಸುತ್ತಾ ಇದ್ದಾನೆ. **18**

**7:18** *"ಮೊದಲಿದ್ದ ನಿಯಮ"*– ಆರೋನ ಮತ್ತು ಲೇವಿಯ ವಂಶದವರು ಮಾತ್ರವೇ

ಯಾಜಕರಾಗಬೇಕೆಂಬ ನಿಯಮ. ಆ ನಿಯಮವು "ದುರ್ಬಲ ಮತ್ತು ಪ್ರಯೋಜನವಿಲ್ಲದ್ದಾಗಿತ್ತು" ಆದ್ದರಿಂದ ಅದರ ಮೇಲೆ ಆಧಾರವಾಗಿದ್ದ ಹಳೆ ಒಡಂಬಡಿಕೆಯ ಯಾಜಕತ್ವ ಮತ್ತು ಹಳೆ ಒಡಂಬಡಿಕೆ ಸಹ ಮಾನವರಿಗೆ ರಕ್ಷಣೆಯನ್ನು ಒದಗಿಸಲಾರದೆ ದುರ್ಬಲ ಹಾಗೂ ಪ್ರಯೋಜನವಿಲ್ಲದ್ದಾಗಿತ್ತು. ಅವುಗಳು ಏನೂ ಮಾಡಲಾಗದವುಗಳಾಗಿದ್ದವು ಮತ್ತು ಯಾರೊಬ್ಬರೂ ಪರಿಪೂರ್ಣರಾಗಿರಲಿಲ್ಲ – ವ 11. ಇದರಿಂದ ನಾವು ಅತ್ಯಂತ ಪ್ರಾಮುಖ್ಯವಾದ ಪಾಠವನ್ನು ಕಲಿತುಕೊಳ್ಳಬೇಕು. ದೇವರೇ ಸ್ಥಾಪಿಸಿದ ಹಳೆ ಒಡಂಬಡಿಕೆಯ ಯಾಜಕತ್ವವು ದುರ್ಬಲ ಹಾಗೂ ಪ್ರಯೋಜನವಿಲ್ಲದ್ದಾಗಿದ್ದರಿಂದ, ಯಾವುದೇ ಧರ್ಮದಲ್ಲಾದರೂ ಮಾನವರು ಯಾಜಕರಾಗಿದ್ದರೆ ಅವರೂ ಇನ್ನೂ ದುರ್ಬಲರು ಹಾಗು ಪ್ರಯೋಜನವಿಲ್ಲದವರು ಆಗಿರುತ್ತಾರೆ ಎಂದು ದೃಢವಾಗಿ ಹೇಳಬಹುದು. ಆದರೆ ದೇವರು ದುರ್ಬಲ ಹಾಗೂ ಪ್ರಯೋಜನವಿಲ್ಲದ್ದು ಎಂಬದಾಗಿ ಗುರುತಿಸಲ್ಪಡುವಂಥದ್ದನ್ನು ಯಾಕೆ ಸ್ಥಾಪಿಸಿದನು? ಅದು ದುರ್ಬಲ ಹಾಗೂ ಪ್ರಯೋಜನವಿಲ್ಲದ್ದಾಗಿದೆ ಎಂದು ನಮಗೆ ಕಲಿಸಲು ಹಾಗೂ ನಮಗೆ ಮಹಾಯಾಜಕನಾಗಿರುವ ಯೇಸು ಕ್ರಿಸ್ತನ ಅವಶ್ಯಕತೆ ಇದೆ ಎಂದು ತೋರಿಸಲು ಅದನ್ನು ಸ್ಥಾಪಿಸಿದನು. **19**

**7:19** *"ಉತ್ತಮವಾಗಿರುವ ನಿರೀಕ್ಷೆ"*– 6:18-20. ಇದು ಯೇಸು ಕ್ರಿಸ್ತನ ಯಾಜಕತ್ವಕ್ಕೆ ಸಂಬಂಧಿಸಿದ ವಿಷಯವಾಗಿದೆ. ಆತನು ಮತ್ತು ನಮ್ಮ ಪರವಾಗಿ ಯಾಜಕನಾಗಿ ಆತನು ಮಾಡಿರುವ ಕಾರ್ಯದ ನಿಮಿತ್ತ ನಾವು "ದೇವರನ್ನು ಸಮೀಪಿಸಬಹುದು" – 10:19-22. **20-22**

**7:20-22** ಯೇಸು ಕ್ರಿಸ್ತನ ಯಾಜಕತ್ವವು ಲೇವಿ ಕುಲದವರ ಯಾಜಕತ್ವಕ್ಕಿಂತ ಯಾಕೆ ಶ್ರೇಷ್ಠವಾಗಿದೆ ಎಂಬದಕ್ಕೆ ಬರಹಗಾರನು ಮತ್ತೊಂದು ಕಾರಣವನ್ನು ಕೊಟ್ಟಿದ್ದಾನೆ. ದೇವರು ಯೇಸು ಕ್ರಿಸ್ತನನ್ನು ಮಹಾಯಾಜಕನನ್ನಾಗಿ ನೇಮಿಸಿದಾಗ ಆತನೇ ಯಾಜಕನಾಗಿರುವನೆಂದು ಆತನು ವಾಗ್ದಾನ ಮಾಡಿದನು. ಆದರೆ ಲೇವಿ ಕುಲದ ಯಾಜಕರ ವಿಷಯದಲ್ಲಿ ಇಂಥದ್ದೇನೂ ಇರಲಿಲ್ಲ. ದೇವರ ಪ್ರತಿಜ್ಞೆಯು ಆತನ ಬದಲಾಗದ ಉದ್ದೇಶವನ್ನು ಪ್ರಕಟಿಸುತ್ತದೆ – 6:17. ಯೆಹೂದ್ಯರು (ಮತ್ತು ನಾವು) ಯೇಸು ಕ್ರಿಸ್ತನ ಯಾಜಕತ್ವದ ವಿಷಯದಲ್ಲಿ ಸಂಪೂರ್ಣವಾದ ದೃಢತೆಯುಳ್ಳವರಾಗಿರಬೇಕೆಂದು ಆತನು ಬಯಸಿದನು. ಆ ಯಾಜಕತ್ವವು ಮಾನವರ ರಕ್ಷಣೆಗೆ ಅವಶ್ಯವಾಗಿರುವ ಅಸ್ತಿವಾರವಾಗಿದೆ. ಒಂದುವೇಳೆ ಯೇಸು ಕ್ರಿಸ್ತನು ಮೆಲ್ಕಿಜೆದೇಕನ ಕ್ರಮದ ನಂತರ ಯಾಜಕನಲ್ಲವೆಂದರೆ, ಯಾರಿಗೂ, ಯಾವಾಗಲು ರಕ್ಷಣೆಯೇ ಆಗುವದಿಲ್ಲ. **22**

**7:22** *"ಶ್ರೇಷ್ಠವಾದ ಒಡಂಬಡಿಕೆ"*– ಬರಹಗಾರನು 8:6-13 ರಲ್ಲಿ ಇದರ ಬಗ್ಗೆ ತಿಳಿಸಿದ್ದಾನೆ. **23-25**

**7:23-25** ಯೇಸು ಕ್ರಿಸ್ತನು ಯಾಜಕನಾಗಿ ಹಳೆ ಒಡಂಬಡಿಕೆಯ ಯಾಜಕರಿಗಿಂತ ಯಾಕೆ

ಶ್ರೇಷ್ಠನಾಗಿದ್ದಾನೆ ಎಂಬದಕ್ಕೆ ಇಲ್ಲಿ ಮತ್ತೊಂದು ಕಾರಣವನ್ನು ನಾವು ನೋಡಬಹುದು. ಯೇಸು ಕ್ರಿಸ್ತನ ಯಾಜಕತ್ವವು ಶಾಶ್ವತವಾಗಿದೆ, ಅವರದ್ದು ಶಾಶ್ವತವಾಗಿರಲಿಲ್ಲ. ಇಸ್ರಾಯೇಲಿನ ಪ್ರತಿಯೊಬ್ಬ ಮಹಾಯಾಜಕನು ಸತ್ತುಹೋದನು ಮತ್ತು ತನ್ನ ಕೆಲಸ ಹಾಗೂ ಸ್ಥಾನವನ್ನು ಬೇರೆಯವರಿಗೆ ಬಿಟ್ಟು ಹೋಗುತ್ತಿದ್ದನು. ಆರೋನನು ಮತ್ತು ಕ್ರಿ.ಶ 70 ರ ನಡುವೆ (ದೇವಾಲಯವು ನಾಶವಾದಾಗ) ಸುಮಾರು ಎಂಭತ್ತು ಮಂದಿ ಮಹಾಯಾಜಕರಿದ್ದರು. ಯೇಸು ಕ್ರಿಸ್ತನು ಜೀವಿಸುವವನಾಗಿದ್ದಾನೆ ಮತ್ತು ತನ್ನ ಕೆಲಸವನ್ನು ಶಾಶ್ವತವಾಗಿ ಮುಂದುವರೆಸುವವನಾಗಿದ್ದಾನೆ. ಇದರ ಫಲಿತಾಂಶವಾಗಿ ಆತನು ತನ್ನ ಜನರನ್ನು ಶಾಶ್ವತವಾಗಿ ಕಾಯಲು ಶಕ್ತನಾಗಿದ್ದಾನೆ. **25**

**7:25** "ಸಂಪೂರ್ಣವಾಗಿ" ಎಂದು ಭಾಷಾಂತರ ಮಾಡಲಾಗಿರುವ ಪದವನ್ನು "ಶಾಶ್ವತವಾಗಿ" ಎಂದು ಸಹ ಭಾಷಾಂತರ ಮಾಡಬಹುದು. ಈ ಎಲ್ಲಾ ವಿಷಯಗಳನ್ನು ಇಲ್ಲಿ ತಿಳಿಸಲಾಗಿದೆ. ಯೇಸು ಕ್ರಿಸ್ತನು ಜನರನ್ನು ಸಂಪೂರ್ಣವಾಗಿ, ಎಲ್ಲಾ ಸಮಯಗಳಲ್ಲಿಯೂ ನಿತ್ಯತ್ವದ ತನಕ ಕಾಯುತ್ತಾನೆ. ಆದರೆ ಆತನು "ತನ್ನ ಮೂಲಕ ದೇವರ ಬಳಿಗೆ ಬರುವವರನ್ನು" – ದೇವರ ಬಳಿಗೆ ಹೋಗಲು ಆತನೊಬ್ಬನೇ ಮಾರ್ಗ (ಯೋಹಾನ 14:6); ದೇವರು ಮತ್ತು ಮಾನವನ ನಡುವೆಯಿರುವ ಮಧ್ಯಸ್ಥನು (1 ತಿಮೊ 2:5), ತಮ್ಮ ಪಾಪಗಳಿಗೆ ತನ್ನನ್ನೇ ಅರ್ಪಿಸಿಕೊಂಡ ಪಾಪಪರಿಹಾರಕ ಯಜ್ಞ (ವ 27; 9:28; 10:10; 1 ಪೇತ್ರ 3:18) ಎಂದು ಅಂಗೀಕರಿಸಿಕೊಳ್ಳುವವರನ್ನು ರಕ್ಷಿಸುತ್ತಾನೆ. "ಆದಕಾರಣ" - ಯೇಸು ಕ್ರಿಸ್ತನು ಜನರನ್ನು ಸಂಪೂರ್ಣವಾಗಿ ಮತ್ತು ಶಾಶ್ವತವಾಗಿ ರಕ್ಷಿಸುವಂಥದ್ದು ಅವರಿಗಾಗಿ ಆತನು ಮಾಡುವ ಮಧ್ಯಸ್ಥಿಕೆಗೆ ಸಂಬಂಧಿಸಿದ್ದಾಗಿದೆ. 9:24; 1 ಯೋಹಾನ 2:1; ರೋಮಾ 8:34 ನೋಡಿರಿ. ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಪರಲೋಕದಲ್ಲಿರುವ ಆತನ ಜೀವಿತದ ಮೂಲಕ ರಕ್ಷಣೆಯ ಸ್ಥಿತಿಯಲ್ಲಿ ಸುರಕ್ಷಿತವಾಗಿದ್ದಾರೆ – ರೋಮಾ 5:9-10. ಆತನು ಇನ್ನೂ ಭೂಮಿಯಲ್ಲಿರುವಾಗಲೇ ತನ್ನ ಜನರಿಗಾಗಿ ತಾನು ಮಾಡುವ ಪ್ರಾರ್ಥನೆಗಳು ಏನಾಗಿವೆ ಎಂಬದಕ್ಕೆ ಉದಾಹರಣೆಗಳನ್ನು ತಿಳಿಸಿದ್ದಾನೆ – ಯೋಹಾನ 17; ಲೂಕ 22:32. ಆತನು ಪರಲೋಕದಲ್ಲಿ ಮಧ್ಯಸ್ಥಿಕೆಯನ್ನು ಮಾಡುವ ಮಹಾಯಾಜಕನಾಗಿರುವದರಿಂದ ವಿಶ್ವಾಸಿಗಳೆಲ್ಲರನ್ನು ಪ್ರಭಾವಕ್ಕೆ ನಡೆಸಲು (2:10), ಶೋಧನೆಗಳ ಸಮಯದಲ್ಲಿ ಅವರಿಗೆ ಸಹಾಯ ಮಾಡಲು (2:18; 4:16) ಮತ್ತು ಅವರು ತಮ್ಮ ನಂಬಿಕೆಯನ್ನು ಕಡೆಯ ತನಕ ಸ್ಥಿರವಾಗಿ ಹಿಡಿದುಕೊಳ್ಳಲು ಬಲಪಡಿಸುವಾತನಾಗಿದ್ದಾನೆ (3:6,14; 10:39). **26-28**

**7:26-28** ಯೇಸು ಕ್ರಿಸ್ತನ ಯಾಜಕತ್ವವು ಹಳೆ ಒಡಂಬಡಿಕೆಯ ಯಾಜಕತ್ವಕ್ಕಿಂತಲೂ ಯಾಕೆ ಶ್ರೇಷ್ಠವಾಗಿದೆ ಎಂಬದಕ್ಕೆ ಬರಹಗಾರನು ಮತ್ತೊಂದು ಕಾರಣವನ್ನು ಕೊಟ್ಟಿದ್ದಾನೆ: ಅದೇನೆಂದರೆ ಯೇಸು ಕ್ರಿಸ್ತನು ಆ ಎಲ್ಲಾ ಯಾಜಕರಿಗಿಂತಲೂ ಅತ್ಯಂತ ಶ್ರೇಷ್ಠನಾಗಿದ್ದಾನೆ. ಆತನು ನಮ್ಮ ನಿಜವಾದ ಅವಶ್ಯಕತೆಗಳನ್ನ ಪೂರೈಸುತ್ತಾನೆ; ಆದರೆ ಅವು ಅವರಿಂದ

ಸಾಧ್ಯವಿಲ್ಲ. ಆತನು ಸಂಪೂರ್ಣವಾಗಿ ಪರಿಶುದ್ಧನಾಗಿದ್ದಾನೆ; ಅವರು ಪಾಪ ಸ್ವಭಾವದವರಾಗಿದ್ದರು ಮತ್ತು ತಮ್ಮ ಪಾಪಗಳಿಗಾಗಿಯೇ ಪರಿಹಾರಕ ಯಜ್ಞಗಳನ್ನು ಅರ್ಪಿಸುವವರಾಗಿದ್ದರು. ಅವರು ಜನರಿಗಾಗಿ ಮತ್ತೆಮತ್ತೆ ಯಜ್ಞಗಳನ್ನು ಅರ್ಪಿಸುತ್ತಿದ್ದರು; ಆತನು ತನ್ನನ್ನೇ ಯಜ್ಞವಾಗಿ ಅರ್ಪಿಸುವ ಮೂಲಕ ಒಂದೇ ಸಲ ಅವರ ಪಾಪಗಳನ್ನು ಕ್ಷಮಿಸಿದನು. ಅವರು ದುರ್ಬಲರಾಗಿದ್ದರು; ಆತನು ದೇವಕುಮಾರನಾಗಿದ್ದಾನೆ. **26**

**7:26** *"ಪಾಪಿಗಳಲ್ಲಿ ಸೇರದೆ ಪ್ರತ್ಯೇಕನಾಗಿರುವವನು"*– ಭೂಲೋಕದಲ್ಲಿ ಆತನು ಪಾಪಿಗಳ ನಡುವೆ ಜೀವಿಸಿದನು, ಅವರೊಂದಿಗೆ ಊಟ ಮಾಡಿದನು, ಅವರನ್ನು ಸೇರಿಸಿಕೊಂಡನು, ಅವರ ಸ್ನೇಹಿತರೆಂದು ಹೆಸರು ಪಡೆದನು, ಅವರಿಗೆ ಪ್ರೀತಿ ತೋರಿಸಿದನು, ಅವರಿಗಾಗಿ "ಪಾಪಿಯಾದನು" ಮತ್ತು ಅವರಿಗಾಗಿ ಪ್ರಾಣ ಕೊಟ್ಟನು – ಮತ್ತಾಯ 11:19; ಲೂಕ 15:2; ರೋಮಾ 5:8; 2 ಕೊರಿಂಥ 5:21; 1 ಪೇತ್ರ 3:18. ಆದರೆ ಸ್ವಭಾವದ ವಿಷಯಕ್ಕೆ ಬರುವಾಗ ಆತನು ಯಾವಾಗಲೂ ಅವರಿಗಿಂತ ಪ್ರತ್ಯೇಕವಾಗಿದ್ದನು. ಅವರ ಪಾಪಸ್ವಭಾವವು ಆತನನ್ನು ಕಳಂಕಿತನನ್ನಾಗಿ ಮಾಡಲಿಲ್ಲ. ಆತನ ಪಾಪಸ್ವಭಾವವಿಲ್ಲದವನಾಗಿದ್ದನು ಮತ್ತು ಎಂದಿಗೂ ಪಾಪ ಮಾಡಲಿಲ್ಲ.

*"ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನು"*– 1:3; 8:1 – ಇದನ್ನು ನಾವು ಬೇರೆ ಯಾವ ಯಾಜಕನ ವಿಷಯದಲ್ಲಿಯೂ ನೋಡಲು ಆಗುವದಿಲ್ಲ. **28**

**7:28** *"ಆಣೆ"*– ವ 20-22.

*"ಧರ್ಮಶಾಸ್ತ್ರದ ತರುವಾಯ"*– ಧರ್ಮಶಾಸ್ತ್ರ ಮತ್ತು ಹಳೆ ಒಡಂಬಡಿಕೆಯ ಯಾಜಕತ್ವವು ರಕ್ಷಣೆ ಕೊಡಲು ದುರ್ಬಲವಾಗಿದೆ ಮತ್ತು ಪ್ರಭಾವವಿಲ್ಲದ್ದಾಗಿದೆ ಆದ್ದರಿಂದ, ದೇವರು ಬೇರೊಂದು ಮಾರ್ಗವನ್ನು ನೇಮಕ ಮಾಡಿದನು.

*"ಸದಾಕಾಲಕ್ಕೂ ಪ್ರತಿಷ್ಠಿಸಿದ್ದಾನೆ"*– ಇದನ್ನು ನಾವು ಬೇರೆ ಯಾವ ಯಾಜಕನ ವಿಷಯದಲ್ಲಿಯೂ ನೋಡಲು ಆಗುವದಿಲ್ಲ – ವ 19.

# 8 1-13

**8:1-13** ಯೇಸು ಕ್ರಿಸ್ತನ ಯಾಜಕತ್ವವು ಹಳೆ ಒಡಂಬಡಿಕೆಯ ಯಾಜಕರಿಗಿಂತ (ಮತ್ತು ಊಹಿಸಿಕೊಳ್ಳಬಹುದಾದ ಮಾನವ ಯಾಜಕನಿಗಿಂತ) ಶ್ರೇಷ್ಠವಾಗಿದೆ ಎಂಬದನ್ನು ತೋರಿಸುವ ಕಾರ್ಯವನ್ನು ಮುಂದುವರೆಸುತ್ತಿದ್ದಾನೆ. ಅದು ಶ್ರೇಷ್ಠವಾಗಿದೆ ಯಾಕಂದರೆ ಆತನು ಪರಲೋಕದಲ್ಲಿರುವ ದೇವರ ನಿಜವಾದ ಆಲಯದಲ್ಲಿ ಸೇವಿಸುವವನಾಗಿದ್ದಾನೆ, ಆದರೆ ಹಳೆ ಒಡಂಬಡಿಕೆಯ ಯಾಜಕರೆಲ್ಲರೂ ತಮ್ಮ ಕಾರ್ಯಗಳನ್ನು ಪರಲೋಕ ದೇವಾಲಯದ ಸಣ್ಣ ಚಿತ್ರಣವಾಗಿರುವ ಭೂಲೋಕದ ದೇವಾಲಯದಲ್ಲಿ ಮಾಡುತ್ತಾ ಇದ್ದರು – ವ 1-5. ಹಾಗೆಯೇ ಯೇಸು ಕ್ರಿಸ್ತನ ಯಾಜಕತ್ವವು ಶ್ರೇಷ್ಠವಾಗಿದೆ ಯಾಕಂದರೆ ಅದು ಹಳೆ

ಒಡಂಬಡಿಕೆಗಿಂತಲೂ ಉತ್ತಮವಾದ ಒಡಂಬಡಿಕೆಯೊಂದಿಗೆ ಹೊಂದಿಕೆಯಾಗಿದೆ – ವ 6-13. **1**

**8:1** 1:3; 7:26 ನೋಡಿರಿ. **2**

**8:2** *"ನಿಜವಾದ ದೇವದರ್ಶನ ಗುಡಾರ"*– 9:1,11; ಪ್ರಕ 7:15; 11:19; 13:6; 14:15; 15:5-6; 16:1. ಆತ್ಮೀಕ, ಪರಲೋಕದ ದೇವದರ್ಶನ ಗುಡಾರ (ಅಥವಾ ಆಲಯವನ್ನು) ವಿಮೋಚನಕಾಂಡ 25-30 ಅಧ್ಯಾಯಗಳಲ್ಲಿ ವಿವರಿಸಲಾಗಿರುವ ಹಳೆ ಒಡಂಬಡಿಕೆಯ ಆಲಯಕ್ಕೆ ವ್ಯತ್ಯಾಸವಾಗಿ "ನಿಜವಾದದ್ದು" ಎಂದು ಕರೆಯಲಾಗಿದೆ. ಹಳೆ ಒಡಂಬಡಿಕೆಯ ದೇವದರ್ಶನ ಗುಡಾರವು "ನಿಜವಲ್ಲದ್ದಾಗಿರಲಿಲ್ಲ", ಬದಲಾಗಿ ಅದು ಛಾಯೆ ಅಥವಾ ನಿಜವಾದದ್ದರ (ಪರಲೋಕದಲ್ಲಿರುವದರ) ಚಿತ್ರಣವಾಗಿತ್ತು – ವ 5; 9:23-24; 10:1. ವಿಮೋ 25:9 ನೋಡಿರಿ. (ಪರಲೋಕದ ದೇವದರ್ಶನ ಗುಡಾರವು ಭೂಲೋಕಕ್ಕೆ ವಿಸ್ತರಿಸಿಕೊಳ್ಳುವ ಹಾಗೆ ಅನ್ನಿಸುತ್ತದೆ. ಮಹಾಪರಿಶುದ್ಧ ಸ್ಥಳ, ದೇವರ ತಕ್ಷಣದ ಪ್ರಸನ್ನತೆ ಪರಲೋಕದಲ್ಲಿ ಮಾತ್ರವೇ ಇದೆ. ತಾಮ್ರದ ಯಜ್ಞವೇದಿ – ವಿಮೋ 27:1-8 – ಯೇಸು ಕ್ರಿಸ್ತನು ಯಜ್ಞವಾಗಿ ತನ್ನ ಪ್ರಾಣವನ್ನು ಅರ್ಪಿಸಿದ ಕಲ್ವಾರಿಯ ಚಿತ್ರಣವಾಗಿದೆ. ಪರಲೋಕ ದೇವದರ್ಶನ ಗುಡಾರದ ಪಾತ್ರೆ ಅಥವಾ ಗಂಗಾಳವು ಭೂಲೋಕದಲ್ಲಿದೆ – ವಿಮೋ 30:17-21 ರೊಂದಿಗೆ ಹೋಲಿಸಿ ನೋಡಿರಿ. ಪರಿಶುದ್ಧ ಸ್ಥಳ ಭೂಮಿಯ ಮೇಲಿರುವ ಯೇಸು ಕ್ರಿಸ್ತನ ಸಭೆಯಾಗಿದೆ – ವಿಮೋ 25:31-40; ಪ್ರಕ 1:12-13; 2:1 ರೊಂದಿಗೆ ಹೋಲಿಸಿ ನೋಡಿರಿ. ವಿಮೋ 30 ರ ಕೊನೆಯಲ್ಲಿ ನೋಟ್ಸ್ ನೋಡಿರಿ. **3**

**8:3** 5:1 ನೋಡಿರಿ.

*"ಮಹಾಯಾಜಕನು"*– ಕರ್ತನಾದ ಯೇಸು ಕ್ರಿಸ್ತನು. ತನ್ನನ್ನು ಮತ್ತು ತನ್ನ ಸ್ವಂತ ರಕ್ತವನ್ನು ಆತನು ಸಮರ್ಪಿಸುವವನಾಗಿದ್ದನು – 7:27; 9:14. **5**

**8:5** ವಚನ 2.

*"ಮೋಶೆಗೆ ದೈವೋಕ್ತಿ ಉಂಟಾಯಿತು"*– ವಿಮೋ 25:8-9,40; 26:30; 27:8. ದೇವರು ಯಾವ ವಿಷಯದಲ್ಲಾದರೂ ನಾಲ್ಕು ಸಲ ಲಘುವಾಗಿ ಹೇಳುವದಿಲ್ಲ. ಭೂಲೋಕದ ದೇವದರ್ಶನ ಗುಡಾರವು ಪರಲೋಕದ ಸತ್ಯಗಳನ್ನು ಕಲಿಸಬೇಕೆಂದು ಆತನು ಬಯಸಿದನು. ತಾನು ಸೂಚಿಸಿರುವ ವಿಧಾನದಲ್ಲಿ ಮಾಡದೆ ಇರುವ ದೇವದರ್ಶನ ಗುಡಾರದಿಂದ ಆ ಸತ್ಯಕ್ಕೆ ಧಕ್ಕೆ ಉಂಟಾಗುವದು ಆತನಿಗೆ ಇಷ್ಟವಿರಲಿಲ್ಲ. **6**

**8:6** ಬರಹಗಾರನು ಈಗ ಮೋಶೆಯ ಮೂಲಕ ಆತನು ನೀಡಿದ ಹಳೆ ಒಡಂಬಡಿಕೆ ಮತ್ತು ಯೇಸು ಕ್ರಿಸ್ತನು ಸ್ಥಾಪಿಸಿದ ಹೊಸ ಒಡಂಬಡಿಕೆಯನ್ನು ಹೋಲಿಕೆ ಮಾಡಲು ಪ್ರಾರಂಭಿಸುತ್ತಾ ಇದ್ದಾನೆ. ಆತನು ಈ ಹೋಲಿಕೆಯನ್ನು 10:18 ರ ತನಕ ಮುಂದುವರೆಸಿದ್ದಾನೆ. ವಿಮೋ 19:5-6,21-25 ರಲ್ಲಿ ಹಳೆ ಒಡಂಬಡಿಕೆಯ ನೋಟ್ಸ್ ನೋಡಿರಿ; ಯೆರೆ 31:31-34; ಮತ್ತಾಯ 26:28 ರಲ್ಲಿ ಹೊಸ ಒಡಂಬಡಿಕೆಯ ನೋಟ್ಸ್ ನೋಡಿರಿ. 2 ಕೊರಿಂಥ 3:6-18

ರಲ್ಲಿ ಹಳೆ ಮತ್ತು ಹೊಸದರ ನಡುವೆಯಿರುವ ಮತ್ತೊಂದು ಹೋಲಿಕೆಯನ್ನು ನೋಡಿರಿ. ಹಳೆಯದಕ್ಕಿಂತ ಹೊಸದು ಹೆಚ್ಚು ಶ್ರೇಷ್ಠವಾಗಿದೆ ಯಾಕಂದರೆ ಅದು ಮಾನವರ ರಕ್ಷಣೆಯಲ್ಲಿ ದೇವರು ಏನು ಬಯಸಿದನೋ ಅದನ್ನು ಮಾಡುವದಾಗಿದೆ, ಆದರೆ ಹಳೆಯದು ಅದನ್ನು ಮಾಡುವದಾಗಿರಲಿಲ್ಲ. ಹಳೆ ಒಡಂಬಡಿಕೆಯಲ್ಲಿ ದೇವರು ಇಸ್ರಾಯೇಲ್ ಜನರಿಗೆ ಒಂದುವೇಳೆ ನೀವು ನನ್ನ ನಿಯಮಗಳಿಗೆ ವಿಧೇಯರಾದರೆ ನಾವು ನಿಮಗೆ ನನ್ನ ಆಶೀರ್ವಾದಗಳನ್ನು ಕೊಡುವೆನು ಎಂಬದಾಗಿ ವಾಗ್ದಾನ ಮಾಡಿದನು. ಹೊಸ ಒಡಂಬಡಿಕೆಯಲ್ಲಿ ದೇವರು ಪಾಪಗಳ ಕ್ಷಮಾಪಣೆ, ಹೊಸ ಹೃದಯ, ನಿತ್ಯಜೀವದ ಫಲಿತಾಂಶವಾಗಿರುವ ದೇವರ ಕುರಿತಾದ ತಿಳುವಳಿಕೆಯನ್ನು ವಾಗ್ದಾನ ಮಾಡಿದ್ದಾನೆ. ಇವುಗಳನ್ನು ಹೊಂದಲು ಮಾನವನು ಪಶ್ಚಾತ್ತಾಪಪಡಬೇಕು ಹಾಗೂ ನಂಬಿಕೆಯಿಡಬೇಕಾಗಿದೆ.

*"ಉತ್ತಮ ವಾಗ್ದಾನಗಳು"*– ವ 10-12. ಯೇಸು ಕ್ರಿಸ್ತನು ಹೊಸ ಒಡಂಬಡಿಕೆಯ "ಮಧ್ಯಸ್ಥಿಕನಾಗಿದ್ದಾನೆ" – 9:15; 12:24. ಆತನ ಮೂಲಕ ದೇವರು ಅದನ್ನು ಸ್ಥಾಪಿಸಿದನು ಮತ್ತು ಆತನ ಮೂಲಕ ದೇವರು ಅದನ್ನು ಸತತವಾಗಿ ಪರಿಣಾಮಕಾರಿಯನ್ನಾಗಿ ಮಾಡುತ್ತಾನೆ. **7**

**8:7** ಹಳೆ ಒಡಂಬಡಿಕೆಯಲ್ಲಿದ್ದ ದೋಷವೇನು? ಜನರೆಲ್ಲರೂ ಪಾಪಗಳಾಗಿದ್ದರು ಮತ್ತು ದೇವರ ನಿಯಮಗಳಿಗೆ ವಿಧೇಯರಾಗಲು ಆಗದವರಾಗಿದ್ದರು. ಆದ್ದರಿಂದ ಅದರ ಮೂಲಕ ಆಶೀರ್ವಾದಗಳು ದೊರೆಯುವ ಬದಲು ಅವರಿಗೆ ಶಾಪಗಳು ಉಂಟಾದವು – ರೋಮಾ 8:3; ಗಲಾ 3:10-13. **8-12**

**8:8-12** ಯೆರೆ 31:31-34 ರ ನೋಟ್ಸ್ ನೋಡಿರಿ. **9**

**8:9** *"ಅವರು ನನ್ನ ಒಡಂಬಡಿಕೆಯಲ್ಲಿ ಸ್ಥಿರವಾಗಿ ನಿಲ್ಲಲಿಲ್ಲ"*– ಇದುವೇ ದೊಡ್ಡ ಸಮಸ್ಯೆಯಾಗಿದೆ. ಹಳೆ ಒಡಂಬಡಿಕೆಯ ಧರ್ಮಶಾಸ್ತ್ರವು ಜನರಿಗೆ ಏನು ಮಾಡಬೇಕು ಮತ್ತು ಹೇಗಿರಬೇಕು ಎಂಬದನ್ನು ತಿಳಿಸುತ್ತಾ ಇತ್ತು, ಆದರೆ ಅವುಗಳನ್ನು ಮಾಡಲು ಅಥವಾ ಹಾಗಿರಲಿ ಸಹಾಯ ಮಾಡಲು ಅಶಕ್ತವಾಗಿತ್ತು. ವಿಮೋಚನಕಾಂಡದಿಂದ ಮಲಾಕಿಯ ತನಕದ ಹಳೆ ಒಡಂಬಡಿಕೆಯ ಇಡೀ ಚರಿತ್ರೆಯು ಇಸ್ರಾಯೇಲ್ಯರ ವಿಫಲತೆ ಹಾಗೂ ಅಪನಂಬಿಗಸ್ಥಿಕೆಯ ಚರಿತ್ರೆಯಾಗಿದೆ. **10**

**8:10** ದೇವರು ಇಲ್ಲಿ ತನ್ನ ಜನರನ್ನು ಹೊಸಬರನ್ನಾಗಿ ಮತ್ತು ವ್ಯತ್ಯಾಸವುಳ್ಳವರನ್ನಾಗಿ ಮಾಡುವ, ಅವರಿಗೆ ಆತನ ಆಜ್ಞೆಗಳಿಗೆ ವಿಧೇಯವಾಗುವ ಮನಸ್ಸು ಹಾಗೂ ಹೃದಯವನ್ನು ಕೊಡುವ ವಾಗ್ದಾನವನ್ನು ಮಾಡಿದ್ದಾನೆ (ಯೋಹಾನ 1:12-13; 3:3-8; ರೋಮಾ 8:3-4; 2 ಕೊರಿಂಥ 5:17; 1 ಪೇತ್ರ 1:23 ರೊಂದಿಗೆ ಹೋಲಿಸಿ ನೋಡಿರಿ).

*"ನನ್ನ ಜನರು"*– 2 ಕೊರಿಂಥ 6:16-18; 1 ಪೇತ್ರ 2:9-10. **11**

**8:11** *"ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು"*– ಮತ್ತಾಯ 11:27; ಯೋಹಾನ

14:7,17; 17:3,6; 2 ಕೊರಿಂಥ 4:6. ಹೊಸ ಒಡಂಬಡಿಕೆಯು ದೇವರ ಜ್ಞಾನವನ್ನು ವಾಗ್ದಾನ ಮಾಡುತ್ತದೆ ಮತ್ತು ಅದು ವಾಗ್ದಾನ ಮಾಡಿರುವದನ್ನು ನಮಗೆ ಕೊಡುತ್ತದೆ. ಇದು ದೇವರ ಕುರಿತಾಗಿರುವ ಸಾಧಾರಣ ಜ್ಞಾನವಲ್ಲ, ಬದಲಾಗಿ ನೇರವಾದ, ಆತ್ಮೀಕ ಜ್ಞಾನವಾಗಿದೆ. ಬೇರೆ ಯಾವ ಮಾರ್ಗ, ಯಾವ ತತ್ವ, ಯಾವ ಧಾರ್ಮಿಕ ಪದ್ಧತಿ ಇದನ್ನು ಕೊಡಲಾರದು. 1 ಕೊರಿಂಥ 1:19-21; 2:7-16; ಕೊಲೊ 2:8 ರ ನೋಟ್ಸ್ ನೋಡಿರಿ. **12**

**8:12** ಯೆಶಾಯ 44:22; ಮೀಕ 7:19; ಲೂಕ 24:47; ಅಪೊ 13:38-39; ರೋಮಾ 4:6-8; 8:33. 8-12 ವಚನಗಳಲ್ಲಿ "ನಾನು" ಎಂದು ಮತ್ತೆಮತ್ತೆ ಹೇಳಲಾಗಿರುವದನ್ನು ಗಮನಿಸಿರಿ. ಹೊಸ ಒಡಂಬಡಿಕೆಯು "ನಾನು" ಎಂಬದರ ಮೇಲೆ ಆಧಾರವಾಗಿದೆ. ಹಳೆ ಒಡಂಬಡಿಕೆಯು "ನಾವು" ಎಂಬ ಜನರ ಮಾತುಗಳ ಮೇಲೆ ಆಧಾರವಾಗಿತ್ತು – ವಿಮೋ 19:8; 24:7. ಈ ಕಾರಣದಿಂದಲೇ ಹಳೆಯದು ದುರ್ಬಲವಾಗಿತ್ತು ಮತ್ತು ಸೋತುಹೋಯಿತು, ಆದರೆ ಹೊಸದು ಶಕ್ತವಾಗಿದೆ ಮತ್ತು ಯಶಸ್ವಿಯಾಗುತ್ತದೆ. **13**

**8:13** *"ಹಳೆಯದು"*– ಅಂದರೆ ಉಪಯೋಗದಲ್ಲಿ ಇಲ್ಲದೆ ಇರುವಂಥದ್ದು, ಅಂಗೀಕರಿಸಲ್ಪಡದೆ ಇರುವಂಥದ್ದು. ದೇವರ ದೃಷ್ಟಿಯಲ್ಲಿ ಮೋಶೆಯ ಮೂಲಕ ಕೊಡಲಾದ ಒಡಂಬಡಿಕೆಯು ಮುಕ್ತಾಯಗೊಳ್ಳುವದಾಗಿತ್ತು. ಮತ್ತು ಅದರೊಂದಿಗೆ ಹಳೆಯ ಯಾಜಕತ್ವವೂ ಮುಕ್ತಾಯಗೊಳ್ಳುವದಾಗಿದೆ.

*"ನಿರ್ಮೂಲವಾಗಲು ಸಿದ್ಧವಾಗಿದೆ"*– ಯೆರೂಸಲೇಮಿನಲ್ಲಿ ಆಲಯವು ಇನ್ನೂ ಇತ್ತು ಮತ್ತು ಯಾಜಕರು ಅಲ್ಲಿ ಸೇವೆ ಸಲ್ಲಿಸುತ್ತಾ ಇದ್ದರು. ಆದರೆ ಕ್ರಿ.ಶ 70 ರಲ್ಲಿ ಎಲ್ಲವು ನಿಂತುಹೋಯಿತು. ಮತ್ತಾಯ 24:1-2; ಲೂಕ 19:41-44 ನೋಡಿರಿ. ಆ ಸಮಯದಿಂದ ಯೆರೂಸಲೇಮಿನಲ್ಲಿ ಯೆಹೂದ್ಯರ ಆಲಯವಿಲ್ಲ ಮತ್ತು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಕಾರ ಯಾವ ಯಾಜಕೋದ್ಯೋಗವೂ ನಡೆಯುತ್ತಾ ಇಲ್ಲ.

# 9[1]

**9:1** ಈ ಅಧ್ಯಾಯದಲ್ಲಿ ಬರಹಗಾರನು ಯೇಸು ಕ್ರಿಸ್ತನ ಮತ್ತು ಹಳೆ ಒಡಂಬಡಿಕೆಯ ಯಾಜಕತ್ವದ ಹೋಲಿಕೆಯನ್ನು ಮುಂದುವರೆಸುತ್ತಾ ಇದ್ದಾನೆ. ಆತನು ಹಳೆಯ ದೇವದರ್ಶನ ಗುಡಾರ ಮತ್ತು ಅಲ್ಲಿ ಯಾಜಕರು ಮಾಡುತ್ತಿದ್ದ ಸೇವೆಯ ಬಗ್ಗೆ ಮಾತನಾಡುತ್ತಾ ಇದ್ದಾನೆ – ವ 1-7. ನಂತರ ಆತನು ದೇವದರ್ಶನ ಗುಡಾರದಲ್ಲಿ ನಡೆಯುವ ಸೇವೆ ಮತ್ತು ಆರಾಧನೆ ಏನು ಸೂಚಿಸುತ್ತದೆ ಎಂದು ತೋರಿಸುತ್ತಾ ಇದ್ದಾನೆ – ವ 8-10. ನಂತರ ಆತನು ಮಹಾಯಾಜಕನಾಗಿರುವ ಯೇಸು ಕ್ರಿಸ್ತನು ಅರ್ಪಿಸಿದ ಯಜ್ಞ ಮತ್ತು ಪರಲೋಕದ ದೇವದರ್ಶನ ಗುಡಾರದೊಳಗಿನ ಆತನ ಪ್ರವೇಶದ ಬಗ್ಗೆ ಮಾತನಾಡುತ್ತಾ ಇದ್ದಾನೆ - ವ 11-28.

“*ದೇವಾಲಯ*”– ವಿಮೋ 25:8 ರ ನೋಟ್ಸ್ ನೋಡಿರಿ. **2**

**9:2** ವಿಮೋಚನಕಾಂಡ 25-40 ಅಧ್ಯಾಯಗಳು ದೇವದರ್ಶನ ಗುಡಾರ ಮತ್ತು ಅದರ ನಿರ್ಮಾಣವನ್ನು ವಿವರಿಸುತ್ತವೆ. ಅದಕ್ಕೆ ಸಂಬಂಧಿಸಿರುವ ವಿಷಯಗಳ ಪ್ರಾಮುಖ್ಯತೆಯನ್ನು ತಿಳಿಯಲು ಅದರ ನೋಟ್ಸ್ ನೋಡಿರಿ. ಬಹುತೇಕ ಯಾಜಕಕಾಂಡ ಮತ್ತು ಅರಣ್ಯಕಾಂಡದ ಕೆಲವು ಭಾಗಗಳು ಅದರ ಸೇವೆಯ ಬಗ್ಗೆ ಮಾತನಾಡುತ್ತವೆ. ಅವುಗಳಿಗೆ ಕೊಡಲಾಗಿರುವ ಪ್ರಾಧಾನ್ಯತೆಯನ್ನು ಗಮನಿಸುವದಾದರೆ, ದೇವರು ತನ್ನ ಜನರಿಗಾಗಿ ಕೊಟ್ಟಿರುವ ಸೂಚನೆಗನುಸಾರ ಆತನ ಕಾರ್ಯಕ್ರಮಕ್ಕೆ ಇರುವ ಪ್ರಾಮುಖ್ಯತೆಯನ್ನು ನಾವು ತಿಳಿಯಬಹುದು. ಸತ್ಯವೇದದಲ್ಲಿ ಸುಮಾರು ನಲವತ್ತು ಅಧ್ಯಾಯಗಳು ಈ ವಿಷಯದ ಬಗ್ಗೆ ಮಾತನಾಡುತ್ತವೆ. ಭೂಮ್ಯಾಕಾಶಗಳು ಮತ್ತು ಮಾನವನ ಸೃಷ್ಟಿಯನ್ನು ವಿವರಿಸಲು ಕೇವಲ ಎರಡು ಅಧ್ಯಾಯಗಳನ್ನು ಕೊಡಲಾಗಿದೆ (ಆದಿಕಾಂಡ 1 ಮತ್ತು 2 ಅಧ್ಯಾಯದ ನಂತರ ಸತ್ಯವೇದದಲ್ಲಿ ಸೃಷ್ಟಿಯ ಕಾರ್ಯಗಳನ್ನು ಅನೇಕ ಸಲ ಪ್ರಸ್ತಾಪಿಸಲಾಗಿದೆ). ವಿಮೋಚನಕಾಂಡ 30 ನೇ ಅಧ್ಯಾಯದ ಕೊನೆಯಲ್ಲಿ ನೋಟ್ಸ್ ನೋಡಿರಿ ಮತ್ತು ದೇವದರ್ಶನ ಗುಡಾರವನ್ನು ಆತ್ಮೀಕ ಅಭ್ಯಾಸವಾಗಿ ಹೇಗೆ ಉಪಯೋಗಿಸಬೇಕೆಂದು ತಿಳಿದುಕೊಳ್ಳಿರಿ.

“*ದೀಪಸ್ತಂಭ*”– ವಿಮೋ 25:31-40. “ದೀಪಸ್ತಂಭ” ಎಂಬದು “ಮೇಣಸ್ತಂಭ” ಎಂಬುದಕ್ಕಿಂತಲೂ ಉತ್ತಮವಾದ ಭಾಷಾಂತರವಾಗಿದೆ. ಜನರು ಮೇಣಸ್ತಂಭಗಳ ಮೇಲೆ ದೀಪಗಳನ್ನು ಇಡುವದಿಲ್ಲ.

“*ಮೇಜು*”– ವಿಮೋ 25:23-30. **3**

**9:3** “*ಎರಡನೆಯ ತೆರೆ*”– ವಿಮೋ 26:31-35. ಮೊದಲನೆಯ ಪರದೆಯು ಪರಿಶುದ್ಧ ಸ್ಥಳವನ್ನು ಹೊರಾಂಗಣದಿಂದ ಬೇರ್ಪಡಿಸುವದಾಗಿತ್ತು. **4**

**9:4** “*ಧೂಪಾರತಿ*”– ವಿಮೋ 30:1-10.

“*ಮಂಜೂಷ*”– ವಿಮೋ 25:10-15.

“*ಮನ್ನಾ*”– ವಿಮೋ 16:14-16,33.

“*ಆರೋನನ ಕೋಲು*”– ಸಂಖ್ಯಾ 17:8-11.

“*ಕಲ್ಲಿನ ಹಲಿಗೆಗಳು*”– ವಿಮೋ 25:16. **5**

**9:5** “*ಕೆರೂಬಿಗಳು*”– ವಿಮೋ 25:17-22.

“*ಪ್ರಭಾವ*”– ವಿಮೋ 40:34-35. **6**

**9:6** “*ಮುಂದಣ ಭಾಗ*” *ಅಂದರೆ* “*ಪರಿಶುದ್ಧ ಸ್ಥಳ*”– ವ 2.

“*ದೇವಾರಾಧನೆ*”– ವಿಮೋ 27:21; 30:7-8; ಯಾಜಕ 24:5-9. **7**

**9:7** “*ಎರಡನೆಯ ಭಾಗ*”ಅಂದರೆ ಮಹಾಪರಿಶುದ್ಧ ಸ್ಥಳ – ವ 3. ಯಾಜಕಕಾಂಡ 16 ನೇ ಅಧ್ಯಾಯವು ಮಹಾಯಾಜಕನು ವರ್ಷಕ್ಕೊಮ್ಮೆ ಮಾಡುವ ಈ ಕಾರ್ಯವನ್ನು ವಿವರಿಸುತ್ತದೆ.

ಈ ಅಧ್ಯಾಯವನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಬೇಕೆಂದರೆ ಇದರೊಂದಿಗೆ ಆ ಅಧ್ಯಾಯವನ್ನು ಓದಬೇಕು.

*"ಅರಿಯದೆ ಮಾಡುವ ತಪ್ಪುಗಳು"*– ಧರ್ಮಶಾಸ್ತ್ರದ ಅರಿವಿಲ್ಲದೆ ಅಥವಾ ತಿಳಿಯದೆ ಮಾಡಿದ ಪಾಪಗಳು ಎಂಬದು ಬರಹಗಾರನ ಅರ್ಥವಲ್ಲ, ಬದಲಾಗಿ ದೇವರ ಅರಿವಿಲ್ಲದೆ, ಅಂದರೆ, ಆತನ ಕುರಿತಾದ ವೈಯಕ್ತಿಕ ಅನುಭವವಿಲ್ಲದೆ ಮಾಡಿದವುಗಳು ಎಂಬದಾಗಿದೆ (ಎಫೆ 4:17-19 ರೊಂದಿಗೆ ಹೋಲಿಸಿ ನೋಡಿರಿ). ನಿಜವಾಗಿ ಹೇಳುವದಾದರೆ ಇಸ್ರಾಯೇಲಿನಲ್ಲಿ ದೋಷಪರಿಹಾರದ ದಿನದಂದು ಜನರ ಅಶುದ್ಧತೆಗಳು, ದುಷ್ಟತನಗಳು ಮತ್ತು ಎದುರುಬೀಳುವಿಕೆಯೊಂದಿಗೆ ಪಾಪಗಳನ್ನು ಸಹ ಪರಿಹರಿಸಲಾಗುತ್ತದೆ – ಯಾಜಕ 16:21-22,30,34 ("ಅವರ ಎಲ್ಲಾ ಪಾಪಗಳು" ಪದ ಮತ್ತೆಮತ್ತೆ ಬಳಕೆಯಾಗಿರುವದನ್ನು ಗಮನಿಸಿರಿ). ಯಾಜಕಕಾಂಡ 16ನೇ ಅಧ್ಯಾಯದಲ್ಲಿ ಮಹಾಯಾಜಕನ ಕೆಲಸವು ತಪ್ಪುಗಳು, ತಿಳಿಯದೆ ಮಾಡಿರುವ ಪಾಪಗಳಿಗೆ ಸೀಮಿತವಾಗಿರಲಿಲ್ಲ. **8**

**9:8** *"ಪವಿತ್ರಾತ್ಮನು"*– 3:7 (ಯೋಹಾನ 3:16-17 ರ ನೋಟ್ಸ್ ನೋಡಿರಿ). ದೇವದರ್ಶನ ಗುಡಾರದ ದಾಖಲೆ ಮತ್ತು ಮಹಾಯಾಜಕನ ಕಾರ್ಯವು ಪವಿತ್ರಾತ್ಮನ ಪ್ರೇರಣೆಗನುಸಾರ ಬರೆಯಲ್ಪಟ್ಟಿವೆ ಎಂಬದಾಗಿ ಬರಹಗಾರನ ಮನವರಿಕೆಯನ್ನು ನಾವು ಇದರಿಂದ ತಿಳಿಯಬಹುದು (2 ತಿಮೊ 3:16-17 ನೋಡಿರಿ). ಇಸ್ರಾಯೇಲಿನಲ್ಲಿ ನಡೆಯುವ ದೋಷಪರಿಹಾರದ ದಿನದಂದು ಆತನು ಯಾವ ಪಾಠವನ್ನು ಕಲಿಸಿದ್ದಾನೆ? ಆಗ ದೇವರ ಪ್ರಸನ್ನತೆಯೊಳಗೆ ಹೋಗುವ ಮಾರ್ಗವನ್ನು ಪ್ರಕಟಿಸಲಾಗಿರಲಿಲ್ಲ. ದೇವದರ್ಶನ ಗುಡಾರ (ಮತ್ತು ನಂತರದಲ್ಲಿ ದೇವಾಲಯ) ಉಪಯೋಗದಲ್ಲಿದ್ದಾಗ, ಇಸ್ರಾಯೇಲಿನಲ್ಲಿ ಮಹಾಯಾಜಕನಲ್ಲದೆ ಬೇರೆ ಯಾರೂ ಮಹಾಪರಿಶುದ್ಧ ಸ್ಥಳಕ್ಕೆ ಹೋಗುತ್ತಿರಲಿಲ್ಲ. ಮಹಾಪರಿಶುದ್ಧ ಸ್ಥಳವು ದೇವದರ್ಶನ ಗುಡಾರದಲ್ಲಿದ್ದ ಒಂದು ಸ್ಥಳವಾಗಿದ್ದು, ದೇವರ ಪ್ರಸನ್ನತೆಯು ಆ ಸ್ಥಳದಲ್ಲಿತ್ತು. ದೇವದರ್ಶನ ಗುಡಾರವು ದೇವರ ಪ್ರಸನ್ನತೆಗೆ ಹೋಗಲು ಎದುರಾಗುವ ಅಡೆತಡೆಗಳನ್ನು ತಿಳಿಸುತ್ತದೆಯೇ ಹೊರತು ಹೇಗೆ ಹೋಗಬೇಕು ಎಂಬದನ್ನು ತಿಳಿಸುವದಿಲ್ಲ. ವಿಮೋ 27:9-19 ರ ನೋಟ್ಸ್ ನೋಡಿರಿ. ಇದರ ಅರ್ಥ ದೇವದರ್ಶನ ಗುಡಾರವನ್ನು ಹೊರತುಪಡಿಸಿ ಇಸ್ರಾಯೇಲಿನಲ್ಲಿ ದೇವರ ಪ್ರಸನ್ನತೆಗೆ ಯಾವ ವ್ಯಕ್ತಿಯೂ ಹೋಗಲಿಲ್ಲ ಎಂಬದಾಗಿ ಅಲ್ಲ. ಖಂಡಿತವಾಗಿಯೂ ಹೋಗಿದ್ದಾರೆ – (ಆದಿ 5:24; 6:9; 27:7; ವಿಮೋ 33:14; ಕೀರ್ತನೆ 51:11; 89:15 ರೊಂದಿಗೆ ಹೋಲಿಸಿ ನೋಡಿರಿ). ಆದರೆ ಆ ಯುಗದಲ್ಲಿ ದೇವರು ಇದು ಸಾಧ್ಯವಾಗಬಹುದೆಂಬ ಮಾರ್ಗವನ್ನು ದೇವರು ಪ್ರಕಟಿಸಿರಲಿಲ್ಲ. ಈಗ ಆತನು ಪ್ರಕಟಿಸಿದ್ದಾನೆ. ಸಂಪೂರ್ಣವಾಗಿ ಪರಿಶುದ್ಧನಾಗಿರುವ ದೇವರ ಪ್ರಸನ್ನತೆಯೊಳಗೆ ಪಾಪ ಸ್ವಭಾವವಿರುವ ಮನುಷ್ಯರು ಇಂದು ಬರಬಹುದು ಯಾಕಂದರೆ ಯೇಸು ಕ್ರಿಸ್ತನು ಅವರ ಪಾಪಗಳನ್ನು ಪರಿಹರಿಸಲು ತನ್ನನ್ನೇ ಯಜ್ಞವಾಗಿ ಅರ್ಪಿಸಿದ್ದಾನೆ – 10:19-20; 1 ಪೇತ್ರ

3:18. **9**

**9:9** ಹಳೇ ಒಡಂಬಡಿಕೆಯ ಯಜ್ಞಗಳು ಪಾಪ ಮತ್ತು ಅಪರಾಧದ ಕಾರ್ಯಗಳನ್ನು ತೆಗೆದುಹಾಕಲು ಶಕ್ತವಾಗಿರಲಿಲ್ಲ. ಆದ್ದರಿಂದ ಮನಸ್ಸಾಕ್ಷಿಯನ್ನು ಶುಚಿಗೊಳಿಸಲು ಅವುಗಳಿಂದ ಆಗುತ್ತಾ ಇರಲಿಲ್ಲ – 10:2. ಮನಸ್ಸಾಕ್ಷಿಯು ಶುಚಿಯಾಗಿಲ್ಲವೆಂದರೆ, "ನಂಬಿಕೆಯ ಪೂರ್ಣಭರವಸೆಯೊಂದೆ" (10:22) ದೇವರ ಪ್ರಸನ್ನತೆಯೊಳಗೆ ಹೋಗಲು ಆಗುವದಿಲ್ಲ. ಅಪೊ 23:1 ರಲ್ಲಿ ಮನಸ್ಸಾಕ್ಷಿಯ ಕುರಿತಾದ ನೋಟ್ಸ್ ನೋಡಿರಿ. **10**

**9:10** ಊಟ, ಇತ್ಯಾದಿ ವಿಷಯಗಳ ಕುರಿತು ಹಳೆಯ ಒಡಂಬಡಿಕೆಯಲ್ಲಿ ಕೊಡಲಾಗಿರುವ ನಿಯಮಗಳು (ಯಾಜಕ 11; ಸಂಖ್ಯಾ 6:15,17; 28:7-8; ವಿಮೋ 30:17-21; ಯಾಜಕ 16:24) ಸಹ ಆತ್ಮೀಕ ಕಾರ್ಯಗಳ ಛಾಯೆಗಳು ಮತ್ತು ಚಿತ್ರಣಗಳಾಗಿವೆ. ಅವುಗಳಲ್ಲಿ ಆತ್ಮೀಕವಾಗಿ ಯಾವುದೇ ಪ್ರಾಮುಖ್ಯತೆಯಿಲ್ಲ ಬದಲಾಗಿ ಅವು ಕೇವಲ ಹೊರಾಂಗಣ "ನಿಯಮಗಳಾಗಿವೆ". ಮತ್ತು ದೇವರು ಅವುಗಳನ್ನು ತನ್ನ ಜನರಿಗೆ ಶಾಶ್ವತವಾಗಿ ನೇಮಿಸಿಲ್ಲ – "ಸುಧಾರಣೆಯ ಸಮಯದ ತನಕ" ಮಾತ್ರವೇ ನೇಮಿಸಿದ್ದಾನೆ. "ಸುಧಾರಣೆ" ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದದ ಅರ್ಥ "ಸರಿಪಡಿಸುವುದು". ದೇವರು ಹೊಸ ಏರ್ಪಾಡು (ಯೇಸು ಕ್ರಿಸ್ತನು ಸ್ಥಾಪಿಸುವ ಹೊಸ ಒಡಂಬಡಿಕೆ) ಪರಿಚಯಪಡಿಸುವ ತನಕ ಮಾತ್ರವೇ ಹಳೆ ಒಡಂಬಡಿಕೆಯ ನಿಯಮಗಳು ಇದ್ದವು. **11-28**

**9:11-28** ಬರಹಗಾರನು ಮತ್ತೊಮ್ಮೆ ಯೇಸು ಕ್ರಿಸ್ತನು ಮಹಾಯಾಜಕನಾಗಿದ್ದಾನೆ ಎಂಬ ವಿಷಯವನ್ನು ಪ್ರಸ್ತಾಪಿಸುತ್ತಾ ಇದ್ದಾನೆ ಮತ್ತು ಹಳೆಯ ಒಡಂಬಡಿಕೆಯಲ್ಲಿದ್ದ ಯಾಜಕರ ಚಟುವಟಿಕೆಗಳೆಲ್ಲವೂ ಏನನ್ನೂ ಸಾಧಿಸಲು ಆಗಲಿಲ್ಲವೋ ಅವುಗಳನ್ನು ಆತನ ಸೇವೆ ಹೇಗೆ ಸಾಧಿಸಿದೆ ಎಂಬದನ್ನು ತೋರಿಸುತ್ತಾ ಇದ್ದಾನೆ. **11**

**- 9:11** 8:2,5 ನೋಡಿರಿ. **12**

**9:12** *"ಹೋತಗಳು ಮತ್ತು ಹೋರಿಗಳು"*– ಯಾಜಕ 16:14-15,27.

*"ಸ್ವಂತ ರಕ್ತ"*– 11-28 ವಚನಗಳಲ್ಲಿ "ರಕ್ತ" ಎಂಬ ಪದವನ್ನು ಹನ್ನೊಂದು ಸಲ ಉಪಯೋಗಿಸಲಾಗಿದೆ. ಯಜ್ಞ ಮತ್ತು ಮರಣ ಪದಗಳನ್ನು ಸಹ ಹಲವು ಸಲ ಉಪಯೋಗಿಸಲಾಗಿದೆ, ಈ ಪದಗಳು ಸಹ ರಕ್ತವನ್ನು ಸೂಚಿಸುತ್ತವೆ. ಯೇಸು ಕ್ರಿಸ್ತನ ರಕ್ತ (ಯಜ್ಞ ಮತ್ತು ಮರಣ) ಪ್ರಾಮುಖ್ಯವೆಂದು ಬರಹಗಾರನು ತೋರಿಸುತ್ತಾ ಇದ್ದಾನೆ ಯಾಕಂದರೆ: ಅದು ವಿಶ್ವಾಸಿಗಳ ಮನಸ್ಸಾಕ್ಷಿಯನ್ನು ಶುಚಿಮಾಡುತ್ತದೆ (ವ 14) ಅದು ಅವರನ್ನು ಬಿಡುಗಡೆ ಮಾಡಲು ಕೊಡಲಾದ ಕ್ರಯವಾಗಿದೆ (ವ 16) ಅದು ಕ್ಷಮಾಪಣೆಗೆ ಆಧಾರವಾಗಿದೆ (ವ 22) ಅದು "ಪರಲೋಕದ ಸಂಗತಿಗಳನ್ನು" ಶುದ್ಧೀಕರಿಸುತ್ತದೆ (ವ 23) ಮತ್ತು ಈ ಕಾರ್ಯಗಳನ್ನೆಲ್ಲಾ ಅದು ಪಾಪವಿಲ್ಲದೆ ಮಾಡುತ್ತದೆ (ವ 26,28).

*"ವಿಮೋಚನೆ"*– ವ 15. ಕೀರ್ತನೆ 78:35; ಮತ್ತಾಯ 20:28 ರ ನೋಟ್ಸ್ ನೋಡಿರಿ.

ಯೇಸು ಕ್ರಿಸ್ತನು ವಿಶ್ವಾಸಿಗಳಿಗಾಗಿ ಸಂಪಾದಿಸಿದ ವಿಮೋಚನೆಯು “ಶಾಶ್ವತವಾಗಿದೆ” ಎಂಬದನ್ನು ಗಮನಿಸಿರಿ. 5:9; 10:14 ರೊಂದಿಗೆ ಹೋಲಿಸಿ ನೋಡಿರಿ. ಅದರ ಫಲಿತಾಂಶವು ಶಾಶ್ವತವಾಗಿದೆ. ಆತನು ತನಗೆ ಸ್ವಂತವಾದವರನ್ನು ತನ್ನ ರಕ್ತವನ್ನು ಕ್ರಯವಾಗಿ ಕೊಟ್ಟು ಖರೀದಿಸಿದ್ದಾರೆ ಹಾಗೂ ಅವರು ಶಾಶ್ವತವಾಗಿ ಆತನವರಾಗಿದ್ದಾರೆ – 1 ಪೇತ್ರ 1:18-19; 1 ಕೊರಿಂಥ 6:20; ಯೋಹಾನ 6:37; 17:6,11,12. **13**

**9:13** “*ಕಡಸು*”– ಅರಣ್ಯಕಾಂಡ 19 ನೇ ಅಧ್ಯಾಯ ನೋಡಿರಿ. ಪಾಪದಿಂದ ಹೃದಯವನ್ನು ಶುದ್ಧೀಕರಿಸುವ ಅಥವಾ ಅಪರಾಧವನ್ನು ಪರಿಹರಿಸುವದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಹಾಗೆಯೇ ಪ್ರಾಣಿಗಳ ಯಾವ ಯಜ್ಞಗಳಿಗೂ ಸಂಬಂಧವಿಲ್ಲ. **14**

**9:14** “*ನಿರ್ದೋಷಿಯನ್ನಾಗಿ*”– 4:15; 7:26; 1 ಪೇತ್ರ 1:19; 2:22; 3:18.

“*ನಮ್ಮ ಮನಸ್ಸು*”– ಮನಸ್ಸು ಮಾನವನಲ್ಲಿರುವ ಸಹಜಶಕ್ತಿಯಾಗಿದ್ದು ಆತನ ಕ್ರಿಯೆಗಳನ್ನು ವಿಚಾರಿಸುತ್ತದೆ ಮತ್ತು ಅವು ಸರಿಯೋ ಅಥವಾ ತಪ್ಪೋ, ಒಳ್ಳೆಯದೋ ಅಥವಾ ಕೆಟ್ಟದೋ ಎಂದು ಪ್ರಕಟಿಸುತ್ತದೆ. ಮನಸ್ಸಿನ ಕುರಿತು ಅಪೊ 23:1; 24:16; ರೋಮಾ 2:15; 9:1; 1 ಕೊರಿಂಥ 8:7; 10:28-29; 2 ಕೊರಿಂಥ 1:12; 1 ತಿಮೊ 1:5; 3:9; 4:2; ತೀತ 1:15. ಒಂದುವೇಳೆ ಮನಸ್ಸು ಪಾಪ ಮತ್ತು ಅಪರಾಧ ಭಾವದಿಂದ ಮಲಿನವಾದರೆ, ಅದನ್ನು “ಶುದ್ಧೀಕರಿಸಬೇಕು”. ಅಂದರೆ, ಪಾಪ ಮತ್ತು ಅಪರಾಧವು ಪರಿಹಾರವಾಗಿವೆ, ದೇವರ ನ್ಯಾಯತೀರ್ಪು ಮತ್ತು ಶಿಕ್ಷೆಯ ಎದುರಾಗಲು ಯಾವುದೇ ಕಾರಣವಿಲ್ಲ ಎಂದು ಅದನ್ನು ಸಮಾಧಾನಪಡಿಸಬೇಕು. ಯೇಸು ಕ್ರಿಸ್ತನ ರಕ್ತ ಇದನ್ನೇ ಮಾಡುತ್ತದೆ. ಯೇಸು ಕ್ರಿಸ್ತನ ತ್ಯಾಗದ ಕುರಿತಾಗಿರುವ ನಮ್ಮ ಜ್ಞಾನ, ನಮ್ಮ ಪಾಪಗಳನ್ನು ಪರಿಹರಿಸಲು ಆತನು ತನ್ನ ರಕ್ತವನ್ನು ಸುರಿಸಿದನು ಎಂಬ ನಮ್ಮ ನಂಬಿಕೆ, ನಮ್ಮ ಮನಸ್ಸನ್ನು ತೃಪ್ತಿಪ್ಪಡಿಸುತ್ತದೆ. ನಾವು ಪಾಪಿಗಳು ಎಂಬ ನಮ್ಮ ತಿಳುವಳಿಕೆಯಿಂದ ಯೇಸು ಕ್ರಿಸ್ತನ ರಕ್ತವು ನಮ್ಮನ್ನು ಶುದ್ಧೀಕರಿಸುವದಿಲ್ಲ (1 ಯೋಹಾನ 1:8; 1 ತಿಮೊ 1:15), ಬದಲಾಗಿ ದೇವರ ಕೋಪ ನಮ್ಮಿಂದ ತೆಗೆದುಹಾಕಲ್ಪಟ್ಟಿದೆ ಎಂಬದನ್ನು ದೃಢಪಡಿಸುತ್ತದೆ. ನಮ್ಮ ಮನಸ್ಸಿನಲ್ಲಿ ನೆಲೆಯಾಗಿರುವ ಯೇಸು ಕ್ರಿಸ್ತನ ತ್ಯಾಗವು, ನಮ್ಮ ಮನಸ್ಸಾಕ್ಷಿಗೆ ಸೂಚನೆಯನ್ನು ಕೊಡಲು ಮತ್ತು ಅದನ್ನು ಶುದ್ಧೀಕರಿಸಲು ದೇವರು ಆತನ ತ್ಯಾಗದ ತಿಳುವಳಿಕೆಯನ್ನು ಉಪಯೋಗಿಸುತ್ತಾನೆ. ಅಪೊ 15:9 ರೊಂದಿಗೆ ಹೋಲಿಸಿ ನೋಡಿರಿ. ಜಾಗೃತ ಮನಸ್ಸು ನಮ್ಮ ಮೇಲೆ ಆರೋಪ ಮಾಡುವದು ಮತ್ತು ನಮಗೆ ವಿರುದ್ಧವಾಗಿ ಎದ್ದು ನಿಲ್ಲುವದು ಅತ್ಯಂತ ವೇದನೆಯ ಕಾರ್ಯವಾಗಿರುತ್ತದೆ. ಅದು ಸಮಾಧಾನ ಮತ್ತು ವಿಶ್ರಾಂತಿಯನ್ನು ಪಡೆಯುವದು ಹೇಗೆ? ಯೇಸು ಕ್ರಿಸ್ತನ ತ್ಯಾಗದಲ್ಲಿ ಮಾತ್ರವೇ ಅದು ಸಾಧ್ಯವಾಗುತ್ತದೆ. ಇದು ಸಾಧ್ಯವಾಗುವಾಗ ನಾವು ಸಂತೋಷವಾಗಿ ಮತ್ತು ಸ್ವತಂತ್ರವಾಗಿ “ಜೀವಿಸುವ ದೇವರನ್ನು ಸೇವಿಸಬಹುದು”. ಈ ವಾಕ್ಯದಲ್ಲಿ ತ್ರಯೇಕ ದೇವರ ಬಗ್ಗೆ

ಬರೆಯಲಾಗಿರುವದನ್ನು ಗಮನಿಸಿರಿ – ಮಗನು ಪವಿತ್ರಾತ್ಮನ ಮೂಲಕ ತನ್ನನ್ನೇ ತಂದೆಯಾದ ದೇವರಿಗೆ ಒಪ್ಪಿಸಿದನು. ಮತ್ತಾಯ 3:16-17 ರಲ್ಲಿ ತ್ರಯೇಕತ್ವದ ಕುರಿತಾದ ನೋಟ್ಸ್ ನೋಡಿರಿ. **15**

**9:15** *"ಈ ಕಾರಣದಿಂದ"*- ಯೇಸು ಕ್ರಿಸ್ತನ ರಕ್ತವು ಮನಸ್ಸನ್ನು ಶುದ್ಧೀಕರಿಸುತ್ತದೆ ಎಂಬ ಸತ್ಯ. ಆದರೆ ಹಳೆ ಒಡಂಬಡಿಕೆಯ ಯಜ್ಞಗಳು ಇದನ್ನು ಮಾಡಲಾರದೆ ಇದ್ದವು – ವ 9; 10:2.

*"ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ"*– 8:6-13. ಈ ಒಡಂಬಡಿಕೆಯು ಕರ್ತನಾದ ಯೇಸು ಕ್ರಿಸ್ತನು ಸುರಿಸಿರುವ ರಕ್ತದ ಮೇಲೆ ಆಧಾರವಾಗಿದೆ – ಮತ್ತಾಯ 26:28.

*"ಕ್ರಯ"*– ವ 12; ಮತ್ತಾಯ 20:28.

*"ಮೊದಲನೆಯ ಒಡಂಬಡಿಕೆಯ ಕಾಲದಲ್ಲಿ"*– ಯೇಸು ಕ್ರಿಸ್ತನು ಲೋಕದ ಎಲ್ಲಾ ಕಾಲಗಳಲ್ಲಿ ಜೀವಿಸುವ ತನ್ನ ಜನರ ಪಾಪಗಳಿಗಾಗಿ ಪ್ರಾಣ ಕೊಟ್ಟನು. ಆತನು ಈ ಲೋಕಕ್ಕೆ ಬರುವ ಮೊದಲು ಪಾಪ ಮಾಡಿದವರೆಲ್ಲರೂ ಇದರಲ್ಲಿ ಸೇರಿದ್ದಾರೆ. ರೋಮಾ 3:25 ರೊಂದಿಗೆ ಹೋಲಿಸಿ ನೋಡಿರಿ.

*"ನಿತ್ಯಬಾಧ್ಯತೆ"*– 1:2,14. **16**

**9:16** *"ಶಾಸನ"*– ಗ್ರೀಕ್ ಭಾಷೆಯಲ್ಲಿ "ಒಡಂಬಡಿಕೆ" ಎಂಬ ಪದವನ್ನೇ "ಚಿತ್ತ" ಮತ್ತು "ಶಾಸನ" ಪದಗಳಿಗೆ ಉಪಯೋಗಿಸುತ್ತಾರೆ. ಕನ್ನಡ ಭಾಷೆಯಲ್ಲಿ (ಮತ್ತು ಇನ್ನೂ ಅನೇಕ ಭಾಷೆಗಳಲ್ಲಿ) ನಾವು ಸಂಪೂರ್ಣವಾಗಿ ಭಿನ್ನವಾಗಿರುವ ಎರಡು ಪದಗಳನ್ನು ಉಪಯೋಗಿಸುತ್ತೇವೆ. 15ನೇ ವಚನದಲ್ಲಿ ಬರಹಗಾರನು ವಿಶ್ವಾಸಿಗಳಿಗೆ ದೊರೆಯುವ "ನಿತ್ಯಬಾಧ್ಯತೆಯ" ಬಗ್ಗೆ ಹೇಳಿದ್ದಾನೆ. ಆದರೆ ಈಗ ಆ ನಿತ್ಯಬಾಧ್ಯತೆಯು ಶಾಸನವನ್ನು ಮಾಡಿದಾತನು (ಕ್ರಿಸ್ತನು) ಸಾಯುವ ತನಕ ಸಿಗುವದಿಲ್ಲ ಎಂದು ಹೇಳಿದ್ದಾನೆ. **18-20**

**9:18-20** ವಿಮೋ 24:1-8 ನೋಡಿರಿ. ಬರಹಗಾರನು ಈಗ ಹಳೆಯ ಒಡಂಬಡಿಕೆಯ ಬಗ್ಗೆ ಮಾತನಾಡುತ್ತಾ ಇದ್ದಾನೆ (ವಿಮೋ 19:5), ಅದನ್ನು ಸಂಕಲ್ಪ ಪತ್ರ ಅಥವಾ ಶಾಸನದ ರೀತಿಯಲ್ಲಿ ತೋರಿಸುತ್ತಾ ಇದ್ದಾನೆ. ದೇವರು ಈ ಒಡಂಬಡಿಕೆಯನ್ನು ಮಾಡಿದನು ಮತ್ತು ಅದರಲ್ಲಿ ಇಸ್ರಾಯೇಲ್ಯರಿಗೆ ಸ್ವಾಸ್ಥ್ಯವನ್ನು ವಾಗ್ದಾನ ಮಾಡಿದನು (ಧರ್ಮೋ 12:8-10; ಯೆಹೋ 1:6; 23:4; ಕೀರ್ತನೆ 105:11). ಈ ಒಡಂಬಡಿಕೆ ಅಥವಾ "ಚಿತ್ತ ಪತ್ರ" ಕಾರ್ಯರೂಪಕ್ಕೆ ಬರುವ ಕಾರಣಕ್ಕೆ ದೇವರು ಸಾಯಲಿಲ್ಲ. ಬದಲಾಗಿ ಆ ಪ್ರಾಣಿಗಳು ಸಾಯಬೇಕೆಂದು ಆತನು ಪ್ರತಿಷ್ಠಿಸಿದನು. ಪ್ರಾಣಿಗಳ ಮರಣವು ದೇವರ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರಲು ಹೇಗೆ ಸಾಧ್ಯ? ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಸಂಗತಿ ಏನೆಂದರೆ ಅವೆಲ್ಲವು ಮುಂಬರುವ ಕಾರ್ಯಗಳ ಛಾಯೆ ಅಥವಾ ಚಿತ್ರಣವಾಗಿದ್ದವು (ವ 23,24; 8:5; 10:1). ಇಸ್ರಾಯೇಲ್ಯರ ಸ್ವಾಸ್ಥ್ಯವು ಈ ವಿಶ್ವಾಸಿಗಳಿಗೆ ವಾಗ್ದಾನ ಮಾಡಲಾಗಿರುವ ನಿತ್ಯವಾದ ಪರಲೋಕದ ಸ್ವಾಸ್ಥ್ಯದ ಚಿತ್ರಣವಾಗಿದೆ. ಮತ್ತು ಪ್ರಾಣಿಗಳ

ಯಜ್ಞವು ಯೇಸು ಕ್ರಿಸ್ತನು ತನ್ನನ್ನು ಯಜ್ಞವನ್ನಾಗಿ ಅರ್ಪಿಸಿಕೊಳ್ಳುವದರ ಚಿತ್ರಣವಾಗಿದೆ. ಕಾಲಕ್ರಮೇಣ ತಾನು ಮಾನವಾಗಿ ಪ್ರಾಣ ಕೊಡಬೇಕು ಎಂಬದು ದೇವರಿಗೆ ಮೊದಲೇ ಗೊತ್ತಿತ್ತು, ಆದ್ದರಿಂದ ಆತನು ತನ್ನ ಮುಂಬರುವ ಮರಣದ ನಿದರ್ಶನವನ್ನು ಕೊಟ್ಟಿದ್ದಾನೆ. ಮೋಶೆ ನಿಜವಾದ ರಕ್ತವನ್ನು ಜನರ ದೇಹಗಳ ಮೇಲೆ ಚಿಮುಕಿಸುತ್ತಾ ಇದ್ದನು (ವಿಮೋ 24:8). ಯೇಸು ಕ್ರಿಸ್ತನು ತನ್ನ ರಕ್ತವನ್ನು (ಆತ್ಮೀಕವಾಗಿ, ಸಾಂಕೇತಿಕವಾಗಿ) ಅಂತರ್ಯದ ಭಾಗಗಳ ಮೇಲೆ ಚಿಮಿಸುತ್ತಾನೆ – ಅವು ಯಾವುವೆಂದರೆ ಹೃದಯ ಮತ್ತು ವಿಶ್ವಾಸಿಗಳ ಮನಃಸಾಕ್ಷಿ (ವ 14; 10:22). **21**

**9:21** ಇದು ಹಳೆಯ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿಲ್ಲ. ಬರಹಗಾರನು ಈ ಮಾಹಿತಿಯನ್ನು ಬೇರೆ ಯಾವುದೋ ಒಳ್ಳೆಯ ಮೂಲದಿಂದ ಪಡೆದುಕೊಂಡಿದ್ದಾನೆ. **22**

**9:22** *"ಸ್ವಲ್ಪ ಕಡಿಮೆ ಎಲ್ಲಾ ವಸ್ತುಗಳು"*– ಸಹಜವಾಗಿ ದೋಷಪರಿಹಾರಕ ಯಜ್ಞಕ್ಕಾಗಿ ಪ್ರಾಣಿಗಳ ರಕ್ತದ ಅವಶ್ಯಕತೆಯಿತ್ತು. ಆದರೆ ಅದರಲ್ಲಿಯೂ ಕೆಲವು ನಿರ್ದಿಷ್ಟತೆಗಳಿದ್ದವು (ಯಾಜಕ 5:11-13; ಸಂಖ್ಯಾ 31:22-24).

*"ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ"*– ಯಾಜಕ 17:11 ನೋಡಿರಿ. ಈ ದೇವರು ಯೇಸು ಕ್ರಿಸ್ತನು ಸುರಿಸಿರುವ ರಕ್ತದ ಆಧಾರದ ಮೇರೆಗೆ ಮಾತ್ರವೇ ಮಾನವರನ್ನು ಕ್ಷಮಿಸುತ್ತಾನೆ – ಮತ್ತಾಯ 26:28; ಎಫೆ 1:7. **23**

**9:23** *"ಪ್ರತಿರೂಪವಾಗಿರುವ ವಸ್ತುಗಳು"*– 8:5; 10:1.

*"ಪರಲೋಕ ವಸ್ತುಗಳು"*– ಪರಲೋಕವನ್ನು ಶುದ್ಧೀಕರಿಸುವ ಅವಶ್ಯಕತೆಯಿಲ್ಲ. ಅದು ದೇವರು ವಾಸಿಸುವ ಪರಿಶುದ್ಧ ಸ್ಥಳ ಮತ್ತು ಅಲ್ಲಿ ಪಾಪ ಅಥವಾ ದುಷ್ಟತನಗಳಿಗೆ ಯಾವುದೇ ಅವಕಾಶವಿಲ್ಲ. "ಪರಲೋಕ ವಸ್ತುಗಳು" ಎಂದರೆ ಬಹುಶಃ ಹೊಸ ಒಡಂಬಡಿಕೆಯ ಕಾರ್ಯಗಳಾಗಿರಬಹುದು, ದೇವರು ಮತ್ತು ಮಾನವನ ನಡುವೆಯ ಹೊಸ ಸಂಬಂಧವಾಗಿರಬಹುದು, ಬಿಡುಗಡೆ ಹೊಂದಿರುವ ಜನರು ದೇವರನ್ನು ಸಮೀಪಿಸಿ, ಭೂಲೋಕದಲ್ಲಿ ಆತನನ್ನು ಸೇವಿಸುವ ರಂಗವಾಗಿರಬಹುದು. ಈ "ವಸ್ತುಗಳು" ಆತ್ಮೀಕ ವಾಸ್ತವಗಳಾಗಿದ್ದು ವಿಶ್ವಾಸಿಗಳ ಸದ್ಯದ ಶುದ್ಧೀಕರಣ, ಆರಾಧನೆ ಮತ್ತು ಸೇವೆಗೆ ಸಂಬಂಧಿಸಿದವುಗಳಾಗಿವೆ. ಹಳೆಯ ಒಡಂಬಡಿಕೆಯ ದೇವದರ್ಶನ ಗುಡಾರವನ್ನು, ಇತ್ಯಾದಿ, ಪ್ರಾಣಿಗಳ ರಕ್ತದಿಂದ ಶುದ್ಧೀಕರಿಸಬೇಕಾಗಿತ್ತು (ಯಾಜಕ 16:16,20). ಹೊಸ ಒಡಂಬಡಿಕೆಯಲ್ಲಿ ದೇವರ "ಮನೆ" ಎಂದರೆ ಆತನ ಜನರು, ಯೇಸು ಕ್ರಿಸ್ತನ ಸಭೆ (3:6). ಈ "ಮನೆಯನ್ನು" ಯೇಸು ಕ್ರಿಸ್ತನ ರಕ್ತದಿಂದ ಶುದ್ಧೀಕರಿಸಬೇಕಾಗಿತ್ತು. ಯೇಸು ಕ್ರಿಸ್ತನು ಮತ್ತು ಆತನ ರಕ್ತ ಈ ವಚನದ "ಉತ್ತಮ ಯಜ್ಞಗಳು". **24**

**9:24** *"ಅನುರೂಪ"*– ಅಥವಾ "ಪ್ರತಿನಿಧಿಗಳು". ಇದುವೇ ದೇವದರ್ಶನ ಗುಡಾರ ಮತ್ತು ದೇವಾಲಯದೊಳಗಿರುವ ಪವಿತ್ರ ಸ್ಥಳವಾಗಿದೆ. ಇವುಗಳನ್ನು "ನಿಜವಾದ ವಸ್ತುಗಳ"

ವಿಧಾನದಲ್ಲಿಯೇ ಮಾಡಲಾಗಿದೆ – 8:2 ರ ನೋಟ್ ನೋಡಿರಿ. ಪರಲೋಕವು "ನಿಜವಾದ" ಪವಿತ್ರ ಸ್ಥಳವಾಗಿದೆ.

*"ನಮಗಾಗಿ"*– 7:25; 1 ತಿಮೊ 2:5; 1 ಯೋಹಾನ 2:1. **25**

**9:25** ಯಾಜಕ 16:14-15,34. **26**

**9:26** *"ಒಂದೇ ಸಾರಿ"*– ವ 12,28; 10:10,14. ಮಾನವರು ರಕ್ಷಣೆ ಹೊಂದಲು ಎರಡು ಸಾವಿರ ವರ್ಷಗಳ ಹಿಂದೆ ಯೇಸು ಕ್ರಿಸ್ತನು ಒಂದೇ ಸಾರಿ ಅರ್ಪಿಸಿದ ಯಜ್ಞವು ಸಾಕಾಗಿತ್ತು. ಆತನು ತನ್ನನ್ನೇ ಯಜ್ಞವಾಗಿ ಅರ್ಪಿಸಿದನು ಮತ್ತು "ಲೋಕದ ಪಾಪಗಳನ್ನು" ನಿವಾರಿಸಿದನು (ಯೋಹಾನ 1:29). ಒಂದೇ ಸಾರಿ ಅರ್ಪಿಸಲಾಗಿರುವ ಈ ಯಜ್ಞವನ್ನು ಮತ್ತೆ ಅರ್ಪಿಸಬೇಕೆಂದು ಯೋಚಿಸಲು ಆಗುವದಿಲ್ಲ ಹಾಗೆಯೇ ಇದು ಅನಾವಶ್ಯಕವೂ ಆಗಿದೆ. **27**

**9:27** *"ಒಂದೇ ಸಾರಿ ಸಾಯುವದು"*– ಜನರು ಮತ್ತೆಮತ್ತೆ ಶಾರೀರಿಕವಾಗಿ ಹುಟ್ಟುತ್ತಾರೆ ಮತ್ತು ಮತ್ತೆಮತ್ತೆ ಸಾಯುತ್ತಾರೆ ಎಂದು ಸತ್ಯವೇದವು ಕಲಿಸುವದಿಲ್ಲ. ಶಾರೀರಿಕ ಜನನವೂ ಒಂದೇ ಸಾರಿ ಹಾಗೆಯೇ ಶಾರೀರಿಕ ಮರಣವೂ ಒಂದೇ ಸಾರಿ. ಯೋಬ 11:12; ಯೋಹಾನ 9:3 ರಲ್ಲಿ ಪುನರ್ಜನ್ಮದ ಕುರಿತಾದ ನೋಟ್ಸ್ ನೋಡಿರಿ. ಪುನರ್ಜನ್ಮದ ಮೂಲಕ ಜನರು ರಕ್ಷಣೆ ಹೊಂದುವರು ಎಂಬ ಆಲೋಚನೆಯು ಸಂಪೂರ್ಣವಾಗಿ ಅನಾವಶ್ಯಕವಾಗಿದೆ (ಹಾಗೆಯೇ ಸುಳ್ಳಾಗಿದೆ). ಯೇಸು ಕ್ರಿಸ್ತನು ತನ್ನನ್ನೇ ಯಜ್ಞವಾಗಿ ಅರ್ಪಿಸುವ ಮೂಲಕ ನಮ್ಮ ಎಲ್ಲಾ ಪಾಪಗಳನ್ನು ಅಳಿಸಿ ಹಾಕಿದನು. ಇದೇ ಕ್ಷಣದಲ್ಲಿ ನಮ್ಮಲ್ಲಿ ಯಾರಾದರೂ ಆತನಲ್ಲಿ ಭರವಸೆಯನ್ನಿಟ್ಟರೆ ಕ್ಷಮಾಪಣೆ, ಆತ್ಮೀಕ ಜನನ ಮತ್ತು ನಿತ್ಯವಾದ ರಕ್ಷಣೆಯನ್ನು ಹೊಂದಿಕೊಳ್ಳಬಹುದು.

*"ನ್ಯಾಯತೀರ್ಪು"*– ಮತ್ತಾಯ 10:15; ಅಪೊ 17:31. ಮಾನವರಿಗೆ ಸಂಭವಿಸುವ ಒಂದು ಮರಣದ ನಂತರ, ಅವರಿಗಾಗಿ ಮತ್ತೊಂದು ಕಾಯುತ್ತಾ ಇರುತ್ತದೆ, ಅದು ಪುನಃ ಅವರನ್ನು ಲೋಕಕ್ಕೆ ಬರಮಾಡುವ ಪುನರ್ಜನ್ಮವಲ್ಲ. **28**

**9:28** *"ಬಹುಜನರ ಪಾಪಗಳು"*– ಯೆಶಾಯ 53:11; ಮತ್ತಾಯ 26:28. ಯೋಹಾನ 1:29; 2 ಕೊರಿಂಥ 5:14; ಯೋಹಾನ 3:16; 1 ಯೋಹಾನ 2:2 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನು ಇಡೀ ಲೋಕಕ್ಕಾಗಿ ಪ್ರಾಣ ಕೊಟ್ಟನಾದರೂ, ನಂಬಿಕೆಯಿಂದ ಆತನನ್ನು ಅಂಗೀಕರಿಸಿಕೊಳ್ಳುವವರಿಗೆ ಮಾತ್ರವೇ ಪಾಪಕ್ಷಮಾಪಣೆ ದೊರೆಯುತ್ತದೆ.

*"ಎರಡನೆಯ ಸಾರಿ"*– ಯೋಹಾನ 14:3 ರ ವಿವರಣೆಯನ್ನು ನೋಡಿರಿ. ಈ ವಚನದಲ್ಲಿ "ರಕ್ಷಣೆ" ಎಂದರೆ ವಿಶ್ವಾಸಿಗಳ ಅಂತಿಮ ರಕ್ಷಣೆಯಾಗಿದ್ದು, ಇದನ್ನು ಭವಿಷ್ಯದಲ್ಲಿ ನಡೆಯುವ ಕಾರ್ಯವನ್ನಾಗಿ ನೋಡಲಾಗಿದೆ. ಇದನ್ನು ಇನ್ನುಮುಂದೆ ಹೊಂದಿಕೊಳ್ಳುವ ಸಾಸ್ಥ್ಯವೆಂದು ಪರಿಗಣಿಸಲಾಗಿದೆ – 1:14; ರೋಮಾ 8:23-24; 1 ಪೇತ್ರ 1:4-5. ವಿಶ್ವಾಸಿಗಳು ಈಗಾಗಲೇ ಪಾಪದ ಶಿಕ್ಷೆಯಿಂದ, ನ್ಯಾಯತೀರ್ಪಿನಿಂದ ಹಾಗು ನರಕದಿಂದ ತಪ್ಪಿಸಿಕೊಂಡಿದ್ದಾರೆ. ಅವರು

ಪಾಪದ ಶಕ್ತಿಯಿಂದ ರಕ್ಷಣೆ ಹೊಂದುತ್ತಾ ಇದ್ದಾರೆ (ಮತ್ತಾಯ 1:21; ಯೋಹಾನ 5:24; ರೋಮಾ 8:1-4; 1 ಕೊರಿಂಥ 1:21). ಅವರು ಪಾಪದ ಕಾರ್ಯಗಳು ಮತ್ತು ಅದರ ಪ್ರಭಾವಗಳಿಂದ ರಕ್ಷಣೆ ಹೊಂದುವರು ಹಾಗೂ ತಮ್ಮ ಪ್ರಾಣಾತ್ಮ ಶರೀರಗಳಿಗೆ ಸಂಪೂರ್ಣವಾದ ರಕ್ಷಣೆಯನ್ನು ಹೊಂದಿಕೊಳ್ಳುವರು.

*"ತನ್ನನ್ನು ನಿರೀಕ್ಷಿಸಿಕೊಂಡಿರುವವರಿಗೆ"*– ಪದಗಳನು ಗಮನಿಸಿರಿ – ಮತ್ತಾಯ 24:42-51. ಇದರ ಅರ್ಥ ಆತನ ಪ್ರತ್ಯಕ್ಷತೆಯನ್ನು ನಿರೀಕ್ಷೆಯಿಂದ ಎದುರುನೋಡುವದು. ತೀತ 2:13 ರೊಂದಿಗೆ ಹೋಲಿಸಿ ನೋಡಿರಿ. ಪಾಪಪರಿಹಾರಕ ದಿನದಂದು (ಯಾಜಕಕಾಂಡ 16 ನೇ ಅಧ್ಯಾಯ) ಮಹಾಯಾಜಕನು ಮಹಾಪರಿಶುದ್ಧ ಸ್ಥಳದೊಳಗೆ ಹೋದ ನಂತರ ದೇವಜನರು ಅವನು ಹಿಂದಿರುಗಿ ಬರುವದನ್ನು ಎದುರುನೋಡುತ್ತಾ ಇದ್ದರು. ಯೇಸು ಕ್ರಿಸ್ತನು ಸಹ ನಿಜವಾದ ಮಹಾಪರಿಶುದ್ಧ ಸ್ಥಳವಾಗಿರುವ ಪರಲೋಕದೊಳಗೆ ಹೋಗಿದ್ದಾನೆ. ಹೊರಗೆ, ಭೂಲೋಕದಲ್ಲಿ ಆತನ ಜನರು ಆತನಿಗಾಗಿ ಕಾಯುತ್ತಾ ಇದ್ದಾರೆ. ಯೇಸು ಕ್ರಿಸ್ತನ ಮೊದಲನೆ ಮತ್ತು ಎರಡನೇ ಬರೋಣದ ನಡುವೆಯ ಅವಧಿಯು ಮಹಾಪಾಪಪರಿಹಾರಕ ದಿನಕ್ಕೆ ಹೋಲಿಕೆಯಾಗಿದೆ ಎಂಬದನ್ನು ಇದು ಸೂಚಿಸುತ್ತದೆ.

# 10[1]

**10:1** *"ಛಾಯೆ"*– 8:2,5; 9:23-24. ದೇವದರ್ಶನ ಗುಡಾರ ಮತ್ತು ಕಾಣಿಕೆಗಳು ಹಾಗೂ ನಿಯಮಗಳು ಮತ್ತು ವಿಧಿಗಳನ್ನು ಹೊಂದಿದ್ದ ಧರ್ಮಶಾಸ್ತ್ರವು "ಒಳ್ಳೆಯ ಕಾರ್ಯಗಳ"ಛಾಯೆ ಮತ್ತು ಚಿತ್ರಣವೇ ಆಗಿತ್ತು – ಒಳ್ಳೆಯ ಕಾರ್ಯ ಎಂದರೆ, ಯೇಸು ಕ್ರಿಸ್ತನು ಮಾನವರಿಗಾಗಿ ಮಾಡಿದ ಸೇವೆ ಮತ್ತು ಆತನ ವಿಶ್ವಾಸಿಗಳ ನಿತ್ಯವಾದ ರಕ್ಷಣೆ.

*"ಎಂದಿಗೂ ಸಿದ್ಧಿಗೆ ತರಲಾರದಾಗಿತ್ತು"*– ವ 14; 2:10; 5:9; 11:40; 12:23. ಪ್ರಾಣಿಗಳ ಯಜ್ಞಗಳು ಯಾರನ್ನೂ ದೇವರ ಪ್ರಸನ್ನತೆಗೆ ಯೋಗ್ಯರನ್ನಾಗಿ ಮಾಡಲು ಶಕ್ಯವಾಗಿರಲಿಲ್ಲ (7:11,19). ಪ್ರಾಣಿಗಳನ್ನು ಯಜ್ಞವಾಗಿ ಅರ್ಪಿಸುವದರ ಪ್ರಾಮುಖ್ಯತೆಗಾಗಿ ಯಾಜಕ 1:2 ರ ನೋಟ್ಸ್ ನೋಡಿರಿ. **2-3**

**10:2-3** 9:9 ನೋಡಿರಿ. **2**

**10:2** *"ಪಾಪವುಂಟೆಂದು ಮನಸ್ಸು ಸಾಕ್ಷಿ ಕೊಡುವದು"*– ಅಥವಾ "ಪಾಪದ ಮನಸ್ಸಾಕ್ಷಿ". ಬರಹಗಾರನ ಮಾತುಗಳ ಅರ್ಥವೇನೆಂದರೆ ಜನರು ಒಂದುವೇಳೆ ತಾವು ಅರ್ಪಿಸಿರುವ ಯಜ್ಞಗಳಿಂದ ತಮ್ಮ ಪಾಪಗಳು ಸಂಪೂರ್ಣವಾಗಿ, ಅಂತಿಮವಾಗಿ ತೆಗೆದುಹಾಕಲ್ಪಟ್ಟಿವೆ ಎಂದು ಯೋಚಿಸಿದರೆ, ಅವರ ಮನಸ್ಸಾಕ್ಷಿಯು ಶುದ್ಧವಾಗಿರುತ್ತಾ ಇತ್ತು; ಅವರ ಹೃದಯವು ಇನ್ನೆಂದಿಗೂ ಅವರ ಮೇಲೆ ಆರೋಪ ಮಾಡುವದಿಲ್ಲ ಎಂದು ಅವರಿಗೆ ಗೊತ್ತಿತ್ತು. 9:14 ನೋಡಿರಿ. **4**

**10:4** *"ಅಸಾಧ್ಯವಾಗಿದೆಯಲ್ಲಾ"*– ಇದು ಯಾಕೆ ಅಸಾಧ್ಯವಾಗಿದೆ? ಪ್ರಾಣಿಗಳು ಮಾನವರಿಗೆ ಪರ್ಯಾಯವಾಗಲು ಮತ್ತು ಅವರ ಸ್ಥಾನದಲ್ಲಿ ಸಾಯಲು ಆಗುವದಿಲ್ಲ. ಮಾನವನ ಜಾಗದಲ್ಲಿ ಬೇರೊಬ್ಬನು ಸಾಯುವನು ಎಂಬದಕ್ಕೆ ಅವುಗಳು ಸೂಚನೆ ಅಥವಾ ಛಾಯೆಗಳಾಗಿದ್ದವು ಅಷ್ಟೇ. ಪ್ರಾಣಿಗಳಿಗೆ ನೈತಿಕ ಸ್ವಭಾವ ಇರುವದಿಲ್ಲ. ಅವುಗಳು ಅಮಾಯಕವಾದವುಗಳು, ಮಾನವನ ಪಾಪಗಳ ಶಿಕ್ಷೆಯನ್ನು ಸಹಿಸಿಕೊಳ್ಳಲು ಎಂದಿಗೂ ಆಗದ ಬಲಿಪಶುಗಳಾಗಿವೆ ಅಷ್ಟೆ. ಆ ಶಿಕ್ಷೆಯು ಆತ್ಮೀಕ ಮರಣ, ದೇವರಿಂದ ಬೇರ್ಪಡುವದಾಗಿದೆ. ಮತ್ತಾಯ 25:41; 2 ಥೆಸ 1:9; ಪ್ರಕ 20:14 ನೋಡಿರಿ. ಮಾನವನು ಸಹ ಮತ್ತೊಬ್ಬ ಮಾನವನ ಪಾಪಪರಿಹಾರಕ ಯಜ್ಞವಾಗಲು ಸಾಧ್ಯವಿಲ್ಲ. ಪ್ರತಿಯೊಬ್ಬ ಮಾನವನೂ ಪಾಪಿಯಾಗಿದ್ದಾನೆ ಮತ್ತು ತನ್ನ ಪಾಪಗಳಿಗಾಗಿ ಮಾತ್ರವೇ ಸಾಯುವವನಾಗಿದ್ದಾನೆಯೇ ಹೊರತು ಬೇರೆಯವರ ಪಾಪಗಳಿಗೆ ಸಾಯಲು ಆಗುವದಿಲ್ಲ. ಒಂದುವೇಳೆ ಪಾಪವಿಲ್ಲದ ಮಾನವನು ಇದ್ದಿದ್ದರೆ ಮತ್ತು ಅವನು ಪಾಪಗಳಿಗೆ ಯಜ್ಞವಾಗುವದಾದರೆ, ಅವನು ಕೇವಲ ಮತ್ತೊಬ್ಬನ ಸ್ಥಾನದಲ್ಲಿ ಸಾಯಬಹುದಾಗಿತ್ತೇ ಹೊರತು ಇಡೀ ಮಾನವ ಕುಲದವರಿಗಾಗಿಯಲ್ಲ. ಹಾಗೆಯೇ ದೇವರು ಅದಕ್ಕೆ ಒಪ್ಪಿಕೊಳ್ಳಬೇಕಾಗಿತ್ತು ಆದರೆ ಆತನು ಒಪ್ಪಿಕೊಂಡಿಲ್ಲ. ಪಾಪಪರಿಹಾರ ಮತ್ತು ಪರ್ಯಾಯ ಮರಣದ ಕುರಿತು ಸತ್ಯವೇದದ ಬೋಧನೆಯನ್ನು ಸಂಪೂರ್ಣವಾಗಿ ಗ್ರಹಿಸಿಕೊಳ್ಳಲು ನಾವು ಕೆಳಗೆ ಕೊಡಲಾಗಿರುವ ಸಂಗತಿಗಳನ್ನು ಮೊದಲು ಅರ್ಥಮಾಡಿಕೊಳ್ಳಬೇಕು: ಎಲ್ಲಾ ರೀತಿಯ ಪಾಪಗಳು ದೇವರಿಗೆ ವಿರುದ್ಧವಾದವುಗಳಾಗಿವೆ – ಕೀರ್ತನೆ 51:4 ನೋಡಿರಿ. ಕೆಲವು ಪಾಪಗಳು ಇತರೆ ಮನುಷ್ಯರಿಗೆ ಅಥವಾ ತನಗೆ ಅಥವಾ ಲೋಕಕ್ಕೆ ವಿರುದ್ಧವಾಗಿ ಮಾಡಿರುವವುಗಳಾಗಿ ಕಂಡರೂ, ಅವೆಲ್ಲವು ದೇವರಿಗೆ ವಿರುದ್ಧವಾಗಿ ಮಾಡಿರುವವುಗಳೇ ಆಗಿವೆ ಯಾಕಂದರೆ ಎಲ್ಲಾ ಮಾನವರು ಮತ್ತು ಇಡೀ ಸೃಷ್ಟಿ ಆತನ ಸ್ವಾಸ್ಥ್ಯವಾಗಿದೆ. ಒಂದುವೇಳೆ ಒಬ್ಬ ವ್ಯಕ್ತಿ ನಿಮ್ಮ ಮನೆಯನ್ನು ಹಾಳುಮಾಡುವದಾದರೆ ಅವನು ನಿಮಗೆ ವಿರುದ್ಧವಾಗಿ ಪಾಪಮಾಡುತ್ತಿದ್ದಾನೆ ಯಾಕಂದರೆ ಅದು ನಿಮ್ಮ ಮನೆಯಾಗಿದೆ. ಒಂದುವೇಳೆ ಒಬ್ಬನು ಮತ್ತೊಬ್ಬನಿಗೆ ಅಥವಾ ಆಸ್ತಿಗೆ ಅಥವಾ ವಾತಾವರಣಕ್ಕೆ ಹಾನಿ ಮಾಡಿದರೆ ಅವನು ದೇವರಿಗೆ ವಿರುದ್ಧವಾಗಿ ಪಾಪ ಮಾಡುವವನಾಗಿದ್ದಾನೆ ಯಾಕಂದರೆ ಎಲ್ಲವೂ ದೇವರದ್ದಾಗಿದೆ. ಒಂದುವೇಳೆ ಒಬ್ಬ ವ್ಯಕ್ತಿ ನಿಮಗೆ ವಿರುದ್ಧವಾಗಿ ಪಾಪ ಮಾಡಿದರೆ (ಅಂದರೆ ನಿಮ್ಮ ಮನೆಯನ್ನು ಹಾಳುಮಾಡಿದರೆ) ಮತ್ತು ನೀವು ಯಾವುದೇ ಕ್ರಿಯವನ್ನು ತೆಗೆದುಕೊಳ್ಳದೆ ಅವನನ್ನು ಕ್ಷಮಿಸಿದರೆ ಆತನು ನಿಮಗೆ ವಿರುದ್ಧವಾಗಿ ಮಾಡಿರುವ ಪಾಪಗಳ ಫಲಿತಾಂಶಗಳನ್ನು ನೀವು ನಿಮ್ಮ ಮೇಲೆ ಬರಮಾಡಿಕೊಳ್ಳುತ್ತಾ ಇದ್ದೀರಿ. ಅದರ ಕ್ರಿಯವನ್ನು ಪಾವತಿಸಲು ನೀವು ಮುಂದಾಗುವದಾಗಿ ತೋರಿಸುತ್ತಾ ಇದ್ದೀರಿ. ಒಂದುವೇಳೆ ದೇವರು ಎಲ್ಲರನ್ನು ಕ್ಷಮಿಸಲು ಸಿದ್ಧನಾಗಿದ್ದರೆ, ಆತನು ಅವರ ಪಾಪಗಳ ಫಲಿತಾಂಶಗಳನ್ನು ಹೊತ್ತುಕೊಳ್ಳಲು ಮತ್ತು ಅವರು ಮಾಡಿರುವ

ಕಾರ್ಯಗಳಿಗೆ ತಾನೇ ಕ್ರಯವನ್ನು ಕೊಡಲು ಸಿದ್ಧನಾಗಿರುತ್ತಾನೆ. ಪಾಪವು ಶಿಕ್ಷೆಗಾಗಿ, ಪ್ರತೀಕಾರಕ್ಕಾಗಿ ಕೂಗಿಕೊಳ್ಳುತ್ತದೆ (ಸಂಖ್ಯಾ 31:1-3; ಧರ್ಮೋ 32:41,43; ಯೆಶಾಯ 34:8; 47:3; ರೋಮಾ 12:19). ಈ ಶಿಕ್ಷೆಯನ್ನು ಯಾರು ಸಹಿಸಿಕೊಳ್ಳುತ್ತಾರೆ, ಯಾರು ಸಹಿಸಿಕೊಳ್ಳಬಹುದು? ದೇವರು ಮುರಿಯಲ್ಪಟ್ಟಿರುವ ತನ್ನ ವಿಧಿಗಳಿಗೆ ಎದುರುನೋಡುವ ನ್ಯಾಯವಾದ ಕ್ರಯವನ್ನು ಕೊಡುವವರು ಯಾರು? ಅಪರಾಧ ಮಾಡಿರುವ ಜನರು ಅಥವಾ ದೇವರು. ಕೇವಲ ಆತನು, ಪಾಪವಿಲ್ಲದ ಮಾನವನಾಗಿ ಬಂದು, ಮಾನವರ ಪಾಪಗಳಿಗಾಗಿ ತನ್ನನ್ನೇ ಯಜ್ಞವಾಗಿ ಅರ್ಪಿಸಿಕೊಂಡದ್ದರಿಂದ, ಅವರ ಕ್ರಯವನ್ನು ಪಾವತಿಸಲು ಮತ್ತು ಅವರ ಅಪರಾಧವನ್ನು ಪರಿಹರಿಸಲು ಸಾಧ್ಯವಾಯಿತು. ಇದನ್ನು ಆತನು ಮಾಡಿದನು. ಇದುವೇ ಯೇಸು ಕ್ರಿಸ್ತನು ಮಾನವನಾಗಿ ಬಂದದ್ದರ ಅರ್ಥವಾಗಿದೆ. ಆತನು, ಪಾಪವಿಲ್ಲದೆ ದೇವಮಾನವನು, ಎಲ್ಲಾ ಮಾನವರಿಗೆ ಪರ್ಯಾಯವಾಗಲು ಸಾಧ್ಯವಾಯಿತು. ಎಲ್ಲಾ ಪಾಪಗಳು ಆತನಿಗೆ ವಿರುದ್ಧವಾಗಿದ್ದವು. ನಮ್ಮ ಸ್ಥಾನದಲ್ಲಿ ಆತನು ಶಿಲುಬೆಯಲ್ಲಿ ತನ್ನ ದೇಹದ ಮೇಲೆ ಎಲ್ಲಾ ಪಾಪಗಳನ್ನು ಹೊತ್ತುಕೊಂಡನು ಹಾಗೂ ಅದರ ಶಿಕ್ಷೆಯನ್ನು ಅನುಭವಿಸಿದನು (2:9; 13:12; ಅಪೊ 20:28; 1 ಪೇತ್ರ 2:24). ಪಾಪಪರಿಹಾರ ಮತ್ತು ಕ್ಷಮಾಪಣೆ ಶ್ರಮೆಗಳ ಮೇಲೆ ಆಧಾರವಾಗಿವೆ – ಯಜ್ಞವಾಗಿ ಅರ್ಪಿಸಲ್ಪಡುವ ಪ್ರಾಣಿಯಾಗಲಿ, ನಮ್ಮ ಸ್ವಂತ ಶ್ರಮೆಯಾಗಲಿ ಅಲ್ಲದೇ ದೇವರ ಶ್ರಮೆಗಳ ಮೇಲೆ ಆಧಾರವಾಗಿವೆ. ಒಂದುವೇಳೆ ಯೇಸು ಕ್ರಿಸ್ತನು ದೇವರ ಪ್ರತಿರೂಪವಲ್ಲದೆ ಹೋಗಿದ್ದರೆ ಅಂತಿಮ ಹಾಗೂ ಪರಿಪೂರ್ಣ ಪಾಪಪರಿಹಾರವೇ ಇರುತ್ತಾ ಇರಲಿಲ್ಲ. **5-7**

**10:5-7** ಕೀರ್ತನೆ 40:6-8 ರ ನೋಟ್ಸ್ ನೋಡಿರಿ. ಈ ಹೇಳಿಕೆಯನ್ನು ಹಳೆಯ ಒಡಂಬಡಿಕೆಯ ಗ್ರೀಕ್ ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ, ಇದು ಕ್ರಿ.ಪೂ 3ನೇ ಶತಮಾನದ್ದಾಗಿದೆ. ಪ್ರಾಣಿಗಳನ್ನು ಯಜ್ಞವಾಗಿ ಅರ್ಪಿಸುವದರ ಬಗ್ಗೆ ತಾನು ಕೊಟ್ಟಿರುವ ಬೋಧನೆಯು ಸರಿಯಾದದ್ದು ಎಂಬದನ್ನು ಬರಹಗಾರನು ಹಳೆಯ ಒಡಂಬಡಿಕೆಯಿಂದ ತೋರಿಸುತ್ತಾ ಇದ್ದಾನೆ. **5**

**10:5** *"ಯಜ್ಞನೈವೇದ್ಯಗಳು"*– ದೇವರಿಗೆ ಪ್ರಾಣಿಗಳ ಯಜ್ಞಗಳು ಅವಶ್ಯವಾಗಿರಲಿಲ್ಲ ಬದಲಾಗಿ ಅವುಗಳಿಗಿಂತ ಉತ್ತಮವಾದ ಯಜ್ಞವು ಅವಶ್ಯವಾಗಿತ್ತು. 7ನೇ ವಚನದಲ್ಲಿ ಬರೆಯಲಾಗಿರುವ "ನಾನು" ಎಂದರೆ ಯೇಸು ಕ್ರಿಸ್ತನು. "ಇಗೋ ದೇವರೇ ನಿನ್ನ ಚಿತ್ತ"ಎಂದರೆ ಮಾನವರ ಪಾಪಿಗಳಿಗೆ ಯೇಸು ಕ್ರಿಸ್ತನು ತನ್ನನ್ನು ಯಜ್ಞವಾಗಿ ಅರ್ಪಿಸಬೇಕು ಎಂಬದೇ ದೇವರ ಚಿತ್ತವಾಗಿದೆ. **7**

**10:7** ಮತ್ತಾಯ 26:39,42,44. **8**

**10:8** *"ಧರ್ಮಶಾಸ್ತ್ರದ ಪ್ರಕಾರ ಸಮರ್ಪಣೆಯಾಗುವದು"*– ದೇವರು ಅವುಗಳನ್ನು ನೇಮಿಸಿದನು ಯಾಕಂದರೆ ಅವುಗಳು ಯೇಸು ಕ್ರಿಸ್ತನು ಯಜ್ಞವಾಗಿ ಅರ್ಪಿಸಿಕೊಳ್ಳುವದಕ್ಕೆ

ನಿದರ್ಶನಗಳಾಗಿವೆ. ಆದರೆ ತಾನು ಬಯಸಿದಂಥವುಗಳನ್ನೆಲ್ಲಾ ಮಾಡಲು ಅವುಗಳಿಂದ ಆಗುವದಿಲ್ಲ ಎಂಬದನ್ನು ಆತನು ಬಲ್ಲವನಾಗಿದ್ದನು. **9**

**10:9** *"ಆತನು ಎರಡನೆಯದನ್ನು ಸ್ಥಾಪಿಸುವದಕ್ಕಾಗಿ"*– ಆತನ ಮಾತಿನ ಅರ್ಥ ಹಳೆಯ ಮತ್ತು ಹೊಸ ಒಡಂಬಡಿಕೆಗಳು. ಆತನು ಮೊದಲನೆಯದನ್ನು ಪಕ್ಕಕ್ಕೆ ಇಟ್ಟಿದ್ದಾನೆ – 8:7,13. **10**

**10:10** *"ಶುದ್ಧರಾದೆವು"*– ದೇವರ ಚಿತ್ತವನ್ನು ಸಂಪೂರ್ಣವಾಗಿ ನೆರವೇರಿಸಿ, ವಿಶ್ವಾಸಿಗಳಿಗಾಗಿ ಪ್ರಾಣ ಕೊಡುವ ಮೂಲಕ ಯೇಸು ಕ್ರಿಸ್ತನು ಅವರನ್ನು ಪರಿಶುದ್ಧರನ್ನಾಗಿ ಮಾಡಿದ್ದಾನೆ. ಇದರ ಅರ್ಥ ಆತನು ಅವರನ್ನು ಬೇರ್ಪಡಿಸಿದ್ದಾನೆ ಮತ್ತು ಅವರನ್ನು ದೇವಜನರನ್ನಾಗಿ ಪ್ರತಿಷ್ಠಿಸಿದ್ದಾನೆ – 1 ಪೇತ್ರ 2:9. ಯಾಜಕ 20:7; ಯೋಹಾನ 17:17-19 ರಲ್ಲಿ ಪರಿಶುದ್ಧತೆ ಮತ್ತು ಶುದ್ಧೀಕರಣದ ಕುರಿತಾಗಿರುವ ನೋಟ್ಸ್ ನೋಡಿರಿ. ಇಲ್ಲಿ 10 ನೇ ವಚನದಲ್ಲಿ ಕೊಡಲಾಗಿರುವ ಪದವು ವಿಶ್ವಾಸಿಗಳು ಜೀವಿಸಬೇಕಾಗಿರುವ ಪರಿಶುದ್ಧತೆಯ ಬಗ್ಗೆ ಮಾತನಾಡುವದಿಲ್ಲ. ಅದನ್ನು 12:10-16 ರಲ್ಲಿ ನೋಡಬಹುದು. ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ಈಗ ಪರಿಶುದ್ಧರಾಗಿದ್ದಾರೆ, ಅವರು ಪರಿಶುದ್ಧರಾಗುತ್ತಾ ಇದ್ದಾರೆ (12:10), ಅವರು ಅಂತಿಮವಾಗಿ ಸಂಪೂರ್ಣ ಪರಿಶುದ್ಧರಾಗುತ್ತಾರೆ (ಕೊಲೊ 1:22). ಇದು ವಿಶೇಷವಾಗಿ ಕೆಲವರ ಬಗ್ಗೆ ಮಾತ್ರವಲ್ಲ ಬದಲಾಗಿ ಎಲ್ಲಾ ವಿಶ್ವಾಸಿಗಳ ವಿಷಯದಲ್ಲಿ ಸತ್ಯವಾಗಿದೆ. **11**

**10:11** *"ನಿಂತುಕೊಂಡಿರುವವರು"*– ದೇವದರ್ಶನ ಗುಡಾರ ಅಥವಾ ದೇವಾಲಯದಲ್ಲಿ ಕುರ್ಚಿ ಇರಲಿಲ್ಲ. ಅಲ್ಲಿ ಸೇವೆ ಮಾಡುವ ಯಾಜಕರ ಕೆಲಸವು ಎಂದಿಗೂ ಮುಗಿಯುವದಿಲ್ಲ ಎಂಬದು ಇದರ ಅರ್ಥವಾಗಿದೆ.

*"ಎಂದಿಗೂ ಪಾಪನಿವಾರಣೆ ಮಾಡುವದಿಲ್ಲ"*– ವ 4. **12**

**10:12** *"ನಿರಂತರವಾಗಿ"*– ವ 10,14; 9:12,25-28. ಆತನ ಒಂದು ಯಜ್ಞವು ನಿರಂತರವಾದದ್ದಾಗಿದೆ, ಯಾಕಂದರೆ ಪಾಪಕ್ಕೆ ಬೇರೆ ಯಾವ ಯಜ್ಞವು ಅವಶ್ಯವಿಲ್ಲ.

*"ಕೂತುಕೊಂಡನು"*– ಯಜ್ಞವನ್ನರ್ಪಿಸುವ ಆತನ ಕಾರ್ಯವು ಶಾಶ್ವತವಾಗಿ ಮುಗಿಯಿತು ಎಂಬದನ್ನು ಇದು ಸೂಚಿಸುತ್ತದೆ. ಇದಕ್ಕೆ ಬೇರೆ ಏನನ್ನೂ ಸೇರಿಸಲು ಆಗುವದಿಲ್ಲ. ಯೋಹಾನ 19:30 ನೋಡಿರಿ. ಈಗ ಯಾಜಕರೆಂದು ಕರೆದುಕೊಳ್ಳುವವರು ಮಾಡುವ ಕಾರ್ಯಗಳು ಜನರ ರಕ್ಷಣೆಗೆ ಅವಶ್ಯವಿಲ್ಲ.

*"ಬಲಗಡೆಯಲ್ಲಿ"*– ಬರಹಗಾರನು ತನ್ನ ಪತ್ರಿಕೆಯಲ್ಲಿ ಮೊದಲು ಪ್ರಾರಂಭಿಸಿದ ವಿಷಯಕ್ಕೆ – 1:3 ಮತ್ತೆ ಕರೆದುಕೊಂಡು ಬರುತ್ತಾ ಇದ್ದಾನೆ. **13**

**10:13** *"ಪಾದಪೀಠ"*– 1:13; ಕೀರ್ತನೆ 110:1. ತಂದೆಯಾದ ದೇವರು ಯೇಸು ಕ್ರಿಸ್ತನ ವೈರಿಗಳನ್ನು ಇನ್ನೂ ಆತನಿಗೆ "ಪಾದಪೀಠವಾಗಿ"ಮಾಡಿಲ್ಲ. ಯೇಸು ಕ್ರಿಸ್ತನು ಇನ್ನೂ ಆ

ಸಮಯವನ್ನು ಎದುರುನೋಡುತ್ತಾ ಇದ್ದಾನೆ. ಆ ಸಮಯವು ಬರುತ್ತದೆ – ಪ್ರಕ 11:15-18.
**14**

**10:14** ನೂರಾರು ವರ್ಷಗಳಿಂದ ಯಾಜಕರು ಪ್ರತಿವರ್ಷ ಸಾವಿರಾರು ಪ್ರಾಣಿಗಳನ್ನು ಯಜ್ಞವಾಗಿ ಅರ್ಪಿಸುತ್ತಾ ಇದ್ದರು, ಆದರೆ ಅವುಗಳ ಮೂಲಕ ಒಂದು ಪಾಪವೂ ಪರಿಹಾರವಾಗಲಿಲ್ಲ, ಒಬ್ಬ ವ್ಯಕ್ತಿಯೂ "ಸಿದ್ಧಿಗೆ" ಬರಲಿಲ್ಲ. ಆದರೆ ಯೇಸು ಕ್ರಿಸ್ತನ ಒಂದು ಯಜ್ಞ ವಿಶ್ವಾಸಿಗಳೆಲ್ಲರನ್ನೂ ಶಾಶ್ವತವಾಗಿ ಪರಿಪೂರ್ಣರನ್ನಾಗಿ ಮಾಡಿತು. ಇದರ ಅರ್ಥ ಏನು? "ಸಿದ್ಧಿ" ಎಂದು ಭಾಷಾಂತರ ಮಾಡಿರುವ ಗ್ರೀಕ್ ಪದದ ಒಂದು ಅರ್ಥವೇನೆಂದರೆ "ಸಿದ್ಧಿಗೆ ಬಂದರು" ಎಂಬದಾಗಿದೆ. ಈ ವಚನದಲ್ಲಿ ಇದರ ಅರ್ಥ ಏನೆಂದರೆ: ಯೇಸು ಕ್ರಿಸ್ತನು ತನ್ನ ಜನರಿಗಾಗಿ ಅರ್ಪಿಸಿದ ಯಜ್ಞವು ಅವರನ್ನು ಯಾವುದೇ ಕೊರತೆಯಿಲ್ಲದೆ ಸಂಪೂರ್ಣವಾಗಿ ರಕ್ಷಿಸುತ್ತದೆ (7:25 ರೊಂದಿಗೆ ಹೋಲಿಸಿ ನೋಡಿರಿ). ಆತನ ಒಂದು ಯಜ್ಞವು ದೇವರ ಎದುರಿನಲ್ಲಿ ಸಿದ್ಧಿಗೆ ಬಂದವರಾಗಿ ನಿಂತುಕೊಳ್ಳಲು ಆಧಾರವಾಗಿದೆ. ಅದರ ಮೂಲಕ ಪ್ರತಿಯೊಂದು ಅಡೆತಡೆಯು ತೆಗೆದುಹಾಕಲ್ಪಟ್ಟಿದೆ ಮತ್ತು ಪರಿಪೂರ್ಣವಾದ ಸಮಾಧಾನವನ್ನು ನೆಲೆಗೊಳಿಸಲಾಗಿದೆ. ಯೇಸು ಕ್ರಿಸ್ತನು ಸಂಪೂರ್ಣವಾಗಿ ಅವರ ಪಾಪಗಳನ್ನು ತೆಗೆದುಹಾಕಿದ್ದಾನೆ - ಅವರಿಗೆ ವಿರುದ್ಧವಾಗಿ ಒಂದೂ ಲೆಕ್ಕದಲ್ಲಿ ಇಲ್ಲ (ರೋಮಾ 4:8; 8:33). ಆತನು ಅವರಿಗೆ ದೇವರೊಂದಿಗೆ ಪರಿಪೂರ್ಣವಾದ ಸಂಬಂಧವನ್ನು ಒದಗಿಸಿದ್ದಾನೆ (ರೋಮಾ 8:1,15; 2 ಕೊರಿಂಥ 5:18-19). ಆತನು ಅವರ ಮನಸ್ಸಾಕ್ಷಿಯನ್ನು ಸಂಪೂರ್ಣವಾಗಿ ಶುದ್ಧೀಕರಿಸಿದ್ದಾನೆ (9:14). ಅವರು ಈಗ ಮತ್ತು ಶಾಶ್ವತವಾಗಿ ದೇವರ ರಾಜ್ಯದೊಳಗೆ ಪ್ರವೇಶಿಸಲು ಆತನು ಅವರನ್ನು ಸಂಪೂರ್ಣವಾಗಿ ಯೋಗ್ಯರನ್ನಾಗಿ ಮಾಡಿದ್ದಾನೆ (ವ 22; ರೋಮಾ 5:2; ಎಫೆ 2:18). ಇಲ್ಲಿ "ಸಿದ್ಧಿಗೆ" ತಂದಿದ್ದಾನೆ ಎಂದು ಉಪಯೋಗಿಸಲಾಗಿರುವ ಪದದ ಅರ್ಥವು ಇದೇ ಆಗಿರುವದರಿಂದ (23 ನೇ ವಚನದ ತನಕ) ಇದು ನಮಗೆ ಸ್ಪಷ್ಟವಾಗುತ್ತದೆ. ಭೂಮಿಯ ಮೇಲಿರುವ ಯಾವ ವಿಶ್ವಾಸಿಯು ಸಿದ್ಧಿಗೆ ಬಂದಿಲ್ಲ ಅಂದರೆ ಆತನಲ್ಲಿ ಯಾವುದೇ ದೋಷವಾಗಲಿ ಅಥವಾ ಪಾಪವಾಗಲಿ ಇಲ್ಲ ಅಥವಾ ತಪ್ಪು ಮಾಡುವದಿಲ್ಲ ಎಂದು ಹೇಳಲು ಆಗುವದಿಲ್ಲ – ಯಾಕೋಬ 3:2; 1 ಯೋಹಾನ 1:8. ಯಾವ ವಿಶ್ವಾಸಿಯೂ ಪ್ರತಿಯೊಂದು ರೀತಿಯಲ್ಲಿಯೂ ಸಿದ್ಧಿಗೆ ಬಂದವನಲ್ಲ – ಫಿಲಿಪ್ಪಿ 3:12 ನೋಡಿರಿ, ಅಲ್ಲಿಯೂ ಇದೇ ಪದವನ್ನು ಉಪಯೋಗಿಸಲಾಗಿದೆ. ಆ ರೀತಿಯ ಸಿದ್ಧಿಯು ಭವಿಷ್ಯದಲ್ಲಿ ಎದುರುನೋಡುತ್ತಾ ಇದೆ – 1 ಯೋಹಾನ 3:2.

"*ನಿರಂತರ*"– 5:9; 9:12. ಯೇಸು ಕ್ರಿಸ್ತನು ತನ್ನ ಜನರಿಗಾಗಿ ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಅರ್ಪಿಸಿರುವ ಯಜ್ಞದ ಫಲಿತಾಂಶವು ಶಾಶ್ವತವಾಗಿದೆ ಮತ್ತು ಬದಲಿಸಲು ಆಗದ್ದಾಗಿದೆ.

"*ಪವಿತ್ರರಾಗುತ್ತಿರುವವರು*"– ವ 10. ಈ ವಚನವನ್ನು "ಪವಿತ್ರರನ್ನಾಗಿ

ಮಾಡಲಾಗುತ್ತದೆ" ಎಂಬದಾಗಿ ಭಾಷಾಂತರ ಮಾಡಿದರೆ (ಹೀಗೆಯೇ ಇರಬೇಕು ಎಂದು ಕೆಲವು ಪಂಡಿತರು ಹೇಳುತ್ತಾರೆ), ಆಗ ಈ ವಚನವು ಕ್ರಿಸ್ತನಲ್ಲಿರುವ ಎಲ್ಲಾ ವಿಶ್ವಾಸಿಗಳಿಗೆ ನಡೆಯುತ್ತಿರುವ ಕಾರ್ಯವನ್ನು ಸೂಚಿಸುತ್ತದೆ, ವಿಶ್ವಾಸಿಗಳೆಲ್ಲರೂ ಏನಾಗಿದ್ದಾರೆ ಎಂಬದಕ್ಕೆ ಇದು ವ್ಯಾಖ್ಯಾನವಾಗಿರುತ್ತದೆ. 12:5-10; ಮತ್ತಾಯ 5:6,8; ರೋಮಾ 6:15-22; 8:12-14; 1 ಯೋಹಾನ 3:3,6,9,10. ಕ್ರಿಸ್ತನಲ್ಲಿರುವ ವಿಶ್ವಾಸಿಗಳೆಲ್ಲರೂ ಆತನಲ್ಲಿ "ಸಿದ್ಧಿಗೆ" ಬರುತ್ತಾರೆ ಮತ್ತು ಶುದ್ಧರಾಗಿದ್ದಾರೆ ಹಾಗೂ ಶುದ್ಧರಾಗುತ್ತರೆಯೇ ಹೊರತು ಕೇವಲ ಪರಿಶುದ್ಧರು ಹಾಗೂ ಸಮರ್ಪಣೆಯುಳ್ಳವರಾಗಿರುವವರು ಮಾತ್ರವಲ್ಲ. **15**

**10:15** *"ಪವಿತ್ರಾತ್ಮನು ಸಹ ನಮಗೆ ಸಾಕ್ಷಿಕೊಡುವವನಾಗಿ . . . ನುಡಿಯುತ್ತಾನೆ"*– 3:7; 9:8; 2 ತಿಮೊ 3:16; 2 ಪೇತ್ರ 1:21. ಇಲ್ಲಿ ಆತನು ವಿಶ್ವಾಸಿಗಳು "ಸಿದ್ಧಿಗೆ ಬರುವದು"ಅಂದರೆ ಏನು ಎಂಬದನ್ನು ತಿಳಿಸುತ್ತಾ ಇದ್ದಾನೆ. **16**

**10:16** ಯೆರೆ 31:34 ನೋಡಿರಿ. ಯೇಸು ಕ್ರಿಸ್ತನು ವಿಶ್ವಾಸಿಗಳಲ್ಲಿ ಉಂಟುಮಾಡುವ ಪರಿಪೂರ್ಣತೆಯಲ್ಲಿ ಇದು ಅತ್ಯಂತ ಪ್ರಾಮುಖ್ಯವಾದ ಭಾಗವಾಗಿದೆ. ದೇವರು ಅವರಿಗೆ ತನ್ನ ನಿಯಮಗಳ ವಿಷಯದಲ್ಲಿ ಆತ್ಮೀಕ ತಿಳುವಳಿಕೆಯನ್ನು ಮತ್ತು ಅವುಗಳಿಗೆ ವಿಧೇಯರಾಗಲು ಆಂತರ್ಯ ಬಯಕೆ ಹಾಗೂ ಸಾಮರ್ಥ್ಯವನ್ನು ಕೊಡುತ್ತಾನೆ. ಇದು ಯೇಸು ಕ್ರಿಸ್ತನಲ್ಲಿಯೂ ಇತ್ತು (ವ 7), ಯೇಸು ಕ್ರಿಸ್ತನ ಯಜ್ಞದ ಆಧಾರದಲ್ಲಿ ದೇವರು ತನ್ನ ಜನರಿಗೆ ಇದನ್ನೇ ಕೊಡುತ್ತಾನೆ. ಇದು ಹೊಸ ಒಡಂಬಡಿಕೆಯ ಅತ್ಯಂತ ಪ್ರಾಮುಖ್ಯವಾದ ಗುರುತಾಗಿದೆ. ನಿಜವಾಗಿ ಹೇಳುವದಾದರೆ, ಇದಿಲ್ಲದೆ ಹೋದರೆ ಒಬ್ಬನು ನಿಜವಾದ ವಿಶ್ವಾಸಿಯಾಗಿದ್ದಾನೆ ಎಂಬದಕ್ಕೆ ಇರುವ ಪುರಾವೆಯಾದರೂ ಏನು? ಯೋಹಾನ 14:15,23; ರೋಮಾ 8:3-4; 1 ಕೊರಿಂಥ 2:16; 2 ಕೊರಿಂಥ 3:3 ನೋಡಿರಿ. ಸತ್ಯವೇದದಲ್ಲಿ ದೇವರು ಪ್ರಕಟಿಸಿರುವ ಚಿತ್ತದಂತೆ ನಡೆದುಕೊಳ್ಳಲು ಸಂತೋಷವಿಲ್ಲದಿರುವ, ಯೇಸು ಕ್ರಿಸ್ತನ ಸೇವೆ ಮಾಡಲು ಮನಸ್ಸಿಲ್ಲದಿರುವ, ದೇವರ ಮೇಲೆ ಪ್ರೀತಿಯೇ ಇಲ್ಲದಿರುವ ವ್ಯಕ್ತಿ ನನ್ನ ಪಾಪಗಳೆಲ್ಲಾ ಪರಿಹಾರವಾಗಿವೆ ಎಂದು ಹೇಳಿದರೆ ಏನು ಪ್ರಯೋಜನ? ಹೊಸ ಒಡಂಬಡಿಕೆಯ ಆಶೀರ್ವಾದಗಳನ್ನು ವಿಭಾಗಿಸಲು ಸಾಧ್ಯವೇ? ನಾವು ಒಂದನ್ನು ಹೊಂದಿಕೊಂಡು ಇನ್ನೊಂದನ್ನು ನಿರಾಕರಿಸಬಹುದೇ? **17**

**10:17** ಯೇಸು ಕ್ರಿಸ್ತನು ವಿಶ್ವಾಸಿಗಳನ್ನು "ಸಿದ್ಧಿಗೆ" ತಂದಿದ್ದಾನೆ ಎಂಬದಾಗಿ ಬರಹಗಾರನು ಹೇಳಿರುವದರ ಅರ್ಥವನ್ನು ತೋರಿಸಲು ಇದು ನಮಗೆ ಸಹಾಯ ಮಾಡುತ್ತದೆ. ಆತನು ಅವರಿಗೆ ಸಂಪೂರ್ಣವಾದ ಪಾಪ ಪರಿಹಾರವನ್ನು ಕೊಟ್ಟಿದ್ದಾನೆ. ವಿಶ್ವಾಸಿಗಳನ್ನು ಆತನು ನೀತಿವಂತರನ್ನಾಗಿ ಎಣಿಸಿದ್ದಾನೆ ಎಂಬದಾಗಿ ಪೌಲನು ಹೇಳಿರುವ ಮಾತುಗಳ ಅರ್ಥ ಇದುವೇ ಆಗಿದೆ. ರೋಮಾ 3:24; 4:6-8; 8:33 ನೋಡಿರಿ. ವಿಶ್ವಾಸಿಗಳು ದೇವರ ಮುಂದೆ ನಿಂತುಕೊಳ್ಳುವದನ್ನು ದೇವರು ಪರಿಪೂರ್ಣ ಮಾಡಿದ್ದಾನೆ. **18**

**10:18** *"ಅವಶ್ಯವಿಲ್ಲ"*– ಕಾರ್ಯವು ಸಂಪೂರ್ಣವಾಗಿ, ಪರಿಪೂರ್ಣವಾಗಿ ಮತ್ತು ಶಾಶ್ವತವಾಗಿ ಮುಗಿದಿದೆ. ದೇವರಿಗೆ ಬೇರೆ ಯಾವುದೇ ಯಜ್ಞವಾಗಲಿ ಅಥವಾ ಯೇಸು ಕ್ರಿಸ್ತನು ಒಂದೇ ಸಾರಿ ಅರ್ಪಿಸಿರುವ ಯಜ್ಞವನ್ನು ಮತ್ತೆ ಅರ್ಪಿಸುವದಾಗಲಿ ಬೇಕಾಗಿಲ್ಲ. **19-23**

**10:19-23** ಇಲ್ಲಿ, ನಾವು ಬರಹಗಾರನು ಇಲ್ಲಿಯ ತನಕ ಹೇಳುತ್ತಿರುವ ವಿಷಯದ ಕುರಿತು ಅತ್ಯಂತ ಪ್ರಾಮುಖ್ಯ ಹಾಗೂ ಪರಿಣಾಮಕಾರಿಯಾದ ವಿಷಯಗಳನ್ನು ನಾವು ನೋಡಬಹುದಾಗಿದೆ. **19**

**10:19** *"ಹೀಗಿರುವಲ್ಲಿ"*– 2:1; 3:1; 4:1,14; 6:1. ಬರಹಗಾರನು ಯೇಸು ಕ್ರಿಸ್ತನು ಮಹಾಯಾಜಕನಾಗಿದ್ದಾನೆ ಮತ್ತು ಹೊಸ ಒಡಂಬಡಿಕೆಯ ಮಧ್ಯಸ್ಥನಾಗಿದ್ದಾನೆ ಎಂಬ ವಿಷಯದಲ್ಲಿ ತಾನು ಕೊಡುತ್ತಿದ್ದ ಬೋಧನೆಯನ್ನು ಇಲ್ಲಿಗೆ ಮುಗಿಸಿದ್ದಾನೆ. ವಿಶ್ವಾಸಿಗಳೆಲ್ಲರೂ ಈ ಸತ್ಯದನುಸಾರ ನಡೆದುಕೊಳ್ಳಬೇಕೆಂದು ಆತನು ಬುದ್ಧಿಮಾತು ಹೇಳುತ್ತಾ ಇದ್ದಾನೆ. ಹೀಗೆ ಮಾಡುವ ಮೂಲಕ ಅವರು ದೇವರ ಎದುರಿನಲ್ಲಿ "ಸಿದ್ಧಿಯುಳ್ಳವರಾಗಿ"ನಿಲ್ಲುವಂತೆ ಆತನು ಮಾಡಿರುವದನ್ನು ಹೆಚ್ಚಾಗಿ ತಿಳಿಸುತ್ತಾ ಇದ್ದಾನೆ.

*"ನಮಗೆ ಧೈರ್ಯವುಂಟಾಯಿತು"*– ಹಳೆ ಒಡಂಬಡಿಕೆಯ ಪ್ರಕಾರ ಮಹಾಯಾಜಕನು ಮಾತ್ರವೇ ವರ್ಷಕ್ಕೊಮ್ಮೆ ಮಹಾಪರಿಶುದ್ಧ ಸ್ಥಳದೊಳಗೆ ಹೋಗಬೇಕಾಗಿತ್ತು (9:7). ಸಾಧಾರಣರಾದ ಯಾವ ಇಸ್ರಾಯೇಲ್ಯರಿಗೂ ಅದರೊಳಗೆ ಹೋಗಲು ಧೈರ್ಯವಿರಲಿಲ್ಲ. ಈಗ ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಯು ಯಾವ ಸಮಯದಲ್ಲಿ ಬೇಕಾದರೂ ಆತ್ಮವಿಶ್ವಾಸದಿಂದ ಪರಲೋಕದ ಮಹಾಪರಿಶುದ್ಧ ಸ್ಥಳದೊಳಗೆ ಹೋಗಬಹುದು – ಅಂದರೆ, ದೇವರ ಪ್ರಸನ್ನತೆಗೆ ಹೋಗಬಹುದು. ದೇವರು ವಿಶ್ವಾಸಿಗಳನ್ನೆಲ್ಲಾ "ಯಾಜಕರನ್ನಾಗಿ" ಮಾಡಿದ್ದಾನೆ (13:15-16; 1 ಪೇತ್ರ 2:9; ಪ್ರಕ 1:6), ಮತ್ತು ಅವರೆಲ್ಲರೂ ತಮ್ಮ ಮಹಾಯಾಜಕನ ಹಿಂದೆ ದೇವರ ಪ್ರಸನ್ನತೆಗೆ ಹೋಗಬಹುದು. ಇದಕ್ಕೆ ಒಂದು ಕಾರಣವೆಂದರೆ ಯೇಸು ಕ್ರಿಸ್ತನ ರಕ್ತವು ಪಾಪಗಳನ್ನು ಪರಿಹರಿಸಿದೆ ಮತ್ತು ದೇವರನ್ನು ಹಾಗೂ ಮಾನವರನ್ನು ಬೇರ್ಪಡಿಸುತ್ತಾ ಇದ್ದ ತಡೆಯನ್ನು ತೆಗೆದುಹಾಕಿದೆ. **20**

**10:20** ಜನರನ್ನು ದೂರವೇ ಇರಿಸುತ್ತಿದ್ದ ಹಳೆ ಒಡಂಬಡಿಕೆಯ ಮಾರ್ಗಕ್ಕೆ ಹೋಲಿಸಿದರೆ (ವಿಮೋ 19:21-25; 27:9-19) ಯೇಸು ಕ್ರಿಸ್ತನ ಈ ಮಾರ್ಗವು ಹೊಸದಾಗಿದೆ. ಇದು ಜೀವಿಸುವ ಮಾರ್ಗವಾಗಿದೆ, ಈ ಮಾರ್ಗವು ಯೇಸು ಕ್ರಿಸ್ತನ ಜೀವಿತದ ಮೇಲೆ ಆಧಾರವಾಗಿದೆ ಮತ್ತು ಆತನಲ್ಲಿ ನಂಬಿಕೆಯನ್ನಿಡುವವರಿಗೆ ಹೊಸ ಆತ್ಮೀಕ ಜೀವನವನ್ನು ಕೊಡುತ್ತದೆ – ಯೋಹಾನ 14:6; 3:1-8. ಇದು ಹಳೆ ಒಡಂಬಡಿಕೆಯ ನಿರ್ಜೀವಕರ್ಮಗಳಿಗೆ ವಿರುದ್ಧವಾದದ್ದಾಗಿದೆ.

*"ತೆರೆ"*– ದೇವದರ್ಶನ ಗುಡಾರ ಮತ್ತು ದೇವಾಲಯದೊಳಗೆ ಒಂದು ತೆರೆಯಿತ್ತು ಅದು ಮಹಾಪರಿಶುದ್ಧ ಸ್ಥಳ ಹಾಗೂ ಪರಿಶುದ್ಧ ಸ್ಥಳವನ್ನು ಬೇರ್ಪಡಿಸುತ್ತದೆ (9:3). ದೇವರ

ಪ್ರಸನ್ನತೆಗೆ ಹೋಗುವ ಮಾರ್ಗವು ಇನ್ನೂ ಪ್ರಕಟವಾಗಿರಲಿಲ್ಲ ಎಂಬದನ್ನು ಇದು ಸೂಚಿಸುತ್ತದೆ – 9:8. ಆ ತೆರೆಯು ಯೇಸು ಕ್ರಿಸ್ತನಿಗೆ ಸೂಚನೆಯಾಗಿದೆ. ಯೇಸು ಕ್ರಿಸ್ತನು ಮಾನವನಾಗಿ ಬಂದಾಗಿ (10:5) ಮತ್ತು ನಮ್ಮ ಪಾಪಗಳಿಗಾಗಿ ಪ್ರಾಣ ಕೊಟ್ಟಾಗ, ದೇವಾಲಯದೊಳಗಿದ್ದ ತೆರೆಯು ಹರಿದು ಹೋಯಿತು – ಮತ್ತಾಯ 27:50-51, ಮಧ್ಯದಲ್ಲಿ ಸ್ಥಳವನ್ನು ಉಂಟುಮಾಡಿತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನ ಮರಣವು ದೇವರ ಪ್ರಸನ್ನತೆಗೆ ಹೋಗುವ ಮಾರ್ಗವನ್ನು ಪ್ರಕಟಪಡಿಸಿತು. ಶಿಲುಬೆಗೆ ಜಡಿಯಲ್ಪಟ ಯೇಸು ಕ್ರಿಸ್ತನ ದೇಹವು ನಮಗಾಗಿ ಮುರಿಯಲ್ಪಟ್ಟದ್ದರಿಂದ ನಾವು ಮಹಾಪರಿಶುದ್ಧ ಸ್ಥಳದೊಳಗೆ ಹೋಗಬಹುದು. **21**

**10:21** *"ಶ್ರೇಷ್ಠ ಯಾಜಕನು ನಮಗಿದ್ದಾನೆ"*– 2:17; 4:14.

*"ದೇವರ ಮನೆ"*– 3:6. **22**

**10:22** *"ದೇವರ ಬಳಿಗೆ ಬರೋಣ"*– 4:16; ಎಫೆ 2:18; 3:12; ರೋಮಾ 5:1-2; ಯಾಕೋಬ 4:8. ನಾವು ದೇವರ ಹತ್ತಿರಕ್ಕೆ ಬರಲು ನಮಗೆ ನಾಲ್ಕು ಕಾರ್ಯಗಳು ಸಹಾಯ ಮಾಡುತ್ತವೆ ಎಂಬದಾಗಿ ಬರಹಗಾರನು ಹೇಳಿದ್ದಾನೆ.

*"ಯಥಾರ್ಥ ಹೃದಯ"*– ಲೂಕ 12:1; ಮತ್ತಾಯ 5:8; ಯೋಹಾನ 4:23-24; 1 ಕೊರಿಂಥ 5:8.

*"ಪೂರ್ಣವಾದ ನಂಬಿಕೆ"*– 11:1,6. 3:12 ರೊಂದಿಗೆ ಹೋಲಿಸಿ ನೋಡಿರಿ. ವಿಶ್ವಾಸಿಗಳು ಇದನ್ನು ಹೊಂದಿರಬೇಕು ಮತ್ತು ಹೊಂದಲು ಸಾಧ್ಯ. ಯೇಸು ಕ್ರಿಸ್ತನು ನಮ್ಮ ಪಾಪಗಳನ್ನು ಪರಿಹರಿಸಿದ್ದಾನೆ, ಆತನು ನಮ್ಮ ಮಹಾಯಾಜಕನು, ಆತನ ಮಾರ್ಗಗಳು ನಮ್ಮನ್ನು ದೇವರ ಕಡೆಗೆ ನಡೆಸುತ್ತವೆ, ದೇವರು ನಮ್ಮನ್ನು ತನ್ನ ಪ್ರಸನ್ನತೆಗೆ ಕರೆದುಕೊಳ್ಳುತ್ತಾನೆ ಎಂಬ ಭರವಸೆ ನಮಗೆ ಇರಬೇಕು. ಈ ವಿಷಯಗಳ ಬಗ್ಗೆ ನಮ್ಮ ಹೃದಯಗಳಲ್ಲಿ ಯಾವುದೇ ಸಂದೇಹಗಳು ಮತ್ತು ಹೆದರಿಕೆಗಳು ಇರಬಾರದು. ದೇವರು ಇಬ್ರಿಯರಿಗೆ ಬರೆದಿರುವ ಈ ಪತ್ರಿಕೆಯ ವಿಷಯಗಳನ್ನು ನಾವು ಹೆಚ್ಚಾಗಿ ಅರ್ಥಮಾಡಿಕೊಂಡಷ್ಟು, ನಮ್ಮ ಭರವಸೆಯು ಅಷ್ಟು ಹೆಚ್ಚಾಗಿರುವದು. 3:14; 6:19; 1 ಯೋಹಾನ 5:13; 2 ತಿಮೊ 1:12; ಯೋಹಾನ 14:1; ಲೂಕ 12:32 ರೊಂದಿಗೆ ಹೋಲಿಸಿ ನೋಡಿರಿ.

*"ಕೆಟ್ಟ ಮನಸ್ಸಾಕ್ಷಿಯಿಂದ ಪ್ರೋಕ್ಷಿಸಿ ಬಿಡಿಸಿದ್ದಾನೆ"*– ಹೃದಯ "ಪ್ರೋಕ್ಷಣವು" ಆಂತರಿಕ ಅನುಭವದ ಬಗ್ಗೆ ಮಾತನಾಡುತ್ತದೆ. 9:13-14 ನೋಡಿರಿ. ಯೇಸು ಕ್ರಿಸ್ತನ ರಕ್ತವನ್ನು ವಿಶ್ವಾಸಿಯ ಹೃದಯದ ಮೇಲೆ ಪ್ರೋಕ್ಷಿಸಲಾಗುತ್ತದೆ. ಇದರ ಅರ್ಥ ಯೇಸು ಕ್ರಿಸ್ತನ ಯಜ್ಞವನ್ನು ಅರ್ಥಮಾಡಿಕೊಳ್ಳುವದು ಮತ್ತು ಅದರಲ್ಲಿ ನಂಬಿಕೆಯನ್ನಿಡುವದರಿಂದ, ಹೃದಯವು ಶುದ್ಧವಾಗುತ್ತದೆ.

*"ದೇಹವನ್ನು ತಿಳಿನೀರಿನಿಂದ ತೊಳಕೊಳ್ಳುವದು"*– ಈ ಪತ್ರಿಕೆಯಾದ್ಯಂತ ಇದರ

ಬರಹಗಾರನು ಹಳೆ ಒಡಂಬಡಿಕೆ ಆರಾಧನೆಯ ಶಾರೀರಿಕ ಕಾರ್ಯಗಳನ್ನು ಆತ್ಮೀಕ ವಾಸ್ತವಗಳ ಸಂಕೇತಗಳಾಗಿ ಸೂಚಿಸಿದ್ದಾನೆ. ಆತನು ಅದೇ ಕಾರ್ಯವನ್ನು ಇಲ್ಲಿಯೂ ಮಾಡಿದ್ದಾನೆ (ಆದರೂ ಕೆಲವು ಪಂಡಿತರು ಅವನು ಕ್ರೈಸ್ತೀಯ ದೀಕ್ಷಾಸ್ನಾನವನ್ನು ಸೂಚಿಸುತ್ತಾ ಇದ್ದಾನೆ ಎಂಬ ಆಲೋಚನೆಯುಳ್ಳವರಾಗಿದ್ದಾರೆ). ವಿಮೋ 30:17-21; ಯಾಜಕ 8:6; 16:4 ನೋಡಿರಿ. ಯಾಜಕರು ತಮ್ಮ ದೇಹಗಳನ್ನು ತಿಳಿನೀರಿನಿಂದ ತೊಳಕೊಳ್ಳುವದು ಈಗಿನ ವಿಶ್ವಾಸಿಗಳ ದೇಹಗಳನ್ನು ಶುದ್ಧೀಕರಿಸುವ ಕ್ರಿಯೆಯನ್ನು ಸೂಚಿಸುತ್ತದೆ. ಅವರು ಹೊಸ ಒಡಂಬಡಿಕೆಯ ಪ್ರಕಾರ ಯಾಜಕರಾಗಿದ್ದಾರೆ – ವ 19. ಅವರ ಹೃದಯಗಳು ಶುದ್ಧವಾಗಿರಬೇಕಾದ ಪ್ರಕಾರ, ಬಾಹ್ಯವಾಗಿಯೂ ಶುದ್ಧರಾಗಿರಬೇಕಾದದ್ದೇ ಅವರ ಸ್ವಭಾವವಾಗಿದೆ. ದೇವರು ಈಗ ವಿಶ್ವಾಸಿಗಳಿಗೆ ತೆರೆದಿರುವ ಹೊಸದಾದ ಜೀವವುಳ್ಳ ಮಾರ್ಗವನ್ನು ಹಳೆ ಒಡಂಬಡಿಕೆಯಲ್ಲಿ ತಕ್ಕ ಮಟ್ಟಿಗೆ ತೋರಿಸಲಾಗಿದೆ. ವಿಮೋಚನಕಾಂಡ 30 ನೇ ಅಧ್ಯಾಯದ ಕೊನೆಯಲ್ಲಿ ದೇವದರ್ಶನ ಗುಡಾರದ ಆತ್ಮೀಕ ಉಪಯೋಗದ ಕುರಿತಾಗಿರುವ ನೋಟ್ಸ್ ನೋಡಿರಿ. **23**

**10:23** *"ಆತನು ನಂಬಿಗಸ್ತನು"*– 6:16-18; ತೀತ 1:2; 1 ಯೋಹಾನ 5:9-10. ನಾವು ಸಂದೇಹ ಮತ್ತು ಅಪನಂಬಿಕೆಯಿಂದ ಆತನಿಗೆ ಅಗೌರವ ತರಬಾರದು – ಇವುಗಳು ಆತನು ತನ್ನ ವಾಗ್ದಾನಗಳಲ್ಲಿ ನಂಬಿಗಸ್ತನಲ್ಲ ಎಂದು ಸೂಚಿಸುತ್ತವೆ. **24**

**10:24** 19-23 ವಚನಗಳಲ್ಲಿ ಆತನ ವಿಶ್ವಾಸಿಗಳಿಗೆ ದೇವರೊಂದಿಗಿರುವ ಸಂಬಂಧದ ಬಗ್ಗೆ ಮಾತನಾಡಿದ್ದಾನೆ, ಈಗ ಅವರು ಪರಸ್ಪರ ಒಬ್ಬರಿಗೊಬ್ಬರು ಜವಾಬ್ದಾರಿಕೆಯುಳ್ಳವರಾಗಿದ್ದಾರೆ ಎಂದು ತೋರಿಸಿದ್ದಾನೆ. ಹಾಗೆಯೇ 3:13; ರೋಮಾ 14:19; 15:2; 1 ಕೊರಿಂಥ 9:24; ಕೊಲೊ 3:16 ನೋಡಿರಿ.

*"ಪ್ರೇರೇಪಿಸೋಣ"*– ಯೇಸು ಕ್ರಿಸ್ತನನ್ನು ಹೆಚ್ಚಾಗಿ ಪ್ರೀತಿಸಲು ಮತ್ತು ಉತ್ತಮವಾಗಿ ಆತನ ಸೇವೆ ಮಾಡಲು ಇತರರನ್ನು ಪ್ರೋತ್ಸಾಹಪಡಿಸುತ್ತಾ ನಾವು ಸಾಗುವವರಾಗಿರಬೇಕು. **25**

**10:25** ಇತರೆ ವಿಶ್ವಾಸಿಗಳು ಸೇರಿಬಂದಿರುವ ಕೂಟಗಳಿಗೆ ಹೋಗುವದನ್ನು ಯಾವ ವಿಶ್ವಾಸಿಯೂ ತಪ್ಪಿಸಬಾರದು. ಪ್ರತಿಯೊಬ್ಬರಿಗೂ ಅನ್ಯೋನ್ಯತೆಯ ಅವಶ್ಯಕತೆಯಿದೆ ಮತ್ತು ಪ್ರತಿಯೊಬ್ಬರೂ ಇತರರನ್ನು ಅವರ ನಂಬಿಕೆಯ ಜೀವಿತದಲ್ಲಿ ಪ್ರೋತ್ಸಾಹಪಡಿಸಬೇಕು. "ಕರ್ತನ ದಿನವು ಸಮೀಪಿಸುತ್ತಾ ಬರುತ್ತದೆ" ಎಂಬದನ್ನು ನೋಡುವದು ಎಂದರೆ ಏನು? ಯೆರೂಸಲೇಮ್ ಹಾಗೂ ದೇವಾಲಯದ ನಾಶನ ಎಂಬದು ಬಹುಶಃ ಬರಹಗಾರನ ಮಾತುಗಳಾಗಿರಬಹುದು (ಮತ್ತಾಯ 24:1-3; ಲೂಕ 19:41-44; 21:20-24). ಆತನು ಈ ಪತ್ರಿಕೆಯನ್ನು ಬರೆಯುವಾಗ ಆ ಸಮಯವು ಬಹಳ ಹತ್ತಿರವಾಗಿತ್ತು. ಅಥವಾ ಆತನು ಯೇಸು ಕ್ರಿಸ್ತನ ಬರೋಣದ ದಿನದ ಬಗ್ಗೆ ತಿಳಿಸುತ್ತಾ ಇರಬಹುದು (9:28; ಮತ್ತಾಯ 24:33).

ಅಥವಾ ಎರಡನ್ನೂ ಆತನು ಈ ವಾಕ್ಯದಲ್ಲಿ ಸೇರಿಸಬಹುದು. ಮೊದಲನೆಯ ಶತಮಾನದ ಕ್ರೈಸ್ತರು ಈ ಎರಡೂ ಕಾರ್ಯಗಳು ಹೆಚ್ಚು ಕಡಿಮೆ ಒಂದೂ ಸಮಯದಲ್ಲಿ ನಡೆಯಲಿ ಎಂದು ಬಯಸುತ್ತಾ ಇದ್ದರು. **26-31**

**10:26-31** ಇದು ಮತಭ್ರಷ್ಟತೆಗೆ ವಿರುದ್ಧವಾಗಿ ಕೊಡಲಾಗಿರುವ ನಾಲ್ಕನೆಯ ಎಚ್ಚರಿಕೆಯಾಗಿದೆ. 2:1-4 ರ ನೋಟ್ ನೋಡಿರಿ. ದೇವರು ಯೇಸು ಕ್ರಿಸ್ತನ ಮೂಲಕ ಮತ್ತು ಯೇಸು ಕ್ರಿಸ್ತನ ಬಗ್ಗೆ ಪ್ರಕಟಿಸಿರುವ ಮಹಿಮಾರ್ಥ ಬೆಳಕಿಗೆ ವಿರುದ್ಧವಾಗಿ ಬೇಕೆಂದೇ ಪಾಪ ಮಾಡುವದರ ಬಗ್ಗೆ ಇದು ಮಾತನಾಡುತ್ತದೆ. **26**

**10:26** *"ಬೇಕೆಂದು ಪಾಪ ಮಾಡಿದರೆ"*– ಇದು ಒಂದಲ್ಲ ಅಧಿಕ ಪಾಪದ ಕಾರ್ಯಗಳ, ಹೃದಯ ಹಾಗೂ ಜೀವನದ ಸ್ಥಿತಿಯನ್ನು ವಿವರಿಸುತ್ತದೆ. ಯಾರು ಬೇಕಾದರೂ ಈ ಸ್ಥಿತಿಗೆ ಬರುವರು ಎಂಬದಾಗಿ ತನಗೆ ಅನ್ನಿಸುತ್ತದೆ ಎಂದು ಬರಹಗಾರನು ಹೇಳುತ್ತಾ ಇಲ್ಲ. ಆತನು "ಆದರೆ" ಎಂಬ ಪದವನ್ನು ಉಪಯೋಗಿಸಿದ್ದಾನೆ (6:6 ರೊಂದಿಗೆ ಹೋಲಿಸಿ ನೋಡಿರಿ). 39 ನೇ ವಚನದಲ್ಲಿ ಆತನು ಹೇಳುವದೇನೆಂದರೆ ತನ್ನ ಈ ಪತ್ರಿಕೆಯನ್ನು ಓದುವ ವಿಶ್ವಾಸಿಗಳಲ್ಲಿ ಒಬ್ಬನೂ ಈ ಅಪರಾಧಕ್ಕೆ ಒಳಗಾಗುವದಿಲ್ಲ (1 ಯೋಹಾನ 3:9-10 ರೊಂದಿಗೆ ಹೋಲಿಸಿ ನೋಡಿರಿ). ಬರಹಗಾರನು ಒಂದು ರೀತಿಯ ಪಾಪವನ್ನು ಸೂಚಿಸುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ. ವಿಶ್ವಾಸಿಗಳು ಪಾಪ ಮಾಡುತ್ತಾರೆ ಮತ್ತು ಕ್ಷಮಾಪಣೆಯನ್ನು ಪಡೆದುಕೊಳ್ಳುತ್ತಾರೆ (1 ಯೋಹಾನ 1:9; 2:1; 5:16). ಆದರೆ ಕ್ಷಮಾಪಣೆಯೇ ಸಿಗದೆ ಇರುವಂಥ ಒಂದು ಪಾಪವಿದೆ. ಆ ಪಾಪ ಏನೆಂದರೆ ಯೇಸು ಕ್ರಿಸ್ತನನ್ನು ಮತ್ತು ಆತನ ಯಜ್ಞವನ್ನು ತಿರಸ್ಕರಿಸುವದು, ಆತನ ರಕ್ತದ ಮೂಲಕ ಸ್ಥಾಪನೆಯಾಗಿರುವ ಹೊಸ ಒಡಂಬಡಿಕೆಯನ್ನು ನಿರಾಕರಿಸುವದು ಮತ್ತು ದೇವರಾತ್ಮನ ಸ್ವರಕ್ಕೆ ವಿಧೇಯರಾಗಲು ಒಪ್ಪದೇ ಇರುವದು (ವ 29). ವಿಶ್ವಾಸಿಗಳು ಒಂದುವೇಳೆ ಪಾಪ ಮಾಡಿದರೆ ಅವರು ಶಾಶ್ವತವಾಗಿ ನಾಶವಾಗುತ್ತಾರೆ ಎಂದು ಕಲಿಸುವವರೂ ಇದ್ದಾರೆ. ಇದು ಹೊಸ ಒಡಂಬಡಿಕೆಯ ಬೋಧನೆಯಲ್ಲ – ಮತ್ತಾಯ 6:12; 1 ಯೋಹಾನ 1:9; 2:1.

*"ಸತ್ಯದ ಪರಿಜ್ಞಾನ"*– ಆತನು "ಪಶ್ಚಾತ್ತಾಪ ಮತ್ತು ನಂಬಿಕೆಯ ನಂತರ" ಎಂದು ಹೇಳಿಲ್ಲ. ನಮಗೆ ಸತ್ಯದ ಪರಿಜ್ಞಾನ ಇರಬಹುದು ಆದರೂ ಪಶ್ಚಾತ್ತಾಪಪಟ್ಟು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡಲು ನಿರಾಕರಿಸಬಹುದು. ಬರಹಗಾರನು ಈ ವಾಕ್ಯದಲ್ಲಿ ಹೇಳುತ್ತಿರುವ ಪಾಪವು ಬಹುಶಃ ಸತತವಾದ ನಿರಾಕರಣೆಯಾಗಿರಬಹುದು. ಅದನ್ನು ಮುಂದಿನ ಪದಗಳಲ್ಲಿ ಸೂಚಿಸಲಾಗಿದೆ.

*"ಇನ್ನಾವ ಯಜ್ಞವೂ ಇರುವದಿಲ್ಲ"*– ಒಂದುವೇಳೆ ಯಾವನಾದರೂ ಯೇಸು ಕ್ರಿಸ್ತನ ಯಜ್ಞವನ್ನು ತಿರಸ್ಕರಿಸಿದರೆ ಅವನು ತನ್ನನ್ನು ರಕ್ಷಣೆಯ ಒಂದೇ ಮಾರ್ಗದಿಂದ ದೂರ ಮಾಡಿಕೊಂಡಿದ್ದಾನೆ ಎಂಬದಾಗಿದೆ. ಮತ್ತು ಒಂದುವೇಳೆ ಅಂಥ ವ್ಯಕ್ತಿ ತಾನು ಮತ್ತೆ ಹಳೆ

ಒಡಂಬಡಿಕೆಯ ಯಜ್ಞಗಳನ್ನು (ಅಥವಾ ಅಂಥ ಬೇರೆ ಯಜ್ಞಗಳನ್ನು) ಸಮರ್ಪಿಸಬಹುದು ಮತ್ತು ದೇವರು ಅದನ್ನು ಅಂಗೀಕರಿಸಿಕೊಳ್ಳುತ್ತಾನೆ ಎಂಬದಾಗಿ ಯೋಚಿಸಿದರೆ ಅವನು ಘೋರವಾದ ತಪ್ಪು ಮಾಡುವವನಾಗಿದ್ದಾನೆ. **27**

**10:27** *"ನ್ಯಾಯತೀರ್ಪು"*– 9:27; ಅಪೊ 17:31; ಪ್ರಕ 20:11-15.

*"ತೀಕ್ಷ್ಣ"*– 12:29; 2 ಥೆಸ 1:7; ಮತ್ತಾಯ 3:10; ಮಾರ್ಕ 9:42-48; ಲೂಕ 16:24; ಪ್ರಕ 20:14.

*"ವಿರೋಧಿಗಳು"*– ಆತನ ಮಾತಿನ ಅರ್ಥ ದೇವರ ವಿರೋಧಿಗಳು. ದೇವರು ಯೇಸು ಕ್ರಿಸ್ತನು ಮತ್ತು ಆತನ ಒಂದೇ ಯಜ್ಞದ ಕುರಿತು ಪ್ರಕಟಿಸಿರುವ ಸತ್ಯವನ್ನು ಬೇಕೆಂದೇ ಯಾರಾದರೂ ನಿರಾಕರಿಸಿದರೆ ಅವರು ದೇವರ ವಿರೋಧಿಗಳಾಗಿದ್ದಾರೆ. ಯೋಹಾನ 7:7; 15:18; ರೋಮಾ 5:10; ಯಾಕೋಬ 4:4 ರೊಂದಿಗೆ ಹೋಲಿಸಿ ನೋಡಿರಿ. **28**

**10:28** 2:2; ಧರ್ಮೋ 17:6-7 ನೋಡಿರಿ. ಧರ್ಮಶಾಸ್ತ್ರದ ಪ್ರಕಾರ ಪಾಪ ಮಾಡಿದವರಿಗೆ ಮರಣದಂಡನೆ ವಿಧಿಸಿದ ಬಗ್ಗೆ ತಿಳಿಯಲು ವಿಮೋ 21:36 ನೋಡಿರಿ. ಸಂಖ್ಯಾ 15:30-35 ರಲ್ಲಿ ಕೊಡಲಾಗಿರುವ ಉದಾಹರಣೆಯನ್ನೂ ನೋಡಿರಿ. **29**

**10:29** ಬರಹಗಾರನು ವ 26 ರಲ್ಲಿ ಈ ಪಾಪದ ಬಗ್ಗೆ ಮಾತನಾಡಿದ್ದಾನೆ. 6:6; ಮತ್ತಾಯ 12:31; 1 ಯೋಹಾನ 5:16-17 ರೊಂದಿಗೆ ಹೋಲಿಸಿ ನೋಡಿರಿ. ಹಳೆ ಒಡಂಬಡಿಕೆ ವಿರುದ್ಧವಾಗಿ ಬೇಕೆಂದೇ ಪಾಪ ಮಾಡುವವರಿಗೆ ಮರಣ ದಂಡನೆ ವಿಧಿಸಲಾಗುತ್ತಾ ಇತ್ತು. ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತಲೂ ಉತ್ತಮವಾದದ್ದಾಗಿದೆ, ಆದ್ದರಿಂದ ಹಳೆಯದಕ್ಕೆ ವಿರುದ್ಧವಾಗಿ ಮಾಡಿದ ಪಾಪಕ್ಕಿಂತಲೂ ಇದಕ್ಕೆ ವಿರುದ್ಧವಾಗಿ ಮಾಡುವ ಪಾಪವು ಘೋರವಾಗಿದೆ. ದೇವರು ನಮಗೆ ಬೆಳಕು ಮತ್ತು ಸತ್ಯವನ್ನು ಹೆಚ್ಚಾಗಿ ತಿಳಿಸಿದಷ್ಟೂ, ಅದಕ್ಕೆ ವಿಧೇಯರಾಗುವ ನಮ್ಮ ಜವಾಬ್ದಾರಿಕೆಯೂ ಹೆಚ್ಚಾಗಿರುತ್ತದೆ, ಮತ್ತು ನಾವು ವಿಧೇಯರಾಗದೆ ಹೋದರೆ ಶಿಕ್ಷೆಯೂ ಹೆಚ್ಚಾಗಿರುತ್ತದೆ. ಈ ವಚನದಲ್ಲಿ ವಿವರಿಸಲಾಗಿರುವ ಪಾಪವನ್ನು ನಿಜವಾದ ವಿಶ್ವಾಸಿಯು ಮಾಡುತ್ತಾನೆಯೇ, ಅಂದರೆ ಯೇಸು ಕ್ರಿಸ್ತನು ಕಾಲ ಕೆಳಗೆ ಹಾಕಿ ತುಳಿದು, ಆತನ ರಕ್ತವನ್ನು ಅಶುದ್ಧವೆಂದು ಎಣಿಸುತ್ತಾನೆಯೇ, ಇತ್ಯಾದಿ? ಹೊಸ ಒಡಂಬಡಿಕೆಯಲ್ಲಿ ವಿಶ್ವಾಸಿಗಳ ಬಗ್ಗೆ ಕೊಡಲಾಗಿರುವ ಇತರೆ ಬೋಧನೆಗಳ ಬೆಳಕಿನಲ್ಲಿ ನೋಡುವದಾದರೆ ಇದು ಅಸಾಧ್ಯವೆನಿಸುತ್ತದೆ. ಯೋಹಾನ 5:24; ರೋಮಾ 8:1,28-33; ಫಿಲಿಪ್ಪಿ 1:6; 1 ಯೋಹಾನ 3:9-10. ಆದರೆ "ತನ್ನನ್ನು ಪವಿತ್ರ ಮಾಡಿದಂಥ ರಕ್ತ" ಎಂಬ ಪದಗಳ ಅರ್ಥವೇನು? ಒಬ್ಬ ವ್ಯಕ್ತಿ ಯೇಸು ಕ್ರಿಸ್ತನ ರಕ್ತದಿಂದ ಪವಿತ್ರನಾದರೂ, ವಿಶ್ವಾಸಿಯಾಗದಿರಲು, ರಕ್ಷಣೆ ಹೊಂದದೆ ಇರಲು ಸಾಧ್ಯವೇ? ಪ್ರವಿತ್ರೀಕರಣ ಪದ ಅವಶ್ಯವಾಗಿ ರಕ್ಷಣೆ ಹಾಗೂ ನಂಬಿಕೆಯನ್ನು ಸೂಚಿಸುವದಿಲ್ಲ. ಮೂಲ ಅರ್ಥ "ಬೇರ್ಪಡಿಸುವದು" (ಯಾಜಕ 20:7; ಯೋಹಾನ 17:17-19 ರ ನೋಟ್ಸ್ ನೋಡಿರಿ).

ಅವಿಶ್ವಾಸಿಗಳು ಪವಿತ್ರರಾಗುವ ಸಂದರ್ಭದ ಬಗ್ಗೆ ತಿಳಿಯಲು 1 ಕೊರಿಂಥ 7:4 ನೋಡಿರಿ. ಈ ಪತ್ರಿಕೆಯಲ್ಲಿ ಹೊಸ ಮತ್ತು ಹಳೆ ಒಡಂಬಡಿಕೆಗಳ ನಡುವೆ ಹೋಲಿಕೆ ಮಾಡಲಾಗಿದೆ ಹಾಗೂ ಇದನ್ನು ಇಬ್ರಿಯರಿಗೆ ಬರೆಯಲಾಗಿದೆ ಎಂಬದು ನಿಮ್ಮ ಮನಸ್ಸಿನಲ್ಲಿರಲಿ. ಇಸ್ರಾಯೇಲ್ಯರು ಜನಾಂಗವಾಗಿ ಪವಿತ್ರರಾಗಿದ್ದರು ಎಂಬದು ಅವರಿಗೆ ತಿಳಿದಿತ್ತು (9:18-20; ವಿಮೋ 24:7-8; 31:13; ಯಾಜಕ 21:8). ಆದರೆ ಇದರ ಅರ್ಥ ಇಸ್ರಾಯೇಲಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿ ನಿಜವಾದ ವಿಶ್ವಾಸಿಯಾಗಿದ್ದಾನೆ ಅಥವಾ ದೇವರ ಕೋಪದಿಂದ ತಪ್ಪಿಸಿಕೊಂಡಿದ್ದಾನೆ ಎಂಬದಲ್ಲ – 3:10-11,19 ನೋಡಿರಿ. ಹೊಸ ಒಡಂಬಡಿಕೆಯ ಅಡಿಪಾಯವೇ ಯೇಸು ಕ್ರಿಸ್ತನ ರಕ್ತವಾಗಿದೆ – 9:15. 13:12 ನೋಡಿರಿ, ಯೇಸು ಕ್ರಿಸ್ತನು ತನ್ನ ಸ್ವಂತ ರಕ್ತದಿಂದ "ಜನರನ್ನು" ಶುದ್ಧೀಕರಿಸಲು ಶ್ರಮೆ ಅನುಭವಿಸಿದನು ಎಂದು ಹೇಳುತ್ತದೆ. ಇಸ್ರಾಯೇಲ್ ಮನೆಯೊಂದಿಗೆ ಹೊಸ ಒಡಂಬಡಿಕೆಯನ್ನು ಮಾಡಲಾಯಿತು – 8:8. ದೇವರ ವಿಶೇಷವಾದ ಉದ್ದೇಶಗಳಿಗನುಸಾರ (ರೋಮಾ 9:1-5; 11:11,25-29) ಇಸ್ರಾಯೇಲ್ ಜನಾಂಗವು ಈಗಲೂ ಇತರೆ ಜನಾಂಗಗಳಿಂದ ಬೇರ್ಪಡಿಸಲ್ಪಟ್ಟಿದೆ (ಶುದ್ಧೀಕರಿಸಲ್ಪಟ್ಟಿದೆ). ಆದರೆ ಅವರಲ್ಲಿ ಬಹುತೇಕರು ಯೇಸು ಕ್ರಿಸ್ತನನ್ನು ನಿರಾಕರಿಸಿದ್ದಾರೆ ಮತ್ತು ನಂಬಿಕೆ ಹಾಗೂ ರಕ್ಷಣೆಯಿಲ್ಲದವರಾಗಿದ್ದಾರೆ. ಆದ್ದರಿಂದ ಭೂಮಿಯ ಮೇಲಿರುವ ಸಭೆ ಯೇಸು ಕ್ರಿಸ್ತನ ರಕ್ತದಿಂದ ಪವಿತ್ರವಾಗಿದೆ ಎಂದು ಹೇಳಲು ಆಗುವದಿಲ್ಲವೇ? ಹಾಗೆಯೇ ಸಾದೃಶ್ಯವಾಗಿರುವ ಸಭೆಯಲ್ಲಿ ಬಹುತೇಕರು ಅಪನಂಬಿಕೆಯುಳ್ಳವರು ಹಾಗೂ ರಕ್ಷಣೆಯೇ ಹೊಂದಿಲ್ಲ ಎಂಬದೂ ಸತ್ಯವಲ್ಲ ಅಲ್ಲವೇ? ಹಾಗೆಯೇ 1 ತಿಮೊ 2:6 ನೋಡಿರಿ, ಯೇಸು ಕ್ರಿಸ್ತನು ನಂಬುವವರೆಲ್ಲರಿಗಾಗಿ ತನ್ನನ್ನು "ಕ್ರಯವಾಗಿ" ಕೊಟ್ಟನು ಎಂದು ಅಲ್ಲಿ ಹೇಳಲಾಗಿದೆ. ಆತನು ತನ್ನನ್ನು, ತನ್ನ ಸ್ವಂತ ರಕ್ತವನ್ನು ಕ್ರಯವಾಗಿ ಕೊಟ್ಟನು – 1 ಪೇತ್ರ 1:18-19. **30**

**10:30** ಧರ್ಮೋ 32:35-36; ಕೀರ್ತನೆ 135:14. **31**

**10:31** ಜೀವಿಸುವ ದೇವರ ಕೈಗೆ ಸಿಕ್ಕಿಬೀಳುವದು ಭಯಂಕರವಾದದ್ದಾಗಿದೆ ಯಾಕಂದರೆ ದೇವರು ಪರಿಶುದ್ಧನು, ಪಾಪಗಳನ್ನು ದ್ವೇಷಿಸುವವನು ಮತ್ತು ಖಂಡಿತವಾಗಿಯೂ ಅಪನಂಬಿಕೆ ಮತ್ತು ಎದುರುಬೀಳುವಿಕೆಯನ್ನು ಶಿಕ್ಷಿಸುತ್ತಾನೆ. ನಾವು ದೇವರ ಸತ್ಯವನ್ನು ಅಂಗೀಕರಿಸಿಕೊಂಡರೆ ಮತ್ತು ಅದನ್ನು ಅನುಸರಿಸಿದರೆ, ಆತನು 19-25 ವಾಕ್ಯಗಳಲ್ಲಿ ಹೇಳಿರುವಂತೆ ಮಾಡಿದರೆ, ಇದರ ಬಗ್ಗೆ ಚಿಂತಿಸುವ ಅವಶ್ಯಕತೆಯಿಲ್ಲ. **32-39**

**10:32-39** ಆತನು 6:9-12 ರಲ್ಲಿ, ಸತ್ಯದಿಂದ ದೂರ ಸರಿಯುವದರ ಬಗ್ಗೆ ಎಚ್ಚರಿಕೆಯನ್ನು ಕೊಟ್ಟ ನಂತರ, ಇಲ್ಲಿಯೂ ಹಾಗೆಯೇ ಮಾಡಿದ್ದಾನೆ. ಅವರು ರಕ್ಷಣೆ ಹೊಂದಿದ್ದಾರೆ ವ 26-29 ರ ಪಾಪಗಳನ್ನು ಮಾಡುವವರಲ್ಲ ಎಂದು ಆತನು ನಂಬುತ್ತಾನೆ ಎಂಬದಾಗಿ ಅವರು ತಿಳಿದುಕೊಳ್ಳಬೇಕೆಂದು ಬಯಸುತ್ತಾನೆ. ಅವರು ಆತ್ಮವಿಶ್ವಾಸವುಳ್ಳವರಾಗಿರಬೇಕು ಮತ್ತು ತಮ್ಮ ಕ್ರಿಯೆಗಳ ಮೂಲಕ ನಂಬಿಕೆಯನ್ನು

ಸಾಬೀತುಪಡಿಸಬೇಕು ಎಂಬದಾಗಿ ಆತನು ಬಯಸುತ್ತಾನೆ. **32-34**

**10:32-34** ಶ್ರಮೆಗಳ ನಡುವೆ ಅವರ ದೃಢತೆ, ಯೇಸು ಕ್ರಿಸ್ತನ ಇತರೆ ಜನರ ಮೇಲೆ ಅವರಿಗಿರುವ ಪ್ರೀತಿ, ಯೇಸು ಕ್ರಿಸ್ತನ ನಿಮಿತ್ತ ಎಲ್ಲಾ ಕಾರ್ಯಗಳನ್ನು ಕಳೆದುಕೊಳ್ಳಲು ಯೋಚಿಸದ ಅವರ ಮನೋಭಾವನೆ – ಇವೆಲ್ಲವೂ ಅವರ ನಂಬಿಕೆ ಯಥಾರ್ಥವಾದದ್ದು ಎಂಬದಕ್ಕೆ ಬಲವಾದ ಪುರಾವೆಯಾಗಿದೆ. **32**

**10:32** *"ಹೋರಾಟ"*– ವ 26; ಅಪೊ 26:18; 2 ಕೊರಿಂಥ 4:6; 2 ತಿಮೊ 3:12. **34**

**10:34** *"ಕಡೇ ತನಕ ಉಳಿಯುವಂಥದ್ದು"*– 6:12; ಮತ್ತಾಯ 6:19-20; ರೋಮಾ 8:17; 1 ಪೇತ್ರ 1:4. ಯೇಸು ಕ್ರಿಸ್ತನಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಗೆ ನಿತ್ಯವಾದ ಸ್ವಾಸ್ಥ್ಯಗಳಿಗೆ, ಆದ್ದರಿಂದ ವಿಶ್ವಾಸಿಗಳು ಭೂಮಿಯ ಮೇಲಿರುವ ತಮ್ಮ ಆಸ್ತಿಗೆ ಏನಾಗುವದೋ ಎಂದು ಚಿಂತಿಸುವ ಅವಶ್ಯಕತೆಯಿಲ್ಲ ಅಥವಾ ತಮಗೇನಿದೆ ಏನಿಲ್ಲಾ ಎಂದು ಯೋಚಿಸುವ ಅವಶ್ಯಕತೆಯೂ ಇಲ್ಲ. **35**

**10:35** *"ಪ್ರತಿಫಲ"*– ಮತ್ತಾಯ 19:28-30; ಪ್ರಕ 22:12. **36**

**10:36** *"ತಾಳ್ಮೆ"*– 3:6,14; 6:11; ರೋಮಾ 3:3-5; 8:24-25; ಯಾಕೋಬ 1:2-4 ನೋಡಿರಿ. ಎಲ್ಲವನ್ನೂ ಸಹಿಸಿಕೊಳ್ಳುತ್ತಾ ಮುಂದೆ ಸಾಗುವದು ಮತ್ತು ಏನೇ ಆದರೂ ಯೇಸು ಕ್ರಿಸ್ತನಲ್ಲಿ ನಂಬಿಕೆಯುಳ್ಳವರಾಗಿ ಮುಂದೆ ಸಾಗುವದು – ಪ್ರತಿಯೊಬ್ಬ ವಿಶ್ವಾಸಿಯೂ ಈ ಕಾರ್ಯವನ್ನು ಮಾಡಬೇಕು. ವಿಶ್ವಾಸಿಗಳು ಹೀಗೆಯೇ ಇರುವರು ಎಂಬದು ಬರಹಗಾರನ ಭರವಸೆಯಾಗಿದೆ (ವ 39). ನಮಗೂ ಇದೇ ಆತ್ಮವಿಶ್ವಾಸ ಇರಬೇಕು. **37-38**

**10:37-38** ಹಬಕ್ಕೂಕ 2:3-4. ಹಾಗೆಯೇ ರೋಮಾ 1:17; ಗಲಾ 3:11 ನೋಡಿರಿ. ಮಾನವರು ದೇವರಲ್ಲಿ ನಂಬಿಕೆಯಿಡುವಾಗ ಆತನು ಅವರನ್ನು ನೀತಿವಂತರೆಂದು ಎಣಿಸುತ್ತಾನೆ – ರೋಮಾ 3:24-25,28; 4:24; 5:1. ನೀತಿವಂತರೆಂದು ಎಣಿಸಿದ ನಂತರ ಅವರು ತಮ್ಮ ನಂಬಿಕೆಯ ಜೀವಿತವನ್ನು ಪ್ರಾರಂಭಿಸುತ್ತಾರೆ ಅದು ಭೂಮಿಯ ಮೇಲೆ ಅವರ ಸಮಯವು ಮುಗಿಯುವ ತನಕ ಸಾಗುತ್ತದೆ (2 ಕೊರಿಂಥ 5:7). ಇಬ್ರಿಯ ಪತ್ರಿಕೆಯಲ್ಲಿ ನಂಬಿಕೆಯಿಂದ ಜೀವಿಸುವದು ಮತ್ತು ಕಡೇ ತನಕ ನಂಬಿಕೆಯಲ್ಲಿ ಮುಂದುವರೆಯುವದಕ್ಕೆ ಆದ್ಯತೆಯನ್ನು ಕೊಡಲಾಗಿದೆ. **38**

**10:38** *"ಅವನು ಹಿಂದೆಗೆದರೆ"*– 6:6. **39**

**10:39** *"ನಾವಾದರೋ"*– ಆತನ ಮಾತಿನ ಅರ್ಥ ಯೇಸು ಕ್ರಿಸ್ತನಲ್ಲಿರುವ ನಿಜವಾದ ವಿಶ್ವಾಸಿಗಳು (ತಾನೂ ಅವರಲ್ಲಿ ಒಬ್ಬನು ಎಂಬದು ಆತನಿಗೆ ತಿಳಿದಿತ್ತು, ಮತ್ತು ಅವರು ತಾವೂ ಆಗಿರುವದಾಗಿ ಹೆಚ್ಚಿನ ಪುರಾವೆಯನ್ನು ನೀಡಿದ್ದರು – ವ 32-34; 6:11). "ಒಂದುವೇಳೆ" ಅವನು "ಹಿಂದೆಗೆದರೆ", ದೇವರಿಗೆ ಮೆಚ್ಚಿಕೆಯಾಗುವದಿಲ್ಲ; ಅದರ ಅರ್ಥ ಮಾನವರ ನಾಶನವಾಗಿದೆ. ಆದರೆ ಪ್ರೇರಣೆಯುಳ್ಳ ಬರಹಗಾರನು ಹೇಳುವದೇನೆಂದರೆ ಅವನು

ಹಿಂಜಾರುವದಿಲ್ಲ. ನಿಜವಾದ ವಿಶ್ವಾಸಿಗಳು ಸಹ ಹಿಂಜರಿಯಬಹುದು, ವ 26; 2:3; 3:12; 6:6; 12:25 ರಲ್ಲಿ ಹೇಳಲಾಗಿರುವ ಪಾಪಗಳನ್ನು ಮಾಡಬಹುದು ಮತ್ತು ಶಾಶ್ವತವಾಗಿ ನಾಶವಾಗಬಹುದು ಎಂದು ಕೆಲವರು ಹೇಳುತ್ತಾರೆ. ಆದರೆ ಬರಹಗಾರನು ಅವರು ಹಿಂಜರಿಯುವದಿಲ್ಲ ಎಂದು ಸೂಚಿಸುತ್ತಾನೆ. ನಂಬಿಕೆಯು ಕೆಲವರ ಆಲೋಚನೆಗಿಂತಲೂ ಬಲವಾದದ್ದಾಗಿದೆ. ಅದು ಲೋಕಕ್ಕಿಂತಲೂ ಬಲವಾದದ್ದಾಗಿದೆ (1 ಯೋಹಾನ 5:4). ಅದು ಬೆಟ್ಟಗಳನ್ನು ಕದಲಿಸುತ್ತದೆ ಮತ್ತು ಅಸಾಧ್ಯವೆನಿಸುವ ಕಾರ್ಯಗಳನ್ನೂ ಸಾಧ್ಯವನ್ನಾಗಿಸುತ್ತದೆ (ಮತ್ತಾಯ 17:20; ರೋಮಾ 4:19-22). ನಾವು ಕಣ್ಣಿಗೆ ಕಾಣದವುಗಳನ್ನು ಕಾಣಲು ನಮ್ಮನ್ನು ಬಲಪಡಿಸುತ್ತದೆ (2 ಕೊರಿಂಥ 4:18). ಮಾನವರನ್ನು ರಕ್ಷಿಸಲು ಮತ್ತು ಅವರನ್ನು ಸುರಕ್ಷಿತವಾಗಿಡಲು ದೇವರು ಇದನ್ನು ಸಾಧನವನ್ನಾಗಿ ಉಪಯೋಗಿಸಿದ್ದಾನೆ (ಎಫೆ 2:8; 1 ಪೇತ್ರ 1:5) – ಆದ್ದರಿಂದ ಇದು ಆ ಕಾರ್ಯವನ್ನು ಮಾಡುವ ಅತ್ಯುತ್ತಮ ಸಾಧನವಾಗಿದೆ. ದೇವರು ಆಯ್ಕೆ ಮಾಡಿಕೊಂಡಿರುವ ಸಾಧನವು ಆತನ ಉದ್ದೇಶ ನೆರವೇರಿಸಲು ವಿಫಲವಾಗುತ್ತದೆಯೇ? ಅದು ಯೇಸು ಕ್ರಿಸ್ತನು ವಿಶ್ವಾಸಿಗಳಿಗಾಗಿ ಮಾಡಿರುವ ವಿಶೇಷ ಪ್ರಾರ್ಥನೆಯ ಸಾಧನವಾಗಿದೆ (ಲೂಕ 22:32). ಹಾಗಾದರೆ, ಅದು ವಿಫಲವಾಗುತ್ತದೆಯೇ? ಇಬ್ರಿಯರಿಗೆ ಈ ಪತ್ರಿಕೆಯನ್ನು ಬರೆದಿರುವ ಬರಹಗಾರನು ಅದು ವಿಫಲವಾಗುವದಿಲ್ಲ ಎಂದು ದೃಢವಾಗಿ ತನ್ನ ಭರವಸೆಯನ್ನು ವ್ಯಕ್ತಪಡಿಸಿದ್ದಾನೆ. ರೋಮಾ 5:9-10 ರ ನೋಟ್ಸ್ ಸಹ ನೋಡಿರಿ. ಯೇಸು ಕ್ರಿಸ್ತನಲ್ಲಿರುವ ನಿಜವಾದ ವಿಶ್ವಾಸಿಗಳು ದೇವರು ಅವರಿಗೆ ವಾಗ್ದಾನ ಮಾಡಿರುವ ಅಂತಿಮ ರಕ್ಷಣೆಯ ತನಕ ನಂಬುತ್ತಲೇ ಇರುವರು. ಮುಂದಿನ ಅಧ್ಯಾಯದಲ್ಲಿ ಆತನು ನಂಬಿಕೆಯ ಶಕ್ತಿಯ ಕುರಿತು ತಿಳಿಯಪಡಿಸಿದ್ದಾನೆ.

# 11[1]

**11:1** ಸತ್ಯವೇದದಲ್ಲಿ ಇದೊಂದು ಸ್ಥಳದಲ್ಲಿ ಮಾತ್ರವೇ ನಂಬಿಕೆಯನ್ನು ಮಾತುಗಳಲ್ಲಿ ವ್ಯಕ್ತಪಡಿಸಲಾಗಿದೆ (ಅನೇಕ ಸ್ಥಳಗಳಲ್ಲಿ ಕ್ರಿಯೆಗಳಲ್ಲಿ ಪ್ರಕಟಿಸುವ ಮೂಲಕ ಅದು ಏನೆಂದು ತೋರಿಸಲಾಗಿದೆ). ನಂಬಿಕೆಯು ಎರಡು ರಂಗಗಳ ಕಾರ್ಯಗಳನ್ನು ತೋರಿಸುತ್ತದೆ – ಭವಿಷ್ಯ (ನಮ್ಮ ನಿರೀಕ್ಷೆ), ಮತ್ತು ಕಾಣದೆ ಇರುವಂಥದ್ದು. ದೇವರು ಈ ಎರಡು ರಂಗಗಳ ವಿಷಯದಲ್ಲಿ ವಾಗ್ದಾನಗಳನ್ನು ಮಾಡಿದ್ದಾನೆ ಮತ್ತು ಪ್ರಕಟನೆಗಳನ್ನು ಕೊಟ್ಟಿದ್ದಾನೆ. ನಂಬಿಕೆಯು ಈ ವಾಗ್ದಾನಗಳನ್ನು ನಂಬುತ್ತದೆ ಮತ್ತು ಈ ಪ್ರಕಟನೆಗಳನ್ನು ಅತುಕೊಳ್ಳುತ್ತದೆ. ಇದರಿಂದ ಹೃದಯಕ್ಕೆ ಭರವಸೆ ದೊರೆಯುತ್ತದೆ. ನಂಬಿಕೆಯು ಕತ್ತಲೆಗೆ ನಡೆಸುವದಿಲ್ಲ; ಅದು ಬೆಳಕಿಗೆ ನಡೆಸುತ್ತದೆ. ಅದು ಇಚ್ಛೆಗನುಸಾರವಾದ ಆಲೋಚನೆಯಲ್ಲ; ಅದು ದೇವರ ವಾಕ್ಯದ ಬಲವಾದ ಪುರಾವೆಯ ಮೇಲೆ ಆಧಾರವಾಗಿದೆ. ನಿಜವಾದ ನಂಬಿಕೆಯು ದೇವರ ವಿಷಯದಲ್ಲಿ ಪ್ರತಿಯೊಬ್ಬರಿಗೂ ಇರುವ ಆಲೋಚನೆಯನ್ನು ನಂಬುವದಿಲ್ಲ ಅಥವಾ ದೇವರ

ಆಲೋಚನೆಯೆಂದು ಮಾನವರು ಅಂದುಕೊಳ್ಳುವದನ್ನೆಲ್ಲಾ ನಂಬುವದಿಲ್ಲ. ಅದು ಸತ್ಯವೇದದಲ್ಲಿ ಪ್ರಕಟಪಡಿಸಲಾಗಿರುವ ಸತ್ಯವನ್ನು ನಂಬುತ್ತದೆ.

*"ಭರವಸೆ"*– ಈ ಪದ "ವಿಷಯ" ಅಥವಾ "ಪ್ರಾಮುಖ್ಯ" ಅಥವಾ "ಸ್ವಭಾವ" ಅಥವಾ "ಆತ್ಮವಿಶ್ವಾಸ" ಎಂಬ ಅರ್ಥಗಳನ್ನು ಕೊಡುತ್ತದೆ ಆದರೆ ಇಲ್ಲಿ "ಭರವಸೆ" ಉತ್ತಮವೆನಿಸುತ್ತದೆ. ಗ್ರೀಕ್ ಪದವು ಎರಡು ಪದಗಳ ಮಿಶ್ರಣವಾಗಿದೆ, ಒಂದರ ಅರ್ಥ "ಪ್ರಕಾರ", ಮತ್ತೊಂದರ ಅರ್ಥ "ನಿಂತಿರುವದು". ಬೇರೆ ಮಾತುಗಳಲ್ಲಿ ಹೇಳುವದಾದರೆ, ನಂಬಿಕೆ ಎಂಬದು ಬೇರೊಂದರ ಪ್ರಕಾರ ಅಂದರೆ, ಅಡಿಪಾಯದ ಮೇಲೆ ನಿಂತಿರುವದಾಗಿದೆ. ನಂಬಿಕೆಯು ಬೇರೊಂದರ ಪ್ರಕಾರ ನಿಂತಿರುವದಾಗಿದೆ ಎಂದರೆ ಏನು? ಇಬ್ರಿಯ ಪತ್ರಿಕೆಯಲ್ಲಿ ಯೇಸು ಕ್ರಿಸ್ತನಲ್ಲಿ ನಿರೀಕ್ಷಿಸುವ ಎಲ್ಲವುಗಳಾಗಿವೆ. ನಂಬಿಕೆಯು ನಮ್ಮ ನಿರೀಕ್ಷೆಗಳಿಗೆ ನಿಜವಾದ ಅಡಿಪಾಯವಾಗಿದೆ. ನಂಬಿಕೆಯಿಲ್ಲದೆ ನಿರೀಕ್ಷೆಯಿಡುವ ಅಧಿಕಾರ ಮತ್ತು ನಿರೀಕ್ಷಿಸಲು ಒಳ್ಳೆಯ ಕಾರಣ ಎರಡೂ ಇಲ್ಲ. ಮತ್ತು ನಂಬಿಕೆಯು ಅಡಿಪಾಯವಾಗಿದೆ, ಗುಣಮಟ್ಟವಾಗಿದೆ, ನಾವು ಎಲ್ಲಾ ರೀತಿಯ ಕಷ್ಟಗಳು, ಸಮಸ್ಯೆಗಳು ಅಥವಾ ನಮ್ಮ ನಿರೀಕ್ಷೆಯನ್ನು ಹಾಳುಮಾಡುವ ಪ್ರತಿಯೊಂದು ರೀತಿಯ ಶ್ರಮೆಗಳಲ್ಲಿ ದೃಢವಾಗಿ ನಿಲ್ಲಲು ನಮಗೆ ಸಹಾಯ ಮಾಡುತ್ತದೆ. ರೋಮಾ 5:1-4 ರೊಂದಿಗೆ ಹೋಲಿಸಿ ನೋಡಿರಿ.

*"ನಿಜವೆಂದು ತಿಳುಕೊಳ್ಳುವದು"*– ಅಥವಾ "ಪುರಾವೆ" ಅಥವಾ "ನಿರೂಪಿಸುವದು" ಅಥವಾ "ಬೆಳಕಿಗೆ ತರುವದು" – ಗ್ರೀಕ್ ಪದದ ಅರ್ಥ ಇವುಗಳಲ್ಲಿ ಯಾವುದಾದರು ಒಂದಾಗಿರಬಹುದು. ಕ್ರಿಯಾಪದವನ್ನು ಯೋಹಾನ 3:20; 16:8; 1 ಕೊರಿಂಥ 14:24; ಎಫೆ 5:11,13. ಸತ್ಯವೇದದಲ್ಲಿ ಹೇಳಲಾಗಿರುವ ಕಣ್ಣಿಗೆ ಕಾಣದ ವಿಷಯಗಳು ನಿಜವಾಗಿ ಅಸ್ತಿತ್ವದಲ್ಲಿದೆಂದು ತಿಳಿದುಕೊಳ್ಳುವದೇ ನಂಬಿಕೆಯಾಗಿದೆ. ಒಂದು ರೀತಿಯಲ್ಲಿ ಅದು ಅವರನ್ನು ಬೆಳಕಿಗೆ ನಡೆಸುತ್ತದೆ, ಕಣ್ಣಿಗೆ ಕಾಣದವುಗಳನ್ನು "ಕಾಣಲು" ಬಲಪಡಿಸುತ್ತದೆ. ವ 27; 2 ಕೊರಿಂಥ 4:18 ರೊಂದಿಗೆ ಹೋಲಿಸಿ ನೋಡಿರಿ. **2**

**11:2** *"ಪೂರ್ವಿಕರು"*– ಅಂದರೆ ಪ್ರಾಚೀನ ಕಾಲದಲ್ಲಿ ಜೀವಿಸಿದ ಜನರು. ದೇವರು ಅವರನ್ನು ಅವರ ನಂಬಿಕೆಗಾಗಿ ಶ್ಲಾಘಿಸಿದನು. ದೇವರು ಕೊಟ್ಟ ಶ್ಲಾಘನೆ ಏನೆಂದರೆ: ಇಡೀ ಮಾನವ ಕುಲದಲ್ಲಿಯೇ ಅವರು ಮಾತ್ರವೇ ಸರಿಯಾದ ಮಾರ್ಗದಲ್ಲಿದ್ದರು, ಒಬ್ಬನೇ ನಿಜ ದೇವರನ್ನು ನಂಬಿದರು, ದೇವರ ಎದುರಿನಲ್ಲಿ ನೀತಿವಂತರಾಗಿದ್ದರು. ಈ ಅಧ್ಯಾಯದಲ್ಲಿ ನಮಗೂ ಆ ಶ್ಲಾಘನೆಯಲ್ಲಿ ಒಂದು ಭಾಗವಿದೆ ಎಂದು ನಾವು ತಿಳಿಯಬಹುದು. ದೇವರ ದೃಷ್ಟಿಕೊನದಲ್ಲಿ ಮಾನವ ಕುಲದ ಚರಿತ್ರೆಯು ಆತನಲ್ಲಿ ನಂಬಿಕೆಯಿಟ್ಟವರ ಚರಿತ್ರೆಯಾಗಿದೆ. ನಂಬಿಕೆ ಮತ್ತು ಅದು ಏನನ್ನು ನೆರವೇರಿಸಿದೆ ಎಂಬದು ನಿಜವಾಗಿಯೂ ಪ್ರಾಮುಖ್ಯವಾಗಿದೆ, ಯಾಕಂದರೆ ಅದುವೇ ಶಾಶ್ವತವಾಗಿ ಇರುವಂಥದ್ದಾಗಿದೆ; ಉಳಿದವುಗಳೆಲ್ಲಾ ಗತಿಸಿ ಹೋಗುತ್ತವೆ (1 ಯೋಹಾನ 2:17). **3**

**11:3** ನಂಬಿಕೆಯು ತಿಳುವಳಿಕೆ ಅಥವಾ ಕಾರಣಗಳಿಗೆ ವಿರುದ್ಧವಲ್ಲ ಎಂಬದನ್ನು ಗಮನಿಸಿರಿ – ನಂಬಿಕೆಯು ತಿಳುವಳಿಕೆಯನ್ನು ಕೊಡುತ್ತದೆ. ಅದು ಬೆಳಕನ್ನು ಹೊರಪಡಿಸುವ ಕಣ್ಣು. ವಿಶ್ವಾಸಿಗಳಿಗೆ ಈ ಜಗತ್ತು ಹೇಗೆ ಅಸ್ತಿತ್ವಕ್ಕೆ ಬಂತು ಎಂಬದು ಗೊತ್ತು ಯಾಕಂದರೆ ದೇವರು ಅದನ್ನು ಪ್ರಕಟಿಸಿದ್ದಾನೆ. ಅವರು ಅವಿಶ್ವಾಸಿಗಳ ಹಾಗೆ ಅದರ ಬಗ್ಗೆ ಚಿಂತಿಸುವ ಅವಶ್ಯಕತೆಯಿಲ್ಲ. ದೇವರ ಬಾಯಿ ಮಾತಿನಿಂದ ಸೃಷ್ಟಿಯು ಪ್ರಾರಂಭವಾಯಿತು (ಆದಿ 1:1,3,6,9; ಕೀರ್ತನೆ 33:6; ಯೆಶಾಯ 40:26; 42:5; ಯೋಹಾನ 1:3; ಕೊಲೊ 1:16). **4**

**11:4** ಈಗ ಆತನು ನಂಬಿಕೆಯುಳ್ಳವರಾಗಿದ್ದ ಪೂರ್ವಿಕರ ಬಗ್ಗೆ ಮಾತನಾಡಲು ಪ್ರಾರಂಭಿಸುತ್ತಾ ಇದ್ದಾನೆ. ಅವರಲ್ಲಿ ಎಲ್ಲರೂ ಪ್ರಸಿದ್ಧರು ಅಥವಾ ವಿಶೇಷತೆಯುಳ್ಳ ಜನರಾಗಿರಲಿಲ್ಲ (ಹೇಬೆಲನು ಕುರುಬನಾಗಿದ್ದನು, ಯಾಕೋಬನು ಮತ್ತು ಸಂಸೋಸನು ಅನೇಕ ತಪ್ಪುಗಳನ್ನು ಮಾಡಿದರು, ರಾಹಬಳು ವ್ಯಭಿಚಾರಿಯಾಗಿದ್ದಳು, ಇತ್ಯಾದಿ). ಆದರೆ ಅವರೆಲ್ಲರಲ್ಲಿಯೂ ಒಂದು ಸಾಮಾನ್ಯ ಸಂಗತಿಯಿತ್ತು – ಅವರು ದೇವರನ್ನು ನಂಬಿದ್ದರು ಮತ್ತು ಆತನಲ್ಲಿ ಪೂರ್ಣ ಭರವಸೆಯಿಟ್ಟಿದ್ದರು, ಈ ವಿಷಯದಲ್ಲಿ ಅವರು ನಮ್ಮೆಲ್ಲರಿಗೂ ಮಾದರಿಯಾಗಿದ್ದಾರೆ. ಹಳೆ ಒಡಂಬಡಿಕೆಯ ವಿಶ್ವಾಸಿಗಳೆಲ್ಲರ ಹೆಸರುಗಳನ್ನು ಇಲ್ಲಿ ಕೊಡಲಾಗಿಲ್ಲ. ಬರಹಗಾರನು ನಂಬಿಕೆಯ ವಿವಿಧ ವಿಷಯಗಳನ್ನು, ವಿವಿಧ ಗುಣಗಳನ್ನು ನಿದರ್ಶನವಾಗಿ ತಿಳಿಸಲು ಬೇರೆ ಬೇರೆ ಜನರನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಇಲ್ಲಿ ನಂಬಿಕೆಯ ಮೂರು ಫಲಿತಾಂಶಗಳನ್ನು ನಾವು ನೋಡಬಹುದಾಗಿದೆ. ಮೊದಲನೆಯದು, ನಂಬಿಕೆಯಿರುವವರು ಬೇರೇನೋ ಕಾರ್ಯ ಮಾಡುವಂತೆ ಬಲಪಡಿಸಿತು. ನಿಜವಾದ ನಂಬಿಕೆ ಜೀವವಿಲ್ಲದ್ದಲ್ಲ, ತಟಸ್ಥವಾದದ್ದಲ್ಲ. ಅದು ಪ್ರಬಲ ಸಾಧನವಾಗಿದ್ದು ಯಾವಾಗಲೂ ಕ್ರಿಯೆಯನ್ನು ಉಂಟು ಮಾಡುತ್ತದೆ (10:39; ಯಾಕೋಬ 2:14-26 ರ ನೋಟ್ಸ್ ನೋಡಿರಿ). ಎರಡನೆಯದು, ನಂಬಿಕೆಯು ದೇವರಿಂದ ಆಶೀರ್ವಾದವನ್ನು ಹೊಂದಿಕೊಳ್ಳುತ್ತದೆ. ದೇವರು ಈ ಪಟ್ಟಿಯಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಯನ್ನು ಒಂದಲ್ಲಾ ಒಂದು ಅದ್ಭುತ ರೀತಿಯಲ್ಲಿ ಆಶೀರ್ವದಿಸಿದನು. ಮೂರನೆಯದು, ನಂಬಿಕೆ ಯಾರಲ್ಲಿ ಇತ್ತೋ ಅವರೆಲ್ಲರೂ ಎಲ್ಲಾ ಕಾರ್ಯಗಳನ್ನು ಸಹಿಸಿಕೊಳ್ಳುವಂತೆ ಮತ್ತು ಕಡೆಯ ತನಕ ಸಹಿಸಿಕೊಂಡು ಮುಂದೆ ಸಾಗುವಂತೆ ನಂಬಿಕೆಯೇ ಅವರನ್ನು ಬಲಪಡಿಸಿತು. ಆದ್ದರಿಂದ ನಿಜವಾದ ನಂಬಿಕೆಯು ಕಾರ್ಯಮಾಡುತ್ತದೆ, ಸಂಪಾದಿಸಿಕೊಳ್ಳುತ್ತದೆ ಮತ್ತು ತಾಳಿಕೊಳ್ಳುತ್ತದೆ. ಈ ಮೂರು ಕಾರ್ಯಗಳನ್ನು ಮಾಡದೆ ಇರುವ ನಂಬಿಕೆಯು ನಿಜವಾಗಿರುವ ಸತ್ಯವೇದಾನುಸಾರವಾದ ನಂಬಿಕೆಯಲ್ಲ.

*"ಹೇಬೆಲನು"*– ಆದಿ 4:1-10 ನೋಡಿರಿ. ಇವನಲ್ಲಿ ನಾವು ನಂಬಿಕೆ ಮತ್ತು ಯಜ್ಞದ ನಡುವೆಯಿರುವ ಸಂಬಂಧವನ್ನು ನೋಡುತ್ತೇವೆ. ಪಾಪಿಗಳಾಗಿರುವ ನಾವೆಲ್ಲರೂ ಇಲ್ಲಿಂದಲೇ ಪ್ರಾರಂಭಿಸಬೇಕು, ಈ ಪತ್ರಿಕೆಯ ಪ್ರಮುಖ ಬೋಧನೆಗಳಲ್ಲಿ ಇದೂ ಒಂದಾಗಿದೆ. ಹೇಬೆಲನ

ನಂಬಿಕೆಯು ಪ್ರಕಟನೆಯ ಮೇಲೆ ಆಧಾರವಾಗಿತ್ತು (ನಿಜವಾದ ನಂಬಿಕೆಯು ಯಾವಾಗಲೂ ಹೀಗೆಯೇ ಇರುತ್ತದೆ), ಮತ್ತು ನಂಬಿಕೆಯಿಂದ ದೇವರು ನೇಮಿಸಿರುವ ಯಜ್ಞವನ್ನು ಅವನು ಆರಿಸಿಕೊಂಡನು. ಕಾಯಿನನು ಈ ಕಾರ್ಯ ಮಾಡಲು ನಿರಾಕರಿಸಿದನು. ಆದ್ದರಿಂದ ಹೇಬೆಲನು ಕಾಯಿಯನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ಸಮರ್ಪಿಸಿದನು. "ನಂಬಿಕೆಯಿಂದಲೇ . . . ನೀತಿವಂತನೆಂದು . . ." ಆದಿ 15:6; ರೋಮಾ 1:17; 3:22; 5:1 ರೊಂದಿಗೆ ಹೋಲಿಸಿ ನೋಡಿರಿ. ಹೇಬೆಲನು ತನ್ನ ಮಾದರಿಯ ಮೂಲಕ ಇಂದಿಗೂ ಮಾತನಾಡುತ್ತಿದ್ದಾನೆ ಮತ್ತು "ದೇವರ ಪ್ರಕಟನೆಯನ್ನು ನಂಬಿರಿ ಹಾಗೂ ದೇವರು ನೇಮಿಸಿರುವ ಯಜ್ಞವನ್ನು ಆಯ್ಕೆ ಮಾಡಿಕೊಳ್ಳಿರಿ" ಎಂದು ಹೇಳುತ್ತಾ ಇದ್ದಾನೆ. ಈಗ ಯೇಸು ಕ್ರಿಸ್ತನೇ ಆ ಯಜ್ಞವಾಗಿದ್ದಾನೆ – 7:27; 9:12,26,28; 10:10,14. **5**

**11:5** ಹನೋಕನು ನಂಬಿಕೆ ಮತ್ತು ದೇವರೊಂದಿಗೆ ಇರಬೇಕಾದ ಅನ್ಯೋನ್ಯತೆಯ ನಡುವೆಯಿರುವ ಸಂಬಂಧಕ್ಕೆ ನಿದರ್ಶನವಾಗಿದ್ದಾನೆ. ಆದಿ 5:21-24 ನೋಡಿರಿ. ನಂಬಿಕೆಯಿಲ್ಲದೆ ದೇವರನ್ನು ತಿಳಿದುಕೊಳ್ಳುವ ಅಥವಾ ದೇವರೊಂದಿಗೆ ಜೀವಿಸುವ ಸಾಧ್ಯತೆಯೇ ಇಲ್ಲ. ಅಪನಂಬಿಕೆಯು ದೇವರನ್ನು ಸುಳ್ಳುಗಾರನೆಂದು ಕರೆಯುತ್ತದೆ (1 ಯೋಹಾನ 5:10), ಹೀಗಿರುವಗ ಇಬ್ಬರ ನಡುವೆ ವಿಶ್ವಾಸವಿಲ್ಲದೆ ಹೋದರೆ ಮತ್ತು ಒಬ್ಬನ ಹೃದಯದಲ್ಲಿ ಮತ್ತೊಬ್ಬನ ಬಗ್ಗೆ ಕೆಟ್ಟ ಆಲೋಚನೆ ಇರುವದಾದರೆ ಅನ್ಯೋನ್ಯತೆ ಇರಲು ಹೇಗೆ ಸಾಧ್ಯ? ಹನೋಕನು ನಂಬಿಕೆ ಮತ್ತು ಅನೈತಿಕತೆ, ಯೇಸು ಕ್ರಿಸ್ತನು ಹಿಂದಿರುಗಿ ಬರುವಾಗ ವಿಶ್ವಾಸಿಗಳಲ್ಲುಂಟಾಗುವ ವ್ಯತ್ಯಾಸದ ನಡುವೆಯಿರುವ ಸಂಬಂಧಕ್ಕೆ ನಿದರ್ಶನವಾಗಿದ್ದಾನೆ (1 ಕೊರಿಂಥ 15:51-53; 1 ಥೆಸ 4:15-17). **6**

**11:6** *"ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ"*– ಕೇವಲ ಕಷ್ಟ ಮಾತ್ರವಲ್ಲ. ಅಪನಂಬಿಕೆಯು ದೇವರು ಕಡೆಗಣಿಸುವಂಥ ಸಣ್ಣ ವಿಷಯವಾಗಲಿ, ದುರಾದೃಷ್ಟವಾಗಲಿ ಅಲ್ಲ. ಅದು ಮಾರಣಾಂತಿಕ ಪಾಪವಾಗಿದ್ದು ದೇವರು ಮತ್ತು ಮಾನವನ ನಡುವೆಯಿರಬೇಕಾದ ಸಂಬಂಧವನ್ನು ಬಾಧಿಸುತ್ತದೆ. ಇದು ಮಾನವನು ದೇವರು ಮತ್ತು ಬೆಳಕನ್ನು ಬಯಸದೆ ಪಾಪ ಮತು ಕತ್ತಲೆಯನ್ನು ಬಯಸುವ ಆಂತರಿಕವಾದ ಆಯ್ಕೆಯಾಗಿದೆ. ಇದು ದೇವರ ಪ್ರಕಟನೆ ಹಾಗೂ ದೇವರ ಮಗನನ್ನು ನಿರಾಕರಿಸುವದಾಗಿದೆ. ಮತ್ತು ದೇವರು ಇದಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸುತ್ತಾನೆ – 3:11-12,19; ಯೋಹಾನ 3:36; ಪ್ರಕ 21:8. ನಂಬಿಕೆಯು ಎರಡು ಕಾರ್ಯಗಳನ್ನು ಸತ್ಯವೆಂದು ಅಂಗೀಕರಿಸಿಕೊಳ್ಳುತ್ತದೆ, ಅವು ಯಾವುವೆಂದರೆ, ಸತ್ಯವೇದದಲ್ಲಿ ಪ್ರಕಟಿಸಲಾಗಿರುವ ದೇವರು ಅಸ್ತಿತ್ವದಲ್ಲಿದ್ದಾನೆ ಮತ್ತು ಆತನು ತನ್ನನ್ನು ಆಸಕ್ತಿಯಿಂದ ಹುಡುಕುವವರಿಗೆ ಪ್ರತಿಫಲ ಕೊಡುತ್ತಾನೆ. ಇಲ್ಲಿ ನಾವು 1ನೇ ವಚನದ ಎರಡು ರಂಗಗಳನ್ನು ನೋಡುತ್ತೇವೆ – ಕಣ್ಣಿಗೆ ಕಾಣದವನು (ದೇವರು) ಮತ್ತು ಭವಿಷ್ಯ (ಪ್ರತಿಫಲಗಳು). ನಂಬಿಕೆ ಈ ಎರಡು ಸತ್ಯಗಳನ್ನು ಅಂಗೀಕರಿಸಿಕೊಳ್ಳುತ್ತದೆ

ಯಾಕಂದರೆ ದೇವರೇ ಇವುಗಳನ್ನು ಪ್ರಕಟಿಸಿದ್ದಾನೆ – 1:1-3; ಯೆಶಾಯ 44:6; 45:5,18,21; ಯೋಹಾನ 1:18; ಮತ್ತಾಯ 7:7-8.

*"ಆಸಕ್ತಿಯಿಂದ ಹುಡುಕುವವನು"*– ಧರ್ಮೋ 4:29; ಯೆರೆ 29:13 ನೋಡಿರಿ. **7**

**11:7** ನೋಹ ನಂಬಿಕೆ ಮತ್ತು ಪಾಪಕ್ಕೆ ವಿರುದ್ಧವಾಗಿರುವ ದೇವರ ಕೋಪದಿಂದ ತಪ್ಪಿಸಿಕೊಳ್ಳುವದರ ನಡುವೆಯಿರುವ ಸಂಪರ್ಕಕ್ಕೆ ನಿದರ್ಶನವಾಗಿದ್ದಾನೆ. ಆದಿ 6:9—7:5 ನೋಡಿರಿ. ಈಗ ಯೇಸು ಕ್ರಿಸ್ತನು ಜನರಿಗೆ ಆಶ್ರಯವಾಗಿದ್ದಾನೆ. ಅವರು ಆತನ ಸಂರಕ್ಷಣೆಯಲ್ಲಿ ಸುರಕ್ಷಿತರಾಗಿದ್ದಾರೆ.

*"ಭಯ"*– ಆದಿ 20:11; ಕೀರ್ತನೆ 34:7-11; 111:10; ಜ್ಞಾನೋ 1:7 ರ ನೋಟ್ಸ್ ನೋಡಿರಿ.

*"ಮನೆಯವರು"*– ಅಪೊ 16:31 ರೊಂದಿಗೆ ಹೋಲಿಸಿ ನೋಡಿರಿ.

*"ಲೋಕದವರು ದಂಡನೆಗೆ ಪಾತ್ರರು"*– ಬೆಳಕು ಕತ್ತಲೆಯನ್ನು ದಂಡಿಸುವ ಹಾಗೆ ನಂಬಿಕೆಯ ಉದಾಹರಣೆಯು ಅಪನಂಬಿಕೆಯನ್ನು ದಂಡಿಸುತ್ತದೆ (ಯೋಹಾನ 3:18-21; 15:22-24 ರೊಂದಿಗೆ ಹೋಲಿಸಿ ನೋಡಿರಿ).

*"ನಂಬಿಕೆಯಿಂದ ನೀತಿ"*– ರೋಮಾ 1:17; 3:24-25. **8-9**

**11:8-9** ಈ ಅಧ್ಯಾಯವು ಅಬ್ರಹಾಮನಿಗೆ ಎಲ್ಲರಿಗಿಂತ ಹೆಚ್ಚಿನ ಸ್ಥಳವನ್ನು ನೀಡಿದೆ. ಹಳೆ ಒಡಂಬಡಿಕೆಯಲ್ಲಿ ಆತನು ನಂಬಿಕೆಗೆ ಉತ್ತಮವಾದ ಉದಾಹರಣೆಯಾಗಿದೆ ಮತ್ತು ಆತನನ್ನು "ನಂಬುವವರೆಲ್ಲರಿಗೆ ಮೂಲಪಿತೃ" ಎಂದು ಕರೆಯಲಾಗಿದೆ – ರೋಮಾ 4:11,16. ಆತನ ಜೀವಿತವು ನಂಬಿಕೆಯ ಹಲವಾರು ವಿವಿಧ ಕಾರ್ಯಗಳಿಗೆ ನಿದರ್ಶನವಾಗಿದೆ. **8**

**11:8** ಆದಿ 12:1-5; ಅಪೊ 7:2-4 ನೋಡಿರಿ. ಇಲ್ಲಿ ನಂಬಿಕೆ ಮತ್ತು ದೇವರಿಗೆ ವಿಧೇಯರಾಗುವದರ ನಡುವೆಯಿರುವ ಸಂಬಂಧವನ್ನು ನೋಡಬಹುದಾಗಿದೆ. ನಂಬಿಕೆಯಿಲ್ಲದೆ ನಿಜವಾದ ವಿಧೇಯತೆಯಿರುವದಿಲ್ಲ ಮತ್ತು ಒಂದುವೇಳೆ ವಿಧೇಯತೆಯಿಲ್ಲವೆಂದರೆ ನಂಬಿಕೆಯಿಲ್ಲ ಎಂಬದಕ್ಕೆ ಅದುವೇ ಪುರಾವೆಯಾಗಿದೆ. 5:9; ಯೋಹಾನ 3:36; ಅಪೊ 5:32; ರೋಮಾ 1:5; 2 ಥೆಸ 2:8 ಮತ್ತು ಅಪೊ 22:10 ರ ನೋಟ್ ನೋಡಿರಿ. ದೇವರು ಅಬ್ರಹಾಮನನ್ನು ಕರೆದು ನಿನಗಿರುವದೆಲ್ಲವನ್ನು ಬಿಟ್ಟು ನೀನು ನೋಡಿರದ ಸ್ಥಳಕ್ಕೆ ಹೋಗು ಎಂದು ಹೇಳಿದನು. ಆದ್ದರಿಂದ ಆತನು ನಂಬಿಕೆ ಮತ್ತು ಒಬ್ಬನು ತನ್ನ ಹಿಂದಿನ ಜೀವಿತದಿಂದ ಬೇರ್ಪಡುವದು, ನಂಬಿಕೆ ಮತ್ತು ಎಲ್ಲವನ್ನೂ ತ್ಯಜಿಸುವದರ ನಡುವೆಯಿರುವ ಸಂಪರ್ಕವನ್ನು ನಿದರ್ಶನವಾಗಿ ತೋರಿಸುತ್ತಾ ಇದ್ದಾನೆ (ಲೂಕ 14:33; 18:28-30; 2 ಕೊರಿಂಥ 6:17-18 ರೊಂದಿಗೆ ಹೋಲಿಸಿ ನೋಡಿರಿ). ಆದರೆ ತಾನು ಎಲ್ಲಿಗೆ ಹೋಗುತ್ತಿದ್ದೇನೆ ಎಂಬದೇ ಗೊತ್ತಿಲ್ಲದೆ ಹೋಗುವದು ಅಥವಾ ಏನು ಮಾಡಬೇಕೆಂಬದೇ ಗೊತ್ತಿಲ್ಲದೆ ಹೋಗುವದು ಮೂರ್ಖತನವಲ್ಲವೇ? ಮಾನವನ ದೃಷ್ಟಿಗೆ ಮೂರ್ಖತನವಾಗಿದೆ, ಆದರೆ ನಂಬಿಕೆ ಮತ್ತು

ಅದರ ಅಪಾರವಾದ ತಿಳುವಳಿಕೆಗೆ ಪೂರ್ಣತನವಲ್ಲ. **9-10**

**11:9-10** ಆದಿ 12:6-9. ಅಬ್ರಹಾಮನು ಗುಡಾರಗಳಲ್ಲಿ ಜೀವಿಸುವದು ಮತ್ತು ಸತತವಾಗಿ ಸಾಗುತ್ತಲೇ ಇರುವದು ನಂಬಿಕೆ ಮತ್ತು ಯಾತ್ರೆಯ ನಡುವೆಯಿರುವ ಸಂಬಂಧದ ನಿದರ್ಶನವಾಗಿದೆ. ವ 13-16 ನೋಡಿರಿ. ಅಬ್ರಹಾಮನು ತನ್ನ ದೃಷ್ಟಿಯನ್ನು ನಿತ್ಯವಾದ ಲೋಕದ ಮೇಲಿಟ್ಟಿದ್ದನು, ಆದ್ದರಿಂದ ಅವನು ಇಲ್ಲಿ ನೆಲೆಯನ್ನು ಕಂಡುಕೊಳ್ಳಲಿಲ್ಲ. 1 ಪೇತ್ರ 2:11 ರೊಂದಿಗೆ ಹೋಲಿಸಿ ನೋಡಿರಿ. ಈಗ ವಿಶ್ವಾಸಿಗಳಿಗೂ ಇದೇ ರೀತಿಯ ಮನಸ್ಥಿತಿಯಿರಬೇಕು. ಅವರ ಸ್ಥಿರವಾದ ಸ್ವಾಸ್ಥ್ಯ ಮತ್ತು ಅವರ ಪೌರತ್ವವು ಪರಲೋಕದಲ್ಲಿದೆ (10:34; ಮತ್ತಾಯ 6:19-20; ಫಿಲಿಪ್ಪಿ 3:20). ನಂಬಿಕೆಯಿಂದ ಅವರು ಇದನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಈ ಲೋಕವು ತಮ್ಮ ಮನೆಯಲ್ಲ ಎಂಬ ಸತ್ಯದಿಂದ ಸಂತೋಷಿಸುತ್ತಾರೆ, ಯಾಕಂದರೆ ಅವರು ನಾವು ಪರಲೋಕದಲ್ಲಿರುವ ದೇವರ ಪಟ್ಟಣಕ್ಕೆ ಹೋಗುತ್ತಾ ಇದ್ದೇವೆ ಎಂಬದನ್ನು ಅರಿತಿದ್ದಾರೆ (12:22; ಗಲಾ 4:26; ಪ್ರಕ 21:2). **11-12**

**11:11-12** ಆದಿ 15:4-6; 21:1-5; ರೋಮಾ 4:18-21. ಅಬ್ರಹಾಮನು ತನ್ನ ಹೆಂಡತಿಯಾದ ಸಾರಳ ಮೂಲಕವೇ ತನಗೆ ಮಕ್ಕಳಾಗುವವು ಎಂಬ ದೇವರ ವಾಗ್ದಾನನ್ನು ನಂಬಿದನು ಎಂಬದು ದೃಢವಾದ ವಿಷಯವಾಗಿದೆ. ಆದರೆ ಆದಿಕಾಂಡ ಪುಸ್ತಕದಲ್ಲಿ ದೇವರು ಅಬ್ರಹಾಮನಿಗೆ ಮತ್ತು ಸಾರಳಿಗೆ ಮಗುವನ್ನು ಕೊಡುವೆನು ಎಂದು ಹೇಳಿದಾಗ, ಸಾರಳ ನಂಬಿಕೆಯ ಬಗ್ಗೆ ಏನೂ ಹೇಳಲಾಗಿಲ್ಲ. ಆದಿ 18:10-15 ನೋಡಿರಿ. ಇಬ್ರಿಯ ಪತ್ರಿಕೆಯ ಬರಹಗಾರನ ಪ್ರಕಾರ ನಂತರದಲ್ಲಿ ಆಕೆಯೂ ದೇವರ ವಾಗ್ದಾನವನ್ನು ನಂಬಿದಳು. ಅವರು ಒಟ್ಟಾಗಿ ನಂಬಿಕೆ ಮತ್ತು ಪ್ರತಿಫಲ ಅಥವಾ ನಂಬಿಕೆ ಮತ್ತು ಅಸಾಧ್ಯ ಕಾರ್ಯಗಳ ನಡುವೆಯಿರುವ ಸಂಬಂಧವನ್ನು ನಿದರ್ಶನವಾಗಿ ತಿಳಿಸಿದ್ದಾನೆ (ಮತ್ತಾಯ 17:20). **13**

**11:13** ಇವರೆಲ್ಲರೂ ಕಡೆಯ ತನಕ ಸಾಗುವ ನಂಬಿಕೆಗೆ ನಿದರ್ಶನವಾಗಿದ್ದಾರೆ (10:39).

"*ಪರದೇಶದವರೂ, ಪ್ರವಾಸಿಗರೂ*"– ಅಬ್ರಹಾಮನು ಮಾತ್ರವಲ್ಲ (ವ 9,10), ಆದರೆ ಬರಹಗಾರನು ತಿಳಿಸಿರುವ ಎಲ್ಲಾ ವಿಶ್ವಾಸಿಗಳು ಇದೇ ತಿಳುವಳಿಕೆ, ಇದೇ ಹೊರನೋಟವನ್ನು ಹೊಂದಿದ್ದರು. ನಿರೀಕ್ಷಿಸಿದ, ಕಣ್ಣಿಗೆ ಕಾಣದ ಸಂಗತಿಗಳು (ವ 1) ಅವರ ಆಲೋಚನೆಗಳು, ಬಯಕೆಗಳು ಮತ್ತು ನಂಬಿಕೆಗಳ ಪ್ರಮುಖ ವಿಷಯಗಳಾಗಿದ್ದವು. **17-19**

**11:17-19** ಆದಿ 22:1-19. ಈ ಘಟನೆಯಲ್ಲಿ ನಂಬಿಕೆಯ ಹಲವು ವಿಷಯಗಳನ್ನು ನೋಡಬಹುದಾಗಿದೆ – ಕಷ್ಟದ ಸಮಯದಲ್ಲಿ ನಂಬಿಕೆ ಮತ್ತು ಜಯ, ಗೊಂದಲದ ಸಮಯದಲ್ಲಿ ವಿಧೇಯತೆಯ ನಂಬಿಕೆ, ನಂಬಿಕೆ ಮತ್ತು ಪುನರುತ್ಥಾನ, ನಂಬಿಕೆ ಮತ್ತು ಬದಲಾಗದ ದೇವರ ವಾಗ್ದಾನಗಳು. ಆದಿ 21:12 ರಲ್ಲಿ ದೇವರ ವಾಗ್ದಾನದ ನೆರವೇರುವಿಕೆಗೆ, ಇಸಾಕನು ಜೀವಿಸಬೇಕಾಗಿತ್ತು. ಒಂದುವೇಳೆ ತಾನು ಇಸಾಕನನ್ನು ಯಜ್ಞವಾಗಿ ಅರ್ಪಿಸಿದರೆ,

ದೇವರು ಖಂಡಿತವಾಗಿಯೂ ಅವನನ್ನು ಮರಣದಿಂದ ಎಬ್ಬಿಸುವನು; ಪರಿಸ್ಥಿತಿಗಳು ಹೇಗೇ ಇದ್ದರೂ ದೇವರು ತನ್ನ ವಾಗ್ದಾನವನ್ನು ನೆರವೇರಿಸುವನು ಎಂಬದಾಗಿ ಅಬ್ರಹಾಮನು ನಂಬಿದನು. ನಿಜವಾದ ನಂಬಿಕೆಯು ಪರಿಸ್ಥಿತಿಗಳು ಹಾಗೂ ಸಂದರ್ಭಗಳು ವಿಪರೀತವಾಗಿದ್ದರೂ ಮುಂದೆ ಸಾಗುತ್ತದೆ. ದೇವರು ಸುಳ್ಳು ಹೇಳುವದಿಲ್ಲ ಎಂಬದನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತದೆ. **20**

**11:20** ಆದಿ 47:27-31. ಇದು ನಂಬಿಕೆ ಮತ್ತು ನಿರೀಕ್ಷಿಸುವ ವಿಷಯಗಳ ನಡುವೆಯಿರುವ ಸಂಪರ್ಕವನ್ನು ನಿದರ್ಶನವಾಗಿ ತಿಳಿಸುತ್ತದೆ (ವ 1). **22**

**11:22** ಆದಿ 49:1-28; 50:24-25. ದೇವರು ಭವಿಷ್ಯದ ಕುರಿತು ವಾಗ್ದಾನ ಮಾಡಿರುವ ಸಂಗತಿಗಳು ದೃಢವಾಗಿ ಮರಣದ ತನಕ ಯಾಕೋಬ ಮತ್ತು ಯೋಸೇಫನು ನಂಬಿಕೆಗೆ ನಿದರ್ಶನವಾಗಿದ್ದಾರೆ (ವ 13). ಯಾಕೋಬನ ನಂಬಿಕೆಯು ಅವನ ಜೀವಿತದ ಕಡೆಯ ಸಮಯದಲ್ಲಿ ಉಜ್ವಲವಾಗಿತ್ತು. ನಿಜವಾದ ನಂಬಿಕೆಯು ಸಾಯುವ ಸಮಯದಲ್ಲಿಯೂ "ಹಿಂಜರಿಯುವದಿಲ್ಲ" (10:39). ಕಷ್ಟಗಳ ನಿಮಿತ್ತ ಈ ಪತ್ರಿಕೆಯನ್ನು ಪಡೆದ ಇಬ್ರಿಯರು ತಮ್ಮ ನಂಬಿಕೆಯನ್ನು ತ್ಯಜಿಸುವ ಶೋಧನೆಗೆ ಒಳಗಾದರೇ? ಅವರು ತಮ್ಮ ಪೂರ್ವಿಕರನ್ನು ನೋಡಲಿ. ಅವರು ಯಾವ ರೀತಿಯ ಕಷ್ಟಗಳು ಮತ್ತು ಸಮಸ್ಯೆಗಳನ್ನು ಎದುರಿಸಿದರು! ಆದರೆ ಪ್ರತಿಯೊಬ್ಬರೂ ಕಡೆಯ ತನಕ ನಂಬಿಗಸ್ತರಾಗಿದ್ದರು. ನಿಜವಾದ ನಂಬಿಕೆಯು ಈ ಕಾರ್ಯ ಮಾಡಲು ಬಲಪಡಿಸುತ್ತದೆ. **23**

**11:23** ವಿಮೋ 1:22; 2:2; ಅಪೊ 7:20. ಅವರು ದೇವರನ್ನು ನಂಬಿದರು ಆದ್ದರಿಂದ ಅರಸನ ಆಜ್ಞೆಗಳಿಗೆ ಹೆದರಲಿಲ್ಲ. ಬಲವಾದ ನಂಬಿಕೆಯು ಭಯವನ್ನು ಜಯಿಸುತ್ತದೆ – 13:6; ಮತ್ತಾಯ 8:26; ಮಾರ್ಕ 4:40; ಅಪೊ 4:13. ಅವರು ಮಕ್ಕಳ ಪರವಾಗಿ ಕಾರ್ಯಮಾಡುವ ನಂಬಿಕೆಗೆ ನಿದರ್ಶನವಾಗಿದ್ದಾರೆ. ವ 7; ಅಪೊ 17:31 ರೊಂದಿಗೆ ಹೋಲಿಸಿ ನೋಡಿರಿ. **24-26**

**11:24-26** ವಿಮೋ 2:11-13; ಅಪೊ 7:23-26. ಮೋಶೆ ತನ್ನ ನಲವತ್ತನೇ ವಯಸ್ಸಿನಲ್ಲಿ ಐಗುಪ್ತ ಮತ್ತು ದೇವರ ನಡುವೆ ಆಯ್ಕೆ ಮಾಡಿಕೊಂಡನು. ಐಗುಪ್ತವನ್ನು ಆಯ್ಕೆ ಮಾಡಿಕೊಳ್ಳುವದೆಂದರೆ ಲೋಕದ ಅಧಿಕಾರ, ಐಶ್ವರ್ಯ ಮತ್ತು ಆಸೆಗಳನ್ನು ಸಂಪಾದಿಸಿಕೊಳ್ಳುವದಾಗಿದೆ. ದೇವರನ್ನು ಆಯ್ಕೆಮಾಡಿಕೊಳ್ಳುವದೆಂದರೆ ಇರುವದೆಲ್ಲವನ್ನು ತ್ಯಜಿಸುವದು ಮತ್ತು ಆಗ ಐಗುಪ್ತದಲ್ಲಿ ದಾಸರಾಗಿದ್ದ ದೇವ ಜನರೊಂದಿಗೆ ಶ್ರಮೆಗಳನ್ನನುಭವಿಸುವದು. ಅವನಿಗೆ ನಂಬಿಕೆಯಿತ್ತು ಆದ್ದರಿಂದಲೇ ಅವನು ಈ ಕಾರ್ಯವನ್ನು ಮಾಡಿದನು. ನಂಬಿಕೆಯು ಮಾನವರು ಕಾರ್ಯಗಳಿಗೆ ಸರಿಯಾದ ಮೌಲ್ಯವನ್ನು ಕೊಡುವಂತೆ ಬಲಪಡಿಸುತ್ತದೆ. ಭವಿಷ್ಯದಲ್ಲಿರುವ ಕಣ್ಣಿಗೆ ಕಾಣದ ದೇವರ ಕಾರ್ಯಗಳು ಲೋಕವು ಕೊಡುವವುಗಳಿಗಿಂತ ಉತ್ತಮವಾದದ್ದು ಎಂಬ ಭರವಸೆಯನ್ನು ನಂಬಿಕೆಯು ಕೊಡುತ್ತದೆ. ಫಿಲಿಪ್ಪಿ 3:7-8 ರೊಂದಿಗೆ ಹೋಲಿಸಿ ನೋಡಿರಿ. ಮೋಶೆ ನಂಬಿಕೆ ಮತ್ತು

ಸನ್ಯಾಸದ ನಡುವೆಯಿರುವ ಸಂಪರ್ಕವನ್ನು ನಿದರ್ಶನವಾಗಿ ತಿಳಿಸಿದ್ದಾನೆ. 10:34; ಲೂಕ 14:33; 18:28-30; ಮತ್ತಾಯ 4:18-22; 10:37-39; 16:24-28 ನೋಡಿರಿ. ನಿಜವಾದ ನಂಬಿಕೆಯು ಯಾವಾಗಲೂ ಯೇಸು ಕ್ರಿಸ್ತನಿಗಾಗಿ ಎಲ್ಲವನ್ನು ತ್ಯಜಿಸಲು ಸಿದ್ಧವಾಗಿರುತ್ತದೆ. ಆದರೆ ಯಾರಿಗೆ ಇಷ್ಟವಿಲ್ಲದಿರುವದೋ, ಅವರು ತಮಗೆ ನಂಬಿಕೆಯಿದೆ ಎಂದು ಹೇಳಿದರೂ, ಅವರಿಗೆ ನಂಬಿಕೆಯಿದೆ ಎಂದು ಇತರರಿಗೆ ಅನ್ನಿಸಿದರೂ, ಅವರು ಖಂಡಿತವಾಗಿಯೂ ಸತ್ಯವೇದಾನುಸಾರವಾದ ನಂಬಿಕೆಯಿಲ್ಲದವರಾಗಿದ್ದಾರೆ. ನಂತರ ಮೋಶೆ ಮತ್ತು ಪೌಲನ ಮಾರ್ಗವನ್ನು ತ್ಯಜಿಸುವ, ಕ್ರಿಸ್ತನಿಗಾಗಿ ಶ್ರಮೆಯನ್ನನುಭವಿಸಲು ನಿರಾಕರಿಸುವ ಮತ್ತು ಈ ಲೋಕದ ಆಸ್ತಿ, ಐಶ್ವರ್ಯ ಹಾಗೂ ಆಸೆಭೋಗಗಳ ಹಿಂದೆ ಹೋಗುವ ಕ್ರೈಸ್ತರ ಬಗ್ಗೆ ಏನು ಹೇಳೋಣ? ಅವರು ಈ ಮಹಾಸತ್ಯವನ್ನು ಕಲಿತುಕೊಳ್ಳಬೇಕಾಗಿರುವ ದೊಡ್ಡ ಅಗತ್ಯವಿದೆ – ಯೇಸು ಕ್ರಿಸ್ತನ ನಿಮಿತ್ತ ಅವಮಾನಕ್ಕೆ ಗುರಿಯಾಗುವದು ಸಹ ಈ ಲೋಕದ ಆಸ್ತಿ ಐಶ್ವರ್ಯಕ್ಕಿಂತ ದೊಡ್ಡದಾಗಿದೆ (ವ 26; 13:13; ಅಪೊ 5:41; 1 ಪೇತ್ರ 4:12-16). **27**

**11:27** “*ಭಯಪಡದೆ*”– ವಿಮೋ 2:14 ಹೇಳುವದೇನೆಂದರೆ, 11,12 ವಚನದಲ್ಲಿ ತಾನು ಮಾಡಿರುವ ಕ್ರಿಯೆಗಳು ಎಲ್ಲರಿಗೂ ಗೊತ್ತಾದವೆಂದು ತಿಳಿದು ಮೋಶೆ ಹೆದರಿಕೊಂಡನು. ಅದರ ನಿಮಿತ್ತ ತನ್ನವರಾದ ಇಸ್ರಾಯೇಲ್ ಜನರಿಗೆ ಮತ್ತಷ್ಟು ತೊಂದರೆಯಾಗಬಹುದೆಂದು ಅವನು ನೆನೆಸಿರಬಹುದು. ಖಂಡಿತವಾಗಿಯೂ ಅವನು ಅವರ ನಿಮಿತ್ತ ಹೆದರಿಕೊಂಡನೇ ಹೊರತು ತನ್ನ ನಿಮಿತ್ತ ಹೆದರಿಕೊಳ್ಳಲಿಲ್ಲ. ಅವನು “ನಂಬಿಕೆಯಿಂದ” ಐಗುಪ್ತ ದೇಶವನ್ನು ಬಿಟ್ಟು ಓಡಿಹೋದನೇ ಹೊರತು ಭಯದಿಂದ ಅಲ್ಲ. ನಿಜವಾದ ನಂಬಿಕೆಯು ದೇವರ ಮಾತುಗಳ ಮೇಲೆ ಆಧಾರವಾಗಿರುತ್ತದೆ. ಮೋಶೆ ಐಗುಪ್ತ ದೇಶದಿಂದ ಓಡಿ ಹೋಗಲು ಕಾರಣ, ದೇವರು ಅವನಿಗೆ ಹೋಗುವಂತೆ ಹೇಳುತ್ತಾ ಇದ್ದನು. ಅವನು ನಂಬಿಕೆಯಿಂದ ಉಳಿದನು (10:39), ಮತ್ತು ಅವನು ಅದೃಶ್ಯನಾಗಿರುವಾತನನ್ನು ಕಂಡನು (ವ 1; 2 ಕೊರಿಂಥ 4:18). ನಂಬಿಕೆಯು ಮಾನವರಿಗೆ ಆತ್ಮೀಕ ದೃಷ್ಟಿಯನ್ನು ಕೊಡುತ್ತದೆ. **28**

**11:28** ವಿಮೋ 12:1-30 ನೋಡಿರಿ. ಇಲ್ಲಿ ನಂಬಿಕೆ ಮತ್ತು ದೇವರ ನ್ಯಾಯತೀರ್ಪಿನಿಂದ ಬಿಡುಗಡೆಯನ್ನು ನಾವು ನೋಡಬಹುದು. ವ 7; 9:27-28; 1 ಕೊರಿಂಥ 5:7 ರೊಂದಿಗೆ ಹೋಲಿಸಿ ನೋಡಿರಿ. **29**

**11:29** ವಿಮೋ 14:15-31 ನೋಡಿರಿ. ಇಲ್ಲಿ ನಂಬಿಕೆ ಮತ್ತು ವೈರಿಗಳಿಂದ ಬಿಡುಗಡೆಯನ್ನು ನೋಡಬಹುದು. **30**

**11:30** ಯೆಹೋ 6:12-20 ನೋಡಿರಿ. ಇಲ್ಲಿ ನಂಬಿಕೆ ಮತ್ತು ದೇವರು ವಾಗ್ದಾನ ಮಾಡಿರುವದನ್ನು ವಶಪಡಿಸಿಕೊಳ್ಳುವದನ್ನು ನೋಡಬಹುದು (ಯೆಹೋ 1:3; 1 ಯೋಹಾನ 5:14-15; ಮಾರ್ಕ 11:24 ರೊಂದಿಗೆ ಹೋಲಿಸಿ ನೋಡಿರಿ). **31**

**11:31** ಯೆಹೋ 2:1-21; 6:24-25 ನೋಡಿರಿ. ಇಲ್ಲಿ ನಂಬಿಕೆ ಮಹಾ ಪಾಪ ಮತ್ತು

ಅಮಾಯಕತನದ ಮೇಲೆ ಜಯಗಳಿಸುವದು ಹಾಗೂ ದೇವಜನರನ್ನು ಶಾಪದಿಂದ ಬಿಡಿಸುವದನ್ನು ನಾವು ನೋಡಬಹುದು (ಗಲಾ 3:10-14; ಯೋಹಾನ 5:24 ರೊಂದಿಗೆ ಹೋಲಿಸಿ ನೋಡಿರಿ).

*"ನಂಬದವರು"* – ಅಥವಾ *"ಅವಿಧೇಯರು"*– ಗ್ರೀಕ್ ಪದವು ಇವುಗಳಲ್ಲಿ ಒಂದು ಅಥವಾ ಎರಡನ್ನೂ ಸೂಚಿಸುತ್ತದೆ. ಯೋಹಾನ 3:36 ನೋಡಿರಿ. **32**

**11:32** ಬರಹಗಾರನು ಹಳೆ ಒಡಂಬಡಿಕೆಯಿಂದ ಇನ್ನೂ ಅನೇಕ ನಿದರ್ಶನಗಳನ್ನು ಕೊಟ್ಟಿರಬಹುದಾಗಿತ್ತು, ಆದರೆ ಅದರ ಅವಶ್ಯಕತೆಯಿಲ್ಲ. ನಿಜವಾದ ನಂಬಿಕೆ ಎಂದರೆ ಏನು ಮತ್ತು ಅದು ಏನನ್ನು ಮಾಡುತ್ತದೆ ಎಂಬದನ್ನು ಆತನು ತೋರಿಸಿದ್ದಾನೆ. ಈಗ ಅವನು ಅನೇಕ ನಂಬಿಕೆಯ ವೀರರ ಹೆಸರುಗಳನ್ನು ತೆಗೆದುಕೊಳ್ಳುತ್ತಾನೆ ಮತ್ತು ಅವರ ನಂಬಿಕೆಯು ಯಾವ ರೀತಿ ಕಾರ್ಯ ಮಾಡಿತು, ಗಳಿಸಿಕೊಂಡಿತು ಮತ್ತು ಉಳಿದುಕೊಂಡಿತು ಎಂಬದನ್ನು ತೋರಿಸಿದ್ದಾನೆ (4 ನೇ ವಚನದ ನೋಟ್ ನೋಡಿರಿ). **33-38**

**11:33-38** ಈ ವಚನಗಳು ಹಳೆ ಒಡಂಬಡಿಕೆಯ ವಿಶ್ವಾಸಿಗಳು ನೆರವೇರಿಸಿದ ಹತ್ತು ಕಾರ್ಯಗಳು ಮತ್ತು ಸಹಿಸಿಕೊಂಡ ಎಂಟು ಕಾರ್ಯಗಳನ್ನು ತಿಳಿಸುತ್ತವೆ. ಅದೃಶ್ಯವಾದವುಗಳ ವಿಷಯದಲ್ಲಿ ಅವರಿಗಿದ್ದ ದೃಢತೆಯು ತಾವು ಮಾಡಿದ ಕಾರ್ಯಗಳನ್ನು ಅವರು ನೆರವೇರಿಸುವಂತೆ ಅವರನ್ನು ಬಲಪಡಿಸಿದವು, ಮತ್ತು ಅವರ ಅವರು ನಿರೀಕ್ಷಿಸಿದ ಕಾರ್ಯಗಳ ಕುರಿತಾದ ಅವರ ನಿರೀಕ್ಷೆಯು ಅವರು ಸಹಿಸಿಕೊಂಡ ವಿಷಯಗಳಲ್ಲಿ ಸಹಿಸಿಕೊಳ್ಳುವಂತೆ ಅವರನ್ನು ಬಲಪಡಿಸಿತು. **33**

**11:33** *"ರಾಜ್ಯಗಳು"*– ಸಂಖ್ಯಾ 21:23-25; ಯೆಹೋ 12:7-24; 2 ಸಮು 8:1-14.

*"ವಾಗ್ದಾನಗಳನ್ನು ಪಡೆದುಕೊಂಡರು"*– ದೇವರು ಹಳೆ ಒಡಂಬಡಿಕೆಯಲ್ಲಿ ಅನೇಕ ವಾಗ್ದಾನಗಳನ್ನು ಕೊಟ್ಟಿದ್ದಾನೆ ಯಾಕಂದರೆ ಅವುಗಳನ್ನು ನಂಬಲು ಕೆಲವರು (ಅನೇಕರಲ್ಲ) ಇದ್ದರು.

*"ಸಿಂಹಗಳು"*– ದಾನಿ 6:16-22. **34**

**11:34** *"ಬೆಂಕಿ"*– ದಾನಿ 3:19-27.

*"ಕತ್ತಿ"*– 1 ಸಮು 17:45-50.

*"ಬಲಿಷ್ಠರಾದರು"*– ನ್ಯಾಯ 6:15; 7:7-8; 16:21,28-30; 2 ಪೂರ್ವ 14:11; ಯೆಶಾಯ 40:31. 2 ಕೊರಿಂಥ 12:9-10 ರೊಂದಿಗೆ ಹೋಲಿಸಿ ನೋಡಿರಿ. **35**

**11:35** *"ಸತ್ತುಹೋಗಿದ್ದ ತಮ್ಮವರನ್ನು ತಿರುಗಿ ಪಡಕೊಂಡರು"*– 1 ಅರಸು 17:17-24; 2 ಅರಸು 4:32-37.

*"ಬಿಡುಗಡೆ ಬೇಡವೆಂದು ಹೇಳಿದರು"*– ದುಷ್ಟತನ ಮತ್ತು ಅಪನಂಬಿಕೆಯೊಂದಿಗೆ ಸಂಧಾನ ಮಾಡಿಕೊಳ್ಳುವದಾದರೆ ಅವರು ಬಿಡುಗಡೆಯೇ ಬೇಡವೆಂದು ಹೇಳಿದರು.

*“ಉತ್ತಮವಾದ ಪುನರುತ್ಥಾನ”*– ನಿತ್ಯಜೀವಕ್ಕಾಗಿ ಭವಿಷ್ಯದಲ್ಲಿ ದೊರೆಯುವ ಪುನರುತ್ಥಾನವು ಮೇಲೆ ತಿಳಿಸಲಾಗಿರುವ ಇಬ್ಬರು ಸ್ತ್ರೀಯರ ಪುತ್ರರು ಸತ್ತವರೊಳಗಿಂದ ಎದ್ದುಬಂದದ್ದಕ್ಕಿಂತಲೂ ಉತ್ತಮವಾದದ್ದಾಗಿದೆ. **36**

**11:36** *“ಸೆರೆಮನೆ”*– ಆದಿ 39:20; ಯೆರೆ 37:15-16; 38:6. **37**

**11:37** *“ಕಲ್ಲೆಸೆದು ಕೊಂದರು”*– ಮತ್ತಾಯ 23:37.

*“ಗರಗಸದಿಂದ ಕೊಯ್ದು ಕೊಂದರು”*– ಸಂಸ್ಕೃತಿಯ ಪ್ರಕಾರ ಯೆಶಾಯನು ಹೀಗೆಯೇ ಪ್ರಾಣ ಕೊಟ್ಟನು.

*“ಕೆಲವರು ಶೋಧನೆಗಳಿಗೆ ಒಳಗಾದರು”*– ಇದು ನಂಬಿಕೆಯ ವೀರರು ಹಾಗೂ ಆಗಿನಿಂದ ಎಲ್ಲಾ ವಿಶ್ವಾಸಿಗಳ ವಿಷಯದಲ್ಲಿ ಸತ್ಯವಾಗಿದೆ. ಈ ವಚನಗಳಲ್ಲಿ ತಿಳಿಸಲಾಗಿರುವ ಇತರೆ ಕಾರ್ಯಗಳು ನಮ್ಮಲ್ಲಿ ಅನೇಕರಿಗೆ ಸಂಭವಿಸದೆ ಇರಬಹುದು, ಅದರೆ ನಮ್ಮೆಲ್ಲರಿಗೂ ವಿವಿಧ ರೀತಿಯ ಶೋಧನೆಗಳು ಎದುರಾಗುತ್ತದೆ.

*“ಕೊರತೆ, ಹಿಂಸೆ, ಬಾಧೆ”*– ಪ್ರತಿಯೊಂದು ಯುಗದಲ್ಲಿಯೂ ಭೂಲೋಕದಲ್ಲಿರುವ ಉತ್ತಮ ಜನರನ್ನು ಈ ಪದಗಳು ಸಾಮಾನ್ಯವಾಗಿ ವಿವರಿಸುತ್ತವೆ. ಯೋಹಾನ 15:18-21; 16:2-3,33; ರೋಮಾ 8:35-37; 1 ಕೊರಿಂಥ 4:11-13 ರೊಂದಿಗೆ ಹೋಲಿಸಿ ನೋಡಿರಿ. **38**

**11:38** ಅವರು ಯೋಗ್ಯರೇ ಅಲ್ಲ ಎಂಬ ರೀತಿಯಲ್ಲಿ ಲೋಕವು ಅವರೊಂದಿಗೆ ನಡೆದುಕೊಂಡಿತ್ತು. ಆದರೆ ಇದಕ್ಕೆ ವಿರುದ್ಧವಾದದ್ದೆ ಸತ್ಯವಾಗಿದೆ. ಭೂಲೋಕದಲ್ಲಿ ಅವರಿಗೆ ಶಾಶ್ವತವಾದ ಮನೆಯೇ ಇರಲಿಲ್ಲ, ಆದರೆ ದೇವರು ಪರಲೋಕದಲ್ಲಿ ಅವರಿಗಾಗಿ ಮನೆಯನ್ನು ಸಿದ್ಧಮಾಡಿದನು. **39**

**11:39** *“ಒಳ್ಳೇ ಹೆಸರು”*– ವ 2.

*“ವಾಗ್ದಾನದ ಫಲಗಳು”*– ವ 10,16. ಯೇಸು ಕ್ರಿಸ್ತನು ಕೊಡುವ ವಾಗ್ದಾನ ಮಾಡಲ್ಪಟ್ಟ ಆಶೀರ್ವಾದಗಳಾಗಿರುವ, ನಿತ್ಯವಾದ ಸ್ವಾಸ್ಥ್ಯವನ್ನು ಬರಹಗಾರನು ಸೂಚಿಸುತ್ತಾ ಇದ್ದಾನೆ – 1:14; 6:12; 9:15. **40**

**11:40** *“ಶ್ರೇಷ್ಠವಾದ ಭಾಗ್ಯ”*– ನಾವು ಈ ಪತ್ರಿಕೆಯಲ್ಲಿ ನೋಡುವ ಎಲ್ಲಾ ರೀತಿಯ ಭಾಗ್ಯಕರವಾದ ಕಾರ್ಯಗಳು ಇದರಲ್ಲಿ ಸೇರಿವೆ – 7:19; 8:6; 9:23. ಯೇಸು ಕ್ರಿಸ್ತನಿಗೂ ಮೊದಲು ಜೀವಿಸಿದ ವಿಸ್ವಾಸಿಗಳು, ಮತ್ತು ಆತನು ಬಂದ ನಂತರ ಅತನಲ್ಲಿ ನಂಬಿಕೆಯಿಟ್ಟಿರುವವರು, ಎಲ್ಲರೂ ಒಟ್ಟಿಗೆ “ಸಿದ್ಧಿಗೆ”ಬರಬೇಕು ಎಂಬದು ದೇವರ ಯೋಜನೆಯಾಗಿತ್ತು (ಮತ್ತು ಯೋಜನೆಯಾಗಿದೆ). ಯೇಸು ಕ್ರಿಸ್ತನ ಯಜ್ಞವು ಅವರಿಗೆ ಎಷ್ಟು ಸೇರಿದೆಯೋ ನಮಗೂ ಅಷ್ಟೇ ಸೇರಿದೆ ಮತ್ತು ಇದೊಂದು ಮಾರ್ಗದ ಮೂಲಕ ಮಾತ್ರವೇ ಪ್ರತಿಯೊಬ್ಬರು ಸಿದ್ಧಿಗೆ ಬರಲು ಸಾಧ್ಯವಾಗುತ್ತದೆ – 10:14; ರೋಮಾ 3:25-26. ಯೇಸು

ಕ್ರಿಸ್ತನು ಹಿಂದಿರುಗಿ ಬಂದ ನಂತರ ಅಂತಿಮ ಸಿದ್ಧಿ ದೊರೆಯುತ್ತದೆ – ರೋಮಾ 8:23-30; 1 ಕೊರಿಂಥ 15:50-53; 1 ಥೆಸ 4:15-17; 1 ಯೋಹಾನ 3:2.

# 12 1-2

**12:1-2** ಇಲ್ಲಿ ನಾವು ಮೇಘದೋಪಾದಿಯಲ್ಲಿರುವ ಸಾಕ್ಷಿಗಳನ್ನು (11 ನೇ ಅಧ್ಯಾಯದ ವಿಶ್ವಾಸಿಗಳು), ದೂರವಿರಬೇಕಾದ ಅಡೆತಡೆಗಳು (ಪಾಪಗಳು, ಇತ್ಯಾದಿ), ನಾವು ಓಡುತ್ತಿರುವ ಓಟದಲ್ಲಿ ಅನುಸರಿಸಬೇಕಾದ ಅವಶ್ಯವಾದ ತತ್ವಗಳು (ತಾಳ್ಮೆ ಸಹನೆ), ಅಧ್ಯಯನ ಮಾಡಬೇಕಾದ ಮಾದರಿ (ಯೇಸು ಕ್ರಿಸ್ತನು) ನೋಡಬಹುದು. ಓಟದ ಕೊನೆಯಲ್ಲಿ ದೊಡ್ಡ ಬಹುಮಾನ ದೊರೆಯುತ್ತದೆ ಎಂಬದಾಗಿಯೂ ಬರಹಗಾರನು ಹೇಳಿದ್ದಾನೆ. **1**

**12:1** *"ಸಾಕ್ಷಿಗಳು"*– ಗ್ರೀಕ್ ಪದದ ಅರ್ಥವೇನೆಂದರೆ ತಾವು ನೋಡಿರುವ ಅಥವಾ ಅನುಭವಿಸಿರುವ ಕಾರ್ಯಗಳ ಬಗ್ಗೆ ಸಾಕ್ಷಿ ಹೇಳುವದಾಗಿದೆ. "ರಕ್ತಸಾಕ್ಷಿ" ಪದವು ಈ ಪದದಿಂದಲೇ ಬಂದಿದೆ. ನಾವು ಸತ್ಯವೇದದ ಯಾವ ಕಡೆ ನೋಡಿದರೂ ಈ ಸಾಕ್ಷಿಗಳು ಕಾಣಿಸುತ್ತಾರೆ. ಅವರು ನಮ್ಮನ್ನು ಸತ್ಯವೇದದ ಪುಟಗಳಿಂದ ನೋಡುತ್ತಾರೆ ಮತ್ತು ನಮಗೆ ಸಾಕ್ಷಿ ಹೇಳುತ್ತಾರೆ. ಅವರು ನಮಗೆ ನಂಬಿಕೆಯ ಜೀವಿತವು ಉತ್ತಮವಾದದ್ದು, ಪ್ರತಿಫಲಗಳು ವಿಶೇಷವಾದವುಗಳು, ಪ್ರತಿಯೊಂದು ಅಡೆತಡೆಯನ್ನೂ ಸುಲಭವಾಗಿ ಜಯಿಸಬಹುದು ಎಂದು ಹೇಳುತ್ತಾರೆ.

*"ಎಲ್ಲಾ ಭಾರ"*– ಓಟಗಾರನು ಭಾರಗಳನ್ನು ಹೊತ್ತುಕೊಂಡು ಓಡಲು ಮುಂದಾಗುತ್ತಾನೆಯೇ? ನಂಬಿಕೆಯ ಓಟದಲ್ಲಿ ನಮ್ಮನ್ನು ತಡೆಯುವಂಥ ಅಥವಾ ಅಡ್ಡಿಪಡಿಸುವಂಥ ಅಥವಾ ಓಟವನ್ನು ಕಷ್ಟವಾಗಿಸುವಂಥ ಅಥವಾ ಗೆಲ್ಲುವ ಛಲವನ್ನೇ ನಮ್ಮಿಂದ ಕಸಿದುಕೊಳ್ಳುವ ಪ್ರತಿಯೊಂದು ಕಾರ್ಯವೂ ಭಾರವೇ ಆಗಿದೆ. ಅದು ಸೋಮಾರಿತನವಾಗಿರಬಹುದು ಅಥವಾ ಲೌಕಿಕತೆಯಾಗಿರಬಹುದು ಅಥವಾ ಕ್ರಮಶಿಕ್ಷಣದ ಕೊರತೆಯಾಗಿರಬಹುದು ಅಥವಾ ನಿರಾಸೆಯಾಗಿರಬಹುದು ಅಥವಾ ಇನ್ನಿತರೆ ಯಾವುದೇ ಕಾರ್ಯಗಳಾಗಿರಬಹುದು. ಇವೆಲ್ಲವುಗಳಲ್ಲಿ ಘೋರವಾದ ಅಭ್ಯಂತರ ಪಾಪವಾಗಿದೆ. ಇದಲ್ಲದೆ ಬರಹಗಾರನು ನಿರ್ದಿಷ್ಟವಾದ ಪಾಪದ ಕುರಿತು ನಮಗೆ ಎಚ್ಚರಿಕೆಯನ್ನು ಕೊಟ್ಟಿದ್ದಾನೆ – ಅದೇನೆಂದರೆ, "ನಮ್ಮನ್ನು ಸುಲಭವಾಗಿ ಹತ್ತಿಕೊಳ್ಳುವ ಪಾಪ". ಆತನು ಅಪನಂಬಿಕೆಯನ್ನು ಸೂಚಿಸುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ (ಆದರೂ ಕೆಲವರು ಆತನು ಎಲ್ಲಾ ಪಾಪವನ್ನು ಸೂಚಿಸುತ್ತಾ ಇದ್ದಾನೆ ಎಂಬದಾಗಿ ಹೇಳುತ್ತಾರೆ). ವಿಶ್ವಾಸಿಗಳು ಓಡುವ ಓಟದಲ್ಲಿ ಅಪನಂಬಿಕೆ ಖಂಡಿತವಾಗಿಯೂ ದೊಡ್ಡ ಅಭ್ಯಂತರವಾಗಿದೆ. ಇದಲ್ಲದೆ ನಂಬಿಕೆಯಿಂದ ಗುರಿಯ ಕಡೆಗೆ ಓಡುವವರೆಲ್ಲರ ಕಾಲುಗಳಿಗೆ ತೊಂದರೆಪಡಿಸಲುಅದು ಮುಂದಾಗುತ್ತದೆ.

*“ತಾಳ್ಮೆ ಸಹನೆ”*– ಈ ಪತ್ರಿಕೆಯಾದ್ಯಂತ ಇದನ್ನು ನಾವು ನೋಡಬಹುದು – 3:6,12-14; 4:11; 6:11-12; 10:36.

*“ಓಟ”*– 1 ಕೊರಿಂಥ 9:24-27; ಫಿಲಿಪ್ಪಿ 3:13-14; 2 ತಿಮೊ 4:7 ರೊಂದಿಗೆ ಹೋಲಿಸಿ ನೋಡಿರಿ. **2**

**12:2** *“ಯೇಸುವಿನ ಮೇಲೆ ದೃಷ್ಟಿಯಿಟ್ಟು”*– ಯೇಸು ಕ್ರಿಸ್ತನು ಪರಲೋಕದಲ್ಲಿದ್ದಾನೆ, ಆದರೆ ನಂಬಿಕೆಯಿಂದ ನಾವು ಆತನ ಮೇಲೆ ದೃಷ್ಟಿಯಿಡಬಹುದು (11:1,27; 2 ಕೊರಿಂಥ 4:18).

*“ನಂಬಿಕೆಯನ್ನು ಹುಟ್ಟಿಸುವವನು”*– ಒಂದುವೇಳೆ ನಮ್ಮಲ್ಲಿ ನಂಬಿಕೆಯಿರುವದಾದರೆ ಅದನ್ನು ಹುಟ್ಟಿಸಿದವನು ಆತನೇ ಆಗಿದ್ದಾನೆ (ಎಫೆ 2:8; ಫಿಲಿಪ್ಪಿ 1:29).

*“ಪೂರೈಸುವವನು”*– ಅಥವಾ “ಮುಗಿಸುವಾತನು” ಅಥವಾ “ನೆರವೇರಿಸುವಾತನು”. ನಮ್ಮ ನಂಬಿಕೆಯು ಹೆಚ್ಚೆಚ್ಚು ಸಂಪೂರ್ಣವಾಗುವಂತೆ ಮಾಡುವಾತನು ಯೇಸು ಕ್ರಿಸ್ತನೇ ಆಗಿದ್ದಾನೆ ಮತ್ತು ನಾವು ಆತನನ್ನು ಮುಖಾಮುಖಿಯಾಗಿ ನೋಡುವ ದಿನದ ತನಕ ಇದು ಮುಂದುವರೆಯುವದು (10:39; ಲೂಕ 22:32; ಫಿಲಿಪ್ಪಿ 1:6). ಆತನು ತಾನು ಪ್ರಾರಂಭಿಸುವದನ್ನು ಮುಗಿಸುತ್ತಾನೆ.

*“ಸಂತೋಷ”*– ಯೇಸು ಕ್ರಿಸ್ತನು 2 ಕೊರಿಂಥ 5:21; 1 ಪೇತ್ರ 2:24; ಯೆಶಾಯ 53:5,10 ಸಹಿಸಿಕೊಳ್ಳಲು ಹೇಗೆ ಸಾಧ್ಯವಾಯಿತು? ಸಂತೋಷವು ಆತನಿಗೆ ಮತ್ತೊಂದು ಕಡೆ ಕಾಯುತ್ತಾ ಇತ್ತು (ಕೀರ್ತನೆ 16:11). ಆ ಸಂತೋಷ ಏನು? ತಂದೆಯಾದ ದೇವರನ್ನು ಮೆಚ್ಚಿಸುವದು ಮತ್ತು ಆತನ ಕೆಲಸವನ್ನು ಮುಗಿಸುವದು ಆತನ ಸಂತೋಷವಾಗಿದೆ (ಯೋಹಾನ 4:34). ಅನೇಕ ಪುತ್ರರನ್ನು ಪ್ರಭವಕ್ಕೆ ನಡೆಸುವದನ್ನು ನೋಡುವ ಸಂತೋಷ (2:10), ನಿತ್ಯವಾದ ರಕ್ಷಣೆಯನ್ನು ಹೊಂದಲು ಪಾಪಗಳಿಗೆ ಮಾರ್ಗವನ್ನು ತೆರೆಯುವದು (ಲೂಕ 15:7,10).

*“ನಾಚಿಕೆ”*– ಶಿಲುಬೆಗೆ ಜಡಿದು ಸಾಯಿಸುವದು ಘೋರವಾದ ಸಾರ್ವಜನಿಕ ಅವಮಾನವಾಗಿದೆ.

*“ಆಸನಾರೂಢನಾಗಿದ್ದಾನೆ”*– 10:12; 1:3. **3**

**12:3** ನಂಬಿಕೆಯ ಜೀವಿತದಲ್ಲಿ ಯೇಸು ಕ್ರಿಸ್ತನು ವಿಶ್ವಾಸಿಗೆ ಉತ್ತಮವಾದ ಉದಾಹರಣೆಯಾಗಿದ್ದಾನೆ (1 ಪೇತ್ರ 2:21-23). ನಮ್ಮ ಮನಸ್ಸುಗಳನ್ನು ಆತನ ಆಲೋಚನೆಗಳಿಂದ ತುಂಬಿಸಿಕೊಳ್ಳುವದು ವಿಶ್ವಾಸಿಗಳಿಗೆ ಓಡುವ ಓಟದಲ್ಲಿ ದೊಡ್ಡ ಪ್ರೋತ್ಸಾಹವನ್ನು ಕೊಡುತ್ತದೆ. ಹಾಗೆಯೇ 3:1; ಕೊಲೊ 3:12 ನೋಡಿರಿ.

*“ವಿರೋಧ”*– ಮತ್ತಾಯ 9:3,34; 12:14,24; 21:23,46; 22:15; 26:3-4,14-16,47-50,65-68; 27:20-23,27-31,35-44. **4**

**12:4** ನಂಬಿಕೆಯ ಜೀವಿತವು ಕೇವಲ ಓಟ ಮಾತ್ರವಲ್ಲ; ಅದು ಹೋರಾಟವಾಗಿದೆ (ಎಫೆ

6:10-18; 2 ತಿಮೊ 2:3; 4:7). ಪಾಪವು ವೈರಿಯಾಗಿದೆ. ಅದು ವಿಶ್ವಾಸಿಗಳಲ್ಲಿ ಒಳಗಿನಿಂದಲೂ ಹೋರಾಡುತ್ತದೆ ಹಾಗೆಯೇ ಹೊರಗಿನಿಂದಲೂ ಹೋರಾಡುತ್ತದೆ (1 ಯೋಹಾನ 1:8; ರೋಮಾ 7:17-18). ಅದಕ್ಕೆ ವಿರುದ್ಧವಾಗಿ ಹೋರಾಟದಿಂದ ಹಿಂದೆ ಸರಿದರೆ ನಾಶನ ಎದುರಾಗುತ್ತದೆ. **5-13**

**12:5-13** ಅವರು ತಮ್ಮ ನಂಬಿಕೆಯ ವಿಷಯದಲ್ಲಿ ಸತ್ತಿಲ್ಲವಾದರೂ (ವ 4), ಅನೇಕ ರೀತಿಯಲ್ಲಿ ಶ್ರಮೆಗಳನ್ನನುಭವಿಸಿದರು (10:32-34). ಅಪನಂಬಿಕೆಯುಳ್ಳ ಯೆಹೂದ್ಯರು, ದೇವರಿಗೆ ನೀವು ಇಷ್ಟವಿಲ್ಲ, ಹಳೆಯ ಮಾರ್ಗಗಳನ್ನು ನೀವು ನಿರಾಕರಿಸಿರುವದರಿಂದ ಆತನು ನಿಮ್ಮನ್ನು ಶಿಕ್ಷಿಸುತ್ತಾ ಇದ್ದಾನೆ ಎಂದು ಅವರಿಗೆ ಹೇಳಿರಬಹುದು. ಬರಹಗಾರನು ಆ ವಿಶ್ವಾಸಿಗಳನ್ನು ಪ್ರೋತ್ಸಾಹಪಡಿಸಬೇಕೆಂದಿದ್ದನು. ವಿಶ್ವಾಸಿಗಳ ಜೀವಿತದಲ್ಲಿ ಎದುರಾಗುವ ಕಷ್ಟಗಳು ಮತ್ತು ಸಮಸ್ಯೆಗಳು ದೇವರ ಪ್ರೀತಿಯ ಗುರುತುಗಳಾಗಿವೆಯೇ ಹೊರತು ಆತನ ಅಸಮಾಧಾನದ ಗುರುತುಗಳಲ್ಲ ಎಂದು ಅವರು ಅರ್ಥಮಾಡಿಕೊಳ್ಳಬೇಕೆಂದು ಅವನು ಬಯಸಿದನು. ದೇವರು ಅವರನ್ನು ಗದರಿಸುತ್ತಾ ಇದ್ದನು ಅಥವಾ ಶಿಕ್ಷಿಸುತ್ತಾ ಇದ್ದನು ಯಾಕಂದರೆ ಅವರು ಆತನ ಮಕ್ಕಳಾಗಿದ್ದರು ಮತ್ತು ಆತನು ಅವರ ಹಿತವನ್ನು ಬಯಸುವವನಾಗಿದ್ದನು. ನಾವು ಇಲ್ಲಿ ಶಿಕ್ಷೆಯ ಬಗ್ಗೆ (ಕ್ರಮಶಿಕ್ಷಣದ ಮೂಲಕ ತರಬೇತುಕೊಳಿಸುವಿಕೆ) ಐದು ಸತ್ಯಗಳನ್ನು ಕಲಿತುಕೊಳ್ಳಬಹುದು. ಮೊದಲನೆಯದಾಗಿ, ವಿಶ್ವಾಸಿಗಳು ಇದನ್ನು ತಪ್ಪಿಸಿಕೊಳ್ಳಲು ಆಗುವದಿಲ್ಲ. ದೇವರು ತಾನು ಅಂಗೀಕರಿಸಿಕೊಳ್ಳುವ "ಪ್ರತಿಯೊಬ್ಬ ಮಗನನ್ನು" ಶಿಕ್ಷಿಸುವನು (ವ 6). ಎರಡನೆಯದಾಗಿ, ದೇವರು ಉಪಯೋಗಿಸುವ ವಿಧಾನವು ವೇದನೆದಾಯಕವಾಗಿರುತ್ತದೆ. ಅದು ಛಡಿಯಿಂದ ಹೊಡೆದಂತಿರುತ್ತದೆ. ಇದರಿಂದ ನೋವಾಗುತ್ತದೆಯೇ ಹೊರತು ಖುಷಿಯಾಗುವದಿಲ್ಲ (ವ 11).

*"ಚಡಿಯನ್ನು ಉಪಯೋಗಿಸುತ್ತಾನೆ"*– ಅಥವಾ "ಚಡಿ ಏಟು" – ಇದುವೇ ಗ್ರೀಕ್ ಪದದ ಅರ್ಥವಾಗಿದೆ. ಮತ್ತಾಯ 10:17; ಮಾರ್ಕ 10:34; ಲೂಕ 18:33 ರಲ್ಲಿ ಈ ಪದವನ್ನು ಉಪಯೋಗಿಸಲಾಗಿದೆ. ದೇವರು ತಾನಾಗಿಯೇ ಅಕ್ಷರಾರ್ಥವಾಗಿ ನಮ್ಮ ಮೇಲೆ ಚಡಿಯನ್ನು ಉಪಯೋಗಿಸುವದಿಲ್ಲ, ಆದರೆ ನಿಜವಾದ ಚಡಿ ನಮ್ಮ ದೇಹದ ಮೇಲೆ ಬೀಳುವಾಗ ನಮಗೆ ಹೇಗನ್ನಿಸುತ್ತದೆಯೋ ಹಾಗೆಯೇ ಆತನ ಶಿಕ್ಷೆ ಹಾಗೂ ಕ್ರಮಶಿಕ್ಷಣ ನಮ್ಮ ಹೃದಯಗಳು, ಮನಸ್ಸುಗಳು ಮತ್ತು ಆತ್ಮಗಳಿಗೆ ಅನ್ನಿಸುತ್ತದೆ. ಮಾನವರು ನಮ್ಮನ್ನು ಹೊಡೆಯಲು ನಿಜವಾದ ಚಡಿಯನ್ನು ಉಪಯೋಗಿಸುತ್ತಾರೆ ದೇವರು ನಮ್ಮನ್ನು ಶಿಕ್ಷಿತರನ್ನಾಗಿಸಲು ಅದನ್ನು ಸಾಧನವನ್ನಾಗಿ ಉಪಯೋಗಿಸುತ್ತಾನೆ. ಮೂರನೆಯದಾಗಿ, ಈ ಕ್ರಮಶಿಕ್ಷಣವು ಸಂಕೇತವಾಗಿದೆ. ಇದನ್ನು ಹೊಂದುವವರೆಲ್ಲರೂ ದೇವರ ಮಕ್ಕಳಾಗಿದ್ದಾರೆಂಬದನ್ನು ಇದು ತೋರಿಸುತ್ತದೆ. ಆತನು ಅವರನ್ನು ತನ್ನ ವಿಶೇಷವಾದ ಪಾಲನೆಗೆ ತೆಗೆದುಕೊಳ್ಳುತ್ತಾ ಇದ್ದಾನೆ ಎಂಬದಕ್ಕೆ

ಇದು ಪುರಾವೆಯಾಗಿದೆ. ಆತನು ಅವರನ್ನು ಆದರ್ಶ ತಂದೆ ಪ್ರೀತಿಸಬೇಕಾದ ರೀತಿಯಲ್ಲಿ ಪ್ರೀತಿಸುತ್ತಾನೆ, ಆದ್ದರಿಂದ ಅವರಿಗೆ ತರಬೇತಿಯನ್ನು ಕೊಡುತ್ತಾನೆ (ವ 8). "ಒಂದುವೇಳೆ ದೇವರು ನಮ್ಮನ್ನು ಪೀತಿಸುವದಾದರೆ, ಆತನು ನಮ್ಮೊಂದಿಗೆ ಹೀಗೆ ನಡೆದುಕೊಳ್ಳುವದಿಲ್ಲ" ಎಂದು ಕೆಲವರು ಯೋಚಿಸುತ್ತಾರೆ. ಆತನು ಆತನು ನಮ್ಮೊಂದಿಗೆ ಹೀಗೆಯೇ ನಡೆದುಕೊಳ್ಳುತ್ತಾನೆ ಯಾಕಂದರೆ ಆತನು ನಮ್ಮನ್ನು ಪ್ರೀತಿಸುತ್ತಾನೆ. ನಾಲ್ಕನೆಯದಾಗಿ, ದೇವರು ನಮ್ಮನ್ನು ಅದ್ಭುತವಾದ ಉದ್ದೇಶದ ನಿಮಿತ್ತ ಶಿಕ್ಷಿತರನ್ನಾಗಿಸುತ್ತಾನೆ, ಅದೇನೆಂದರೆ, ನಮ್ಮ ಹಿತ ಮತ್ತು ನಮ್ಮ ಪರಿಶುದ್ಧತೆ (ವ 10). ಐದನೆಯದಾಗಿ, ತಾಳ್ಮೆಯಿಂದ ಸಹಿಸಿಕೊಂಡು (ವ 7) ಒಪ್ಪಿಸಿಕೊಡುವವರು (ವ 9) ಮತ್ತು ಅದರನುಸಾರ ನಡೆದುಕೊಳ್ಳುವವರಿಗೆ (ವ 11) ಇದರಿಂದ ಒಳ್ಳೆಯ ಫಲಿತಾಂಶಗಳು ಸಿಗುತ್ತವೆ. ದೇವರ ಕ್ರಮಶಿಕ್ಷಣ ಅಥವಾ "ಚಡಿ ಏಟುಗಳಿಗೆ" ಮೂರು ರೀತಿಯಲ್ಲಿ ಪ್ರತಿಕ್ರಿಯಿಸಬಹುದಾಗಿದೆ. ಜನರು "ಅದನ್ನು ಕಡೆಗಣಿಸಬಹುದು" – ತಿರಸ್ಕರಿಸಬಹುದು; ಅಥವಾ ಅದರ ನಿಮಿತ್ತ "ಭಯಪಡುವವರಾಗಿರಬಹುದು" ಅಥವಾ ದೇವರಿಗೆ ತಮ್ಮನ್ನು ಒಪ್ಪಿಸಿ, ಅದರ ಮೂಲಕ ತರಬೇತಿಯನ್ನು ಪಡೆಯಬಹುದು. ಆಯ್ಕೆಯು ತಿರಸ್ಕಾರ ಅಥವಾ ಒಪ್ಪಿಸಿಕೊಡುವಿಕೆಯಾಗಿರುವದು. ನಮ್ಮನ್ನು ಶಿಕ್ಷಿಸಲು ದೇವರು ಯಾವ ವಿಧಾನಗಳನ್ನು ಅನುಸರಿಸುತ್ತಾನೆ ಎಂದು ಬರಹಗಾರನು ನಮಗೆ ಹೇಳಿಲ್ಲ. ಆದರೆ ಆತನು ಈಗಾಗಲೇ 10:32-34; 11:35-38 ರಲ್ಲಿ ತಿಳಿಸಲಾಗಿರುವ ವಿಷಯಗಳು ಈಗಲೂ ಆತನ ಮನಸ್ಸಿನಲ್ಲಿ ಇಲ್ಲವೇ? ಹಾಗೆಯೇ 1 ಕೊರಿಂಥ 11:29-32; 2 ಕೊರಿಂಥ 12:7-10; 1 ಪೇತ್ರ 1:6-7 ನೋಡಿರಿ. ಕೀರ್ತನೆ 66:10-12 ರೊಂದಿಗೆ ಹೋಲಿಸಿ ನೋಡಿರಿ ಮತ್ತು ಕೀರ್ತನೆ 73 ನೋಡಿರಿ, ಅಲ್ಲಿ ದೇವರ ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಯು ತನ್ನ ಅನುಭವವನ್ನು ಹಂಚಿಕೊಂಡಿದ್ದಾನೆ.
**5-6**

**12:5-6** ಜ್ಞಾನೋ 3:11-12. ಹಾಗೆಯೇ ಯೋಬ 5:17; ಕೀರ್ತನೆ 94:12; 119:67,71,75 ಸಹ ನೋಡಿರಿ. **7-8**

**12:7-8** ನಿಜವಾದ ವಿಶ್ವಾಸಿಗಳು ಸಹಜವಾಗಿ ಇತರರಿಗಿಂತ ಹೆಚ್ಚು ಕಷ್ಟಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸುತ್ತಾರೆ ಅನ್ನಿಸುತ್ತದೆ (ಕೀರ್ತನೆ 73:2-14 ನೋಡಿರಿ). ಅದಕ್ಕೆ ಕಾರಣ ಇಲ್ಲಿ ಕೊಡಲಾಗಿದೆ. ದೇವರು ಅವರೊಂದಿಗೆ ಮಕ್ಕಳ ಸಂಗಡ ನಡೆದುಕೊಳ್ಳುವ ಹಾಗೆ ನಡೆದುಕೊಳ್ಳುತ್ತಾ ಇದ್ದಾನೆ. ತನ್ನನ್ನು ಕ್ರೈಸ್ತನೆಂದು ಹೇಳಿಕೊಳ್ಳುವವನು, ದೇವರು ಶಿಕ್ಷಿಸದೆ ಇರುವಾಗ ಮಾತ್ರವಲ್ಲ, ದೇವರು ಶಿಕ್ಷಿಸುವಾಗಲೂ ಚಿಂತಿಸುವವನಾಗಿರಬಾರದು. ದೇವರು ಸೈತಾನನ ಮಕ್ಕಳನ್ನು ಶಿಕ್ಷಿಸುವದಿಲ್ಲ. ಆತನು ಅವರ ಮೇಲೆ ಕೋಪಿಸಿಕೊಳ್ಳುತ್ತಾನೆ ಮತ್ತು ಸರಿಯಾದ ಸಮಯದಲ್ಲಿ ಅವರ ಒಂದೊಂದೇ ಕಾರ್ಯಗಳಿಗೆ ಅವರಿಗೆ ತೀರ್ಪು ಮಾಡುತ್ತಾನೆ.
**9**

**12:9** *"ಶರೀರ ಸಂಬಂಧವಾದ ತಂದೆಗಳು"*– ಜ್ಞಾನೋ 13:24; 19:18; 22:15; 23:13-14.

*"ಸನ್ಮಾನಿಸಿದ್ದೇವೆ"*– ತಂದೆತಾಯಿಗಳು ಪ್ರೀತಿಯಿಂದ ತಮ್ಮ ಮಕ್ಕಳನ್ನು ಗದರಿಸುವಾಗ ಮತ್ತು ಶಿಕ್ಷಿಸುವಾಗ, ಮಕ್ಕಳು ಅದನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಅದಕ್ಕಾಗಿ ಅವರನ್ನು ಗೌರವಿಸುತ್ತಾರೆ. ಒಂದುವೇಳೆ ಅವರು ಮಕ್ಕಳಿಗೆ ಸರಿಯಾದ ಕ್ರಮಶಿಕ್ಷಣ ಕೊಡದೆ ಹೋದರೆ, ನಮ್ಮ ತಂದೆತಾಯಿಗಳು ನಿಜವಾಗಿಯೂ ನಮ್ಮನ್ನು ಪ್ರೀತಿಸುತ್ತಾರೆಯೇ ಎಂಬ ಸಂದೇಹ ಅವರಲ್ಲಿ ಕಾಣಿಸಿಕೊಳ್ಳುತ್ತದೆ.

*"ಆತ್ಮಗಳಿಗೆ ತಂದೆಯಾಗಿರುವಾತನು"*–ಸತ್ಯವೇದದಲ್ಲಿ ಈ ಪದ ಇದೊಂದು ಸಲ ಮಾತ್ರವೇ ಬರೆಯಲ್ಪಟ್ಟಿದೆ (ಇದೇ ರೀತಿಯ ಪದ ಸಂಖ್ಯಾ 16:22; 27:16 ರಲ್ಲಿಯೂ ಬರೆಯಲ್ಪಟ್ಟಿದೆ). ಬರಹಗಾರನು ಭೂಲೋಕದ ತಂದೆಗಳು ಮತ್ತು ಪರಲೋಕದ ತಂದೆಗಿರುವ ವ್ಯತ್ಯಾಸವನ್ನು ತೋರಿಸುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ. ಅವರು ತಮ್ಮ ಮಕ್ಕಳ ದೇಹಗಳಿಗೆ ಹೊಡೆಯುತ್ತಾರೆ; ಆತನು ಪ್ರಮುಖವಾಗಿ ತನ್ನ ಮಕ್ಕಳ ಆತ್ಮದೊಂದಿಗೆ ಕಾರ್ಯಮಾಡುತ್ತಾನೆ. **10**

**12:10** *"ಹಿತಕ್ಕಾಗಿ"*– ರೋಮಾ 8:28.

*"ಪರಿಶುದ್ಧತೆ"*– ದೇವರು ತನ್ನ ಮಕ್ಕಳು ಹೆಚ್ಚೆಚ್ಚಾಗಿ ಲೋಕ ಮತ್ತು ಅದರ ದುಷ್ಟತನದಿಂದ ಬೇರ್ಪಟ್ಟು (2 ಕೊರಿಂಥ 6:17), "ಪಾಪದ ವಿರುದ್ಧ ತಾವು ಮಾಡುತ್ತಿರುವ ಹೋರಾಟದಲ್ಲಿ" ಸಂಪೂರ್ಣವಾಗಿ ಗೆಲ್ಲಬೇಕು (ವ 4), ಮತ್ತು ಹೆಚ್ಚೆಚ್ಚು ನಿರ್ಮಲ ಹೃದಯವುಳ್ಳವರಾಗಬೇಕು (ಮತ್ತಾಯ 5:8) ಎಂದು ಬಯಸುವವನಾಗಿದ್ದಾನೆ. ಆತನ ಗದರಿಸುತ್ತಾನೆ, ಹೊಡೆಯುತ್ತಾನೆ ಮತ್ತು ಈ ದೃಷ್ಟಿಕೋನವುಳ್ಳವನಾಗಿ ಅವರನ್ನು ಶಿಕ್ಷಿಸುತ್ತಾನೆ. ಕಷ್ಟಗಳು ಹಾಗೂ ಸಮಸ್ಯೆಗಳಿಂದ ಇಂಥ ಫಲಿತಾಂಶಗಳು ಎದುರಾಗುವಾಗ ಅವುಗಳನ್ನು ಸ್ವಾಗತಿಸಿಕೊಳ್ಳಿರಿ! ನಾವು ಶುದ್ಧರಾಗಲು ಮತ್ತು ದೇವರ ಪರಿಶುದ್ಧತೆಯಲ್ಲಿ ಭಾಗಿಯಾಗಲು ನಮಗೆ ಸಹಾಯವಾದರೆ ಕೆಲವು ಏಟುಗಳು ದೊಡ್ಡ ವಿಷಯವಲ್ಲ ಅಲ್ಲವೇ? ತನ್ನ ಮಕ್ಕಳು ತನ್ನ ಪರಿಶುದ್ಧತೆಯಲ್ಲಿ ಭಾಗಿಯಾಗಲು ದೇವರು ಅವರನ್ನು ಹೇಗೆ ಬಲಪಡಿಸುತ್ತಾನೆ ಎಂಬದನ್ನು ಇಲ್ಲಿ ಗಮನಿಸಿರಿ- ಆತನು ನಮಗೆ ಒಂದೇ ಸಲ ಅಸಾಧಾರಣವಾದ ಅನುಭವವನ್ನು ಕೊಡುವ ಮೂಲಕ ಹೀಗೆ ಮಾಡುವದಿಲ್ಲ. ಆತನು ನಮ್ಮನ್ನು ಕ್ರಮಶಿಕ್ಷಣಕ್ಕೆ ನಡೆಸುವ ಕಾರ್ಯವನ್ನು ಮುಂದುವರೆಸುತ್ತಾನೆ ಮತ್ತು ನಾವು ಈ ಲೋಕವನ್ನು ತ್ಯಜಿಸುವ ತನಕ ಅದರಲ್ಲಿ ಯಾವುದೇ ಸಂದೇಹವು ಇರುವದಿಲ್ಲ. ತೊಂದರೆಗಳಿಂದ ವಿಶ್ವಾಸಿಗಳಿಗೆ ಎದುರಾಗುವ ಇತರೆ ಪ್ರಯೋಜನಗಳಿಗಾಗಿ ಯೋಬ 3:20 ರ ನೋಟ್ ನೋಡಿರಿ. **11**

**12:11** ಇಲ್ಲಿ ವಿಶ್ವಾಸಿಗಳೆಲ್ಲರೂ ಬಯಸುವ "ಫಲವನ್ನು" ನಾವು ನೋಡಬಹುದು

(ಮತ್ತಾಯ 5:6). ನಂತರ ಅವುಗಳನ್ನು ಉಂಟುಮಾಡಲು ದೇವರು ಉಪಯೋಗಿಸುವ ಸಾಧನಗಳಾದ – ಕ್ರಮಶಿಕ್ಷಣ, ಹೊಡೆಯುವಿಕೆ ಮತ್ತು ಶಿಕ್ಷೆಯನ್ನು ನಾವು ಸ್ವಾಗತಿಸಿಕೊಳ್ಳಬೇಕು.

"*ಅದನ್ನು ಅಭ್ಯಾಸ ಮಾಡಬೇಕು*" ಅಥವಾ "*ಅದರಿಂದ ತರಬೇತಿ ಹೊಂದಬೇಕು*"– ಕಷ್ಟಗಳು ಮತ್ತು ಶ್ರಮೆಗಳು ಎದುರಾಗುವಾಗ, ನಾವು ಚಿಂತೆಗೆ ಒಳಗಾಗುವ ಅಥವಾ ನಿರಾಸೆಗೊಳಗಾಗುವ ಸಾಧ್ಯತೆ ಬಹಳವಾಗಿರುತ್ತದೆ. ಬದಲಾಗಿ ನಾವು ಅವುಗಳಿಂದ "ತರಬೇತಿ ಹೊಂದಬೇಕು". ಅಂದರೆ, ನಮ್ಮನ್ನು ಪರೀಕ್ಷಿಸಿಕೊಳ್ಳುವದನ್ನು, ದೇವರು ಶಿಕ್ಷಿಸುತ್ತಿರುವದಕ್ಕೆ ಕಾರಣ ತಿಳಿದುಕೊಳ್ಳದನ್ನು ಮತ್ತು ನಮ್ಮನ್ನು ಸರಿಪಡಿಸಿಕೊಳ್ಳುವದನ್ನು ಕಲಿತುಕೊಳ್ಳಬೇಕು. ಪ್ರಲಾ 3:40 ರೊಂದಿಗೆ ಹೋಲಿಸಿ ನೋಡಿರಿ. **12**

**12:12** "*ಆದದರಿಂದ*"– ಆತನು ದೇವರು ಕೊಡುವ ಶಿಕ್ಷೆಯ ವಿಷಯದಲ್ಲಿ ಮಾತನಾಡುತ್ತಾ, ವಿಶ್ವಾಸಿಗಳೆಲ್ಲರೂ ಸಕ್ರಿಯವಾಗಿ ಅದಕ್ಕೆ ಪ್ರತಿಕ್ರಿಯಿಸಬೇಕೆಂದು ಈಗ ಹೇಳುತ್ತಾ ಇದ್ದಾನೆ. ನಾವು ನಾಲ್ಕು ಕಾರ್ಯಗಳನ್ನು ಮಾಡಬೇಕು: "ಸುಧಾರಿಸಿಕೊಳ್ಳಬೇಕು" (ವ 12), "ಮಾರ್ಗಗಳನ್ನು ನೆಟ್ಟಗೆ ಮಾಡಿಕೊಳ್ಳಬೇಕು" (ವ 13), "ಹಿಂಬಾಲಿಸುವದು" (ವ 14), "ನೋಡಿಕೊಳ್ಳಬೇಕು" (ವ 15). ಒಂದುವೇಳೆ ದೇವರ ಕ್ರಮಶಿಕ್ಷಣವು ಬಯಸಿದ ಪ್ರಭಾವಗಳನ್ನು ಬೀರಬೇಕಾದರೆ, ನಾವು ಸಕ್ರಿಯವಾಗಿ ಆತನೊಂದಿಗೆ ಸಹಕರಿಸಬೇಕು ಮತ್ತು ಸುಮ್ಮನೇ ಎಲ್ಲವನ್ನು ಸಹಿಸಿಕೊಳ್ಳುವವರಾಗಿರಬಾರದು.

"*ಸುಧಾರಿಸಿಕೊಳ್ಳಬೇಕು*"– ಒಬ್ಬನು ತನ್ನ ಕೈಕಾಲುಗಳನ್ನು ಸರಿಯಾಗಿ ಕಾಪಾಡಿಕೊಂಡಿಲ್ಲವೆಂದರೆ, ಓಟವನ್ನು ಸರಿಯಾಗಿ ಓಡಲು ಹೇಗೆ ಸಾಧ್ಯ (ವ 1)? ದೇವರು ಯೇಸು ಕ್ರಿಸ್ತನಲ್ಲಿ ನಮಗೆ ಬಲವನ್ನು ಕೊಡುತ್ತಾನೆ ಮತ್ತು ಅದನ್ನು ಉಪಯೋಗಿಸುವದು ಹೇಗೆ ಎಂಬದನ್ನು ನಾವು ಕಲಿತುಕೊಳ್ಳಬೇಕು. ಕೀರ್ತನೆ 29:11; 73:26; 105:4; ಎಫೆ 1:18-19; 6:10; ಕೊಲೊ 1:11-12,29 ನೋಡಿರಿ. **13**

**12:13** "*ಮಾರ್ಗಗಳನ್ನು ನೆಟ್ಟಗೆ ಮಾಡಿರಿ*"– ನಾವು ಚೆನ್ನಾಗಿ ಓಡಬೇಕಾದರೆ ಮಾರ್ಗವು ನೆಟ್ಟಗಿರಬೇಕು ಹಾಗು ಸಮವಾಗಿರಬೇಕು. ಅದನ್ನು ಸರಿಪಡಿಸಿಕೊಳ್ಳುವದು ನಮ್ಮ ಕರ್ತವ್ಯವಾಗಿದೆ. ನಮ್ಮ ಜೀವಿತಗಳಲ್ಲಿ ದುಷ್ಟತನಗಳಿಗೆ ಅವಕಾಶ ನೀಡಿದರೆ ನಾವು ಗೆಲ್ಲುವದಿಲ್ಲ.

"*ಕಾಲು . . . ವಾಸಿಯಾಗುವದು*"– ಜ್ಞಾನೋ 4:25-27. ದೇವರ ಕ್ರಮಶಿಕ್ಷಣಕ್ಕೆ ನಾವು ನಮ್ಮನ್ನು ಒಪ್ಪಿಸಿದರೆ ಆತನ ಮಾರ್ಗದಿಂದ ನಮಗೆ ವಾಸಿಯಾಗುವದು. ದುಃಖದ ವಿಷಯವೆಂದರೆ ಅನೇಕ ಕ್ರೈಸ್ತರು ತಮ್ಮ ಕುಂಟಕಾಲಿನ ಮೂಲಕವೇ ಓಟವನ್ನು ಓಡಲು ಪ್ರಯತ್ನಿಸುತ್ತಾ ಇದ್ದಾರೆ. **14**

**12:14** "*ಹಿಂಬಾಲಿಸುವದು*"– ಮತ್ತೊಮ್ಮೆ ನಾವು ವೈಯಕ್ತಿಕ ಪರಿಶ್ರಮ

ಭಾಗಿಯಾಗಿರುವದನ್ನು ನೋಡುತ್ತೇವೆ. ತಟಸ್ಥವಾಗಿ ಜೀವನವನ್ನು ಕಳೆಯೋಣ ಎಂಬದಾಗಿ ನಾವು ಎಂದಿಗೂ ಕನಸು ಕಾಣಬಾರದು.

*"ಸಮಾಧಾನ"*– ಮತ್ತಾಯ 5:9; ರೋಮಾ 12:18.

*"ಪರಿಶುದ್ಧತೆ"*– ವ 10. ಪರಿಶುದ್ಧತೆಗೆ ಪರಿಶ್ರಮ ಬೇಕು, ಅತಿಯಾದ ಪರಿಶ್ರಮ ಬೇಕು (ರೋಮಾ 8:13; 1 ಕೊರಿಂಥ 9:27; 2 ಕೊರಿಂಥ 7:1; ಗಲಾ 5:16-18; ಎಫೆ 4:22-32; ಕೊಲೊ 3:5; ಇಬ್ರಿ 12:4,10-13; 1 ಪೇತ್ರ 1:13-16; 2 ಪೇತ್ರ 1:5-8). ಪರಿಶುದ್ಧತೆಯನ್ನು ಹೆಚ್ಚಿನ ಬೆಲೆಯುಳ್ಳದೆಂದು ಪರಿಗಣಿಸಬೇಕು ಮತ್ತು ಹೊಂದಿಕೊಳ್ಳಬೇಕು (ಅದು ಅರ್ಹವಾದದ್ದಾಗಿದೆ).

*"ಕರ್ತನನ್ನು ಕಾಣುವದು"*– ಪರಿಶುದ್ಧತೆಯು ಬಹಳ ಪ್ರಾಮುಖ್ಯವಾಗಿದೆ (ಮತ್ತಾಯ 5:8; 1 ಕೊರಿಂಥ 6:9-11). ಲೋಕ, ಶರೀರ ಮತ್ತು ದುರಾತ್ಮನಿಗನುಸಾರ ಜೀವಿಸುತ್ತಾ, ತಮ್ಮನ್ನು ಕ್ರೈಸ್ತರೆಂದು ಕರೆದುಕೊಳ್ಳುವವರು ಮತ್ತು ದೇವರ ಪವಿತ್ರವಾದ ಪರಲೋಕದೊಳಗೆ ಪ್ರವೇಶವನ್ನು ಬಯಸುವವರು, ಘೋರವಾದ ಆಶ್ಚರ್ಯವನ್ನು ಎದುರುಗೊಳ್ಳುವವರಾಗಿದ್ದಾರೆ. ಪರಿಶುದ್ಧತೆಯ ಕುರಿತಾದ ನೋಟ್ಸ್ ಗಾಗಿ ಯಾಜಕ 20:8; ಯೋಹಾನ 17:17-19 ನೋಡಿರಿ. **15**

**12:15** ನೋಡಿಕೊಳ್ಳಿರಿ – ಯಾವುದೇ ಸಭೆಯಲ್ಲಾದರೂ ಕೆಲವರು ದೇವರ ಕೃಪೆಯನ್ನು ತಪ್ಪಿಸಿಕೊಳ್ಳುವ ಸಾಧ್ಯತೆಯಿದೆಯೇ? – 2 ಕೊರಿಂಥ 6:1; ಗಲಾ 5:4,7 ರೊಂದಿಗೆ ಹೋಲಿಸಿ ನೋಡಿರಿ. ಬರಹಗಾರನು ಪರಿಶುದ್ಧತೆಯ ವಿಷಯವನ್ನು ಮುಂದುವರೆಸುತ್ತಾ ಇದ್ದಾನೆ. ಒಬ್ಬನು ದೇವರ ಕೃಪೆಯಿಂದ ಮಾತ್ರವೇ ಪರಿಶುದ್ಧನಾಗಲು ಸಾಧ್ಯ ಮತ್ತು ಅವನು ತನ್ನನ್ನು ನೋಡಿಕೊಳ್ಳಲಿಲ್ಲವೆಂದರೆ ಅವನು ಈ ಮಾರ್ಗದಲ್ಲಿ ಮುಂದುವರೆಯಲು ಆಗುವದಿಲ್ಲ ಎಂಬದನ್ನು ಆತನು ಬಲ್ಲವನಾಗಿದ್ದನು. ಒಂದುವೇಳೆ ಇದು ಸಾಧ್ಯವಾದರೆ ಕಹಿತನದ ಬೇರುಗಳು ಹೃದಯದಲ್ಲಿ ಮತ್ತು ಸಭೆಯಲ್ಲಿ ಹರಡಿಕೊಳ್ಳುತ್ತವೆ. ಒಂದುವೇಳೆ ಎಚ್ಚರಿಕೆ ವಹಿಸಲಿಲ್ಲವೆಂದರೆ ಯಾವುದೇ ಸಭೆಯಲ್ಲಾದರೂ ಅಂಥ ಬೇರಿನ ಫಲವು ಬೇರಿನಷ್ಟೇ ಕಹಿಯಾಗಿರುತ್ತದೆ ಅಂದರೆ, ಜಗಳ, ಕಿತ್ತಾಡ, ಕೆಟ್ಟ ಮಾತುಗಳು, ದ್ವೇಷ ಇತ್ಯಾದಿ. ಹೀಗೆ ಅನೇಕರು ಅದರಿಂದ ಮಲಿನವಾಗುತ್ತಾರೆ. ಈ ಕಾರ್ಯವು ಕೊರಿಂಥ ಮತ್ತು ಗಲಾತ್ಯದ ಸಭೆಗಳಲ್ಲಿ ಒಂದು ಹಂತಕ್ಕೆ ನಡೆಯುತ್ತಾ ಇತ್ತು. **16**

**12:16** ನಾವು ಸಭೆಗಳಲ್ಲಿ ಅನೇಕ ವಿಷಯಗಳ ಕುರಿತು ಎಚ್ಚರಿಕೆಯುಳ್ಳವರಾಗಿರಬೇಕು. ಸತ್ಯವೇದದ ಎಲ್ಲಾ ಭಾಗಗಳಲ್ಲಿಯೂ ನಾವು ತಪ್ಪಾದ ಮಾರ್ಗವನ್ನು ಹಿಡಿಯುವ ಘೋರವಾದ ಸಾಧ್ಯತೆಗಳನ್ನು ನೋಡುತ್ತೇವೆ.

*"ಪ್ರಾಪಂಚಿಕರು"*– ಗ್ರೀಕ್ ಪದವು "ಕೆಡುಕನು" ಎಂಬ ಅರ್ಥವನ್ನು ಕೊಡುತ್ತದೆ. ಏಸಾವನು ಆತ್ಮೀಕ ವಿಷಯಗಳಲ್ಲಿ ಯಾವುದೇ ಆಸಕ್ತಿಯಿಲ್ಲದಂಥ ವ್ಯಕ್ತಿಯಾಗಿದ್ದನು.

"ಶರೀರಭಾವದನುಸಾರವಾಗಿ" ನಡೆದುಕೊಳ್ಳುವವರಿಗೆ, ಶರೀರವು ಬಯಸುವ ಕಾರ್ಯಗಳ ಕಡೆಗೆ ಮನಸ್ಸು ಕೊಡುವಂಥವರಿಗೆ ಅವನು ಮಾದರಿಯಾಗಿದ್ದಾನೆ (ರೋಮಾ 8:5-8), ಅಂಥವರು ತಮ್ಮನ್ನು ಮೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆಯೇ ಹೊರತು ದೇವರನ್ನು ಮೆಚ್ಚಿಸಲು ಪ್ರಯತ್ನಿಸುವದಿಲ್ಲ. ಇಂದು ಏಸಾವನ ಹಾಗೆ – ಅನೈತಿಕರು, ಕೆಡುಕರು ಮತ್ತು ತಮ್ಮ ಆತ್ಮೀಕ ಚೊಚ್ಚಲುತನವನ್ನು ಸಾಧಾರಣ ವಿಷಯಗಳಿಗೋಸ್ಕರ ಮಾರುವಂಥವರು ನಮ್ಮ ಸಭೆಗಳಲ್ಲಿ ಮತ್ತು ಸಭೆಯ ನಾಯಕರುಗಳಲ್ಲಿ ಅನೇಕರು ಇಲ್ಲವೇ? ಅವರ ಜೀವಿತದಲ್ಲಿ ವಿಶೇಷವಾದ ಬದಲಾವಣೆಯಾಗುವ ತನಕ ಅವರೂ ಏಸಾವನ ಹಾಗೆಯೇ ತಿರಸ್ಕರಿಸಲ್ಪಡುತ್ತಾರೆ. ಮಲಾಕಿ 1:3 ರೊಂದಿಗೆ ಹೋಲಿಸಿ ನೋಡಿರಿ.

*"ಏಸಾವನು"*– ಆದಿ 25:24-34 ನೋಡಿರಿ. ಇವನು ದೇವರ ಕೃಪೆಯನ್ನು ತಪ್ಪಿಸಿಕೊಳ್ಳುವಂಥವರಿಗೆ ಉದಾಹರಣೆಯಾಗಿದ್ದಾನೆ. ಏಸಾವನು ಚೊಚ್ಚಲುತನದ ಹಕ್ಕು ಮತ್ತು ಅದರೊಂದಿಗಿದ್ದ ದೇವರ ವಾಗ್ದಾನಗಳಿಗೆ ಯಾಕೆ ಬೆಲೆ ಕೊಡಲಿಲ್ಲ ಎಂಬದನ್ನು ಇಲ್ಲಿ ಗಮನಿಸಿರಿ. **17**

**12:17** *"ಅನಂತರದಲ್ಲಿ"*– ಆದಿ 27:30-40.

*"ನಡೆದದ್ದನ್ನು ಇಲ್ಲದ ಹಾಗೆ ಮಾಡಲು"*– ಅವನು ಬಹುಶಃ ತನ್ನ ತಂದೆ ಯಾಕೋಬನಿಗೆ ಕೊಟ್ಟ ಆಶೀರ್ವಾದವನ್ನು ಇಲ್ಲದ ಹಾಗೆ ಮಾಡಲು ಪ್ರಯತ್ನಿಸಿದನು, ಆದರೆ ಸಫಲನಾಗಲಿಲ್ಲ. ಇದರ ಅರ್ಥ ಏಸಾವನು ತಾನೇ ಪಶ್ಚಾತ್ತಾಪ ಪಡಲು ಪ್ರಯತ್ನಿಸಿದನು ಆದರೆ ಆಗಲಿಲ್ಲ ಎಂಬದು ಕೆಲವರ ಅಭಿಪ್ರಾಯವಾಗಿದೆ, ಆದರೆ ಈ ಸಾಧ್ಯತೆಯಿಲ್ಲ. ಕೆಜೆವಿ ಆವೃತ್ತಿಯಲ್ಲಿ "ಪಶ್ಚಾತ್ತಾಪ" ಎಂದು ಭಾಷಾಂತರ ಮಾಡಲಾಗಿರುವ ಪದದ ಅರ್ಥ ಮನಸ್ಸು ಬದಲಾವಣೆಯಾಗಿದೆ. **18**

**12:18** *"ಯಾಕಂದರೆ"*– ಈ ಪದ 17 ನೇ ವಚನದ ವಿಷಯಗಳೊಂದಿಗೆ ಹೊಂದಿಕೆಯಾಗುವದಿಲ್ಲ, ಆದರೆ ಈ ಅಧ್ಯಾಯದ ಮೊದಲನೆಯ ಧ್ಯೇಯವಾದ – ತಾಳ್ಮೆಯಿಂದ ದೇವರ ಶಿಕ್ಷೆಯನ್ನು ಸಹಿಸಿಕೊಳ್ಳುವದು ಮತ್ತು ಅದರಿಂದ ತರಬೇತಿ ಹೊಂದುವದು ಇದರೊಂದಿಗೆ ಹೊಂದಿಕೆಯಾಗುತ್ತದೆ. ಇದು ವಿಶ್ವಾಸಿಗಳಿಗೆ ದೊರೆಯುವ ಸಂತೋಷದ ಸೌಭಾಗ್ಯವಾಗಿದೆ ಯಾಕಂದರೆ ಅವರು ಹಳೆ ಒಡಂಬಡಿಕೆ ಮತ್ತು ನಿಯಮಗಳಿಗನುಸಾರ ನಡೆದುಕೊಳ್ಳುವವರಲ್ಲ (ವ 18-21), ಬದಲಾಗಿ ಹೊಸ ಒಡಂಬಡಿಕೆಯ ಕೃಪೆಯ ಪ್ರಕಾರ ನಡೆದುಕೊಳ್ಳುವವರಾಗಿದ್ದಾರೆ (ವ 22-24). 18-24 ವಚನಗಳನ್ನು ಗಲಾ 4:24-26 ವಚನಗಳೊಂದಿಗೆ ಹೋಲಿಸಿ ನೋಡಿರಿ.

*"ನೀವು . . . ಬಂದವರಲ್ಲ"*– ಯೇಸು ಕ್ರಿಸ್ತನ ವಿಶ್ವಾಸಿಗಳಾಗಿ ಅವರು ಧರ್ಮಶಾಸ್ತ್ರದ ಅಧೀನರಲ್ಲ – ರೋಮಾ 6:14, ಮತ್ತು ವಿಶ್ವಾಸಿಗಳು ಹಳೆ ಒಡಂಬಡಿಕೆಯನ್ನು ರಕ್ಷಣೆಯ ಅಥವಾ ದೇವರೊಂದಿಗೆ ಅನ್ಯೋನ್ಯವಾಗಿರುವ ಮಾರ್ಗವೆಂದು ಪರಿಗಣಿಸುವಂತಿಲ್ಲ.

*“ಬೆಟ್ಟ”*– ಸೀನಾಯ್ ಬೆಟ್ಟ. ಈ ವಚನ ಮತ್ತು ಮುಂದಿನ ಎರಡು ವಚನಗಳ ವಿವರಣೆಯು ವಿಮೋ 19:16-19; 20:18-21 ಮತ್ತು ಧರ್ಮೋ 4:11 ರ ಮೇಲೆ ಆಧಾರವಾಗಿದೆ. **19-20**

**12:19-20** ಧರ್ಮಶಾಸ್ತ್ರ ಕೊಡೋಣವು ಅತ್ಯಂತ ಭಯದ ವಿಷಯವಾಗಿದೆ ಎಂದು ಇವೆಲ್ಲವೂ ಸೂಚಿಸುತ್ತವೆ. ವಿಮೋಚನಕಾಂಡ 19 ನೇ ಅಧ್ಯಾಯದ ನೋಟ್ಸ್ ನೋಡಿರಿ. **21**

**12:21** ಇಲ್ಲಿ ಬರೆಯಲಾಗಿರುವ ಮೋಶೆಯ ಮಾತುಗಳು ಸತ್ಯವೇದದ ಬೇರೆ ಯಾವ ಭಾಗಗಳಲ್ಲಿಯೂ ಬರೆಯಲಾಗಿಲ್ಲ. ಮೋಶೆ ಏನು ಹೇಳಿದನು ಎಂಬದನ್ನು ಬಲ್ಲವನಾಗಿರುವ ಪವಿತ್ರಾತ್ಮನು, ಕೆಲವು ಸಾಧನಗಳ ಮೂಲಕ ಅದನ್ನು ಈ ಪತ್ರಿಕೆಯ ಬರಹಗಾರನಿಗೆ ತಿಳಿಸಿದ್ದಾನೆ. **22**

**12:22** *“ನೀವು ಚಿಯೋನ್ ಪರ್ವತಕ್ಕೆ ಬಂದಿದ್ದೀರಿ”*– ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದು ಮತ್ತು ಯೇಸು ಕ್ರಿಸ್ತನು ಸ್ಥಾಪಿಸಿರುವ ಹೊಸ ಒಡಂಬಡಿಕೆಯ ಪ್ರಕಾರ ನಡೆದುಕೊಳ್ಳುವದರಿಂದ ದೊರೆಯುವ ಕೆಲವು ಆಶೀರ್ವಾದದಾಯಕ ಸತ್ಯಗಳನ್ನು ಬರಹಗಾರನು ಇಲ್ಲಿ ತೋರಿಸಿದ್ದಾನೆ. ಅವನು ಪರಲೋಕ ಪರ್ವತವಾಗಿರುವ ಚಿಯೋನ್ ಬಗ್ಗೆ ಮಾತನಾಡುತ್ತಾ ಇದ್ದಾನೆ, ಆತ್ಮೀಕ ವಾಸ್ತವಗಳ ಬಗ್ಗೆ ಮಾತನಾಡುವ ಭೂಲೋಕ ಪಟ್ಟಣವು ಈಗ ಕೇವಲ ಛಾಯೆಯಾಗಿದೆ.

*“ಪರಲೋಕದ ಯೆರೂಸಲೇಮ್”*– ಗಲಾ 4:26; ಪ್ರಕ 21:10. **23**

**12:23** *“ಚೊಚ್ಚಲಮಕ್ಕಳ ಸಭೆ”*– ಗ್ರೀಕ್ ಭಾಷೆಯಲ್ಲಿ ಇದು ಒಂದೇ ಪದವಾಗಿದೆ ಮತ್ತು ಸಾರ್ವತ್ರಿಕ ಸಮ್ಮೇಳನವನ್ನು ಸೂಚಿಸುತ್ತದೆ (ನಾಯಕರಿಗೆ ಮಾತ್ರವೇ ಸೀಮಿತವಾಗಿರುವ ಕೂಟವಲ್ಲ) ಅಥವಾ ಆರಾಧನೆ ಸೇರಿ ಬರುವದು ಅಥವಾ ಸಾರ್ವತ್ರಿಕ ಹಬ್ಬಕ್ಕೆ ಸೇರಿ ಬರುವದನ್ನು ಸೂಚಿಸುತ್ತದೆ.

*“ಚೊಚ್ಚಲು ಮಕ್ಕಳು”*– ಗ್ರೀಕ್ ಭಾಷೆಯಲ್ಲಿ ಈ ಪದವು ಬಹುವಚನದಲ್ಲಿದ್ದು “ಚೊಚ್ಚಲು ಮಕ್ಕಳನ್ನು” ಸೂಚಿಸುತ್ತದೆ. ಇವರು ಯಾರು? ಉತ್ತಮವಾದ ಉತ್ತರವೇನೆಂದರೆ: ವಿಶೇಷ ಚೊಚ್ಚಲನಾಗಿರುವವನಿಗೆ ನಂಬಿಕೆಯಿಂದ ಐಕ್ಯರಾಗಿರುವವರು – ರೋಮಾ 8:29; ಕೊಲೊ 1:15,18; ಪ್ರಕ 1:5 ನೋಡಿರಿ.

*“ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ”*– ಲೂಕ 10:20; ಪ್ರಕ 21:27.

*“ನ್ಯಾಯಾಧಿಪತಿ”*– ಕೀರ್ತನೆ 50:4-6; 96:13; ಯೆಶಾಯ 33:22; ಅಪೊ 17:31; ರೋಮಾ 2:16.

*“ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳು”*– ಈಗಾಗಲೇ ನಂಬಿಕೆಯುಳ್ಳವರಾಗಿ ಮೃತಪಟ್ಟಿರುವವರು, ಯೇಸು ಕ್ರಿಸ್ತನ ಯಜ್ಞದ ಮೂಲಕ ಸಿದ್ಧಿಗೆ ಬಂದಿದ್ದಾರೆ (ಇಬ್ರಿ 10:10,14) ಮತ್ತು ದೇವರ ಪ್ರಸನ್ನತೆಯಲ್ಲಿ ನಿರ್ದೋಷಿಗಳಾಗಿ ಮಾಡಲ್ಪಟ್ಟಿದ್ದಾರೆ. **24**

**12:24** *“ಮಧ್ಯಸ್ಥನಾಗಿರುವ ಯೇಸು ಕ್ರಿಸ್ತನು”*– 8:6; 9:15; 1 ತಿಮೊ 2:5. ಈತನ

ಮೂಲಕ, ಈತನ ಮೂಲಕ ಮಾತ್ರವೇ ನಾವು ಭೂಲೋಕದ ಪರಿಶುದ್ಧ ದೇವರನ್ನು ಸಂಧಿಸಲು ಸಾಧ್ಯ – 10:19-22.

*"ಹೊಸ ಒಡಂಬಡಿಕೆ"*– 8:8-13; ಮತ್ತಾಯ 26:26-28.

*"ಪ್ರೋಕ್ಷಣ ರಕ್ತ"*– 9:14; 10:22; 1 ಪೇತ್ರ 1:2.

*"ಹೇಬೆಲನು"*– ಆದಿ 4:10. ಹೇಬೆಲನ ರಕ್ತವು ಅದನ್ನು ಸುರಿಸಿದವನಿಗೆ ಶಿಕ್ಷೆಯಾಗಬೇಕು ಎಂದು ಕೂಗಿಕೊಂಡಿತು. ಯೇಸು ಕ್ರಿಸ್ತನ ರಕ್ತವು ವಿಮೋಚನೆ ಮತ್ತು ಕ್ಷಮಾಪಣೆಯ ಬಗ್ಗೆ ಮಾತನಾಡುತ್ತದೆ – ಎಫೆ 1:7. 18-24 ವಚನಗಳಲ್ಲಿ ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತ ಎಷ್ಟು ಉತ್ತಮವಾಗಿದೆ ಎಂಬದನ್ನು ಬರಹಗಾರನು ಹಲವಾರು ರೀತಿಗಳಲ್ಲಿ ತೋರಿಸಿದ್ದಾನೆ. ಹಳೆಯದು ಭಯ ಮತ್ತು ಶಿಕ್ಷೆಯ ಬಗ್ಗೆ ಮಾತನಾಡುತ್ತದೆ, ಹೊಸದು ಕರುಣೆ ಮತ್ತು ದೇವರನ್ನು ಸಮೀಪಿಸುವದು ಹಾಗೂ ನಿತ್ಯವಾದ ಆಶೀರ್ವಾದಗಳ ಬಗ್ಗೆ ಮಾತನಾಡುತ್ತದೆ. **25-29**

**12:25-29** ಈ ಪತ್ರಿಕೆಯಲ್ಲಿ ಮತಭ್ರಷ್ಟತೆಗೆ ವಿರುದ್ಧವಾದ ಕಡೆಯ ಎಚ್ಚರಿಕೆಯನ್ನು ಇಲ್ಲಿ ಕೊಡಲಾಗಿದೆ (2:1-; 3:7-19; 6:4-8; 10:26-31). ಇದು ದೇವರ ಹೊಸ ಒಡಂಬಡಿಕೆಯ ಪ್ರಕಟನೆಯನ್ನು ನಿರಾಕರಿಸುವದರ ವಿರುದ್ಧವಾಗಿದೆ. **25**

**12:25** ಮಾತನಾಡುತ್ತಿರುವವನು ದೇವರಾಗಿದ್ದಾನೆ (1:1-2).

*"ಆದರೆ"*– 6:6; 10:26 ನೋಡಿರಿ.

*"ಭೂಮಿ"*– ದೇವರು ಸೀನಾಯ್ ಬೆಟ್ಟದಲ್ಲಿ ಮೋಶೆಯ ಮೂಲಕ ಮಾತನಾಡಿದನು.

*"ಪರಲೋಕ"*– ದೇವರು ತನ್ನ ಸ್ವಂತ ಮಗನ ಮೂಲಕ ಮಾತನಾಡುವದು ಪರಲೋಕದಿಂದಲೇ ನೇರವಾಗಿ ಮಾತನಾಡುವಂತಿತ್ತು (ಯೋಹಾನ 1:18; 8:23; 12:49-50). ಮೋಶೆಯ ಮೂಲಕ ಬಂದ ದೇವರ ಮಾತುಗಳನ್ನು ನಿರಾಕರಿಸಿದವರು ತಪ್ಪಿಸಿಕೊಳ್ಳಲಿಲ್ಲ. ಹಾಗೆಯೇ ಯೇಸು ಕ್ರಿಸ್ತನ ವಾಕ್ಯಗಳನ್ನು ನಿರಾಕರಿಸುವವರು ಸಹ ತಪ್ಪಿಸಿಕೊಳ್ಳಲು ಆಗುವದಿಲ್ಲ (2:3; 10:28-29; ಯೋಹಾನ 12:48). **26**

**12:26** *"ಭೂಮಿಯನ್ನು ಕದಲಿಸಿತು"*– ವಿಮೋ 19:18.

*"ಪರಲೋಕ"*– ಹಗ್ಗಾ 2:6. **27**

**12:27** 1:10-12; ಪ್ರಕ 6:12-14; 21:1 ನೋಡಿರಿ. ಭವಿಷ್ಯದಲ್ಲಿ ಬೌತಿಕ ಸೃಷ್ಟಿಯು ಗತಿಸಿ ಹೋಗುವದು, ಆದರೆ ದೇವರ ರಾಜ್ಯ, ಹೊಸ ಒಡಂಬಡಿಕೆಯ ಮೂಲಕ ಸಿದ್ಧಿಗೆ ಬಂದಿರುವಂಥದ್ದು, 22-24 ವಚನಗಳಲ್ಲಿ ತಿಳಿಸಲಾಗಿರುವಂಥ ಕಾರ್ಯಗಳು, ಎಂದಿಗೂ ಕದಲುವದಿಲ್ಲ. **28**

**12:28** *"ರಾಜ್ಯ"*– ಮತ್ತಾಯ 4:17; ರೋಮಾ 14:17 ರ ನೋಟ್ಸ್ ನೋಡಿರಿ.

*"ಭಯಭಕ್ತಿ"*– ಆದಿ 20:11; ಯೋಬ 28:28; ಕೀರ್ತನೆ 34:11-14; 90:11; 111:10;

ಜ್ಞಾನೋ 1:7. ಭಯಭಕ್ತಿ ಮತ್ತು ದೈವೀಕ ಭಯ ಇಲ್ಲದೆ ಹೋದರೆ ದೇವರಿಗೆ ಮೆಚ್ಚಿಕೆಯಾದ ಜ್ಞಾನ ಇರುವದಿಲ್ಲ, ಆತನನ್ನು ಆರಾಧಿಸಲು ಆಗುವದೂ ಇಲ್ಲ. **29**

**12:29** *"ಅಗ್ನಿ"* – ವಿಮೋ 3:2 ನೋಟ್ಸ್ ನೋಡಿರಿ. "ದಹಿಸುವ ಅಗ್ನಿ"ದಹಿಸುವ ಪರಿಶುದ್ಧತೆಗೆ ವಿರುದ್ಧವಾಗಿರುವ ಎಲ್ಲವುಗಳನ್ನು ನಾಶಮಾಡುತ್ತದೆ ಎಂದು ಸೂಚಿಸುತ್ತದೆ. ಅವಿಶ್ವಾಸಿಗಳು, ದೇವರನ್ನು ಮತ್ತು ಆತನ ಸ್ವರವನ್ನು ನಿರಾಕರಿಸುವವರಿಗಾಗುವ ನ್ಯಾಯತೀರ್ಪು, ನಿಜವಾಗಿಯು ಘೋರವಾಗಿರುವದು. 2 ಥೆಸ 1:7-8 ರೊಂದಿಗೆ ಹೋಲಿಸಿ ನೋಡಿರಿ.

# 13 1

**13:1** ಯೋಹಾನ 13:34; ರೋಮಾ 12:10; 13:8. **2**

**13:2** ರೋಮಾ 12:13; 1 ಪೇತ್ರ 4:9; 3 ಯೋಹಾನ 5-8.

*"ದೇವದೂತರು"*– ಆದಿ 18:2,22; 19:1-3. ದೇವದೂತರು ಕೆಲವೊಮ್ಮೆ ಮಾನವ ರೂಪದಲ್ಲಿ ಕಾಣಿಸಿಕೊಳ್ಳುತ್ತಾರೆ. ನಾವು ಅಪರಿಚಿತರಿಗೆ ಅತಿಥಿ ಸತ್ಕಾರ ಮಾಡುವವರಾದರೆ ನಮ್ಮ ಮನೆಗೂ ಅವರು ಬರುವ ಸಾಧ್ಯತೆಯಿದೆ. **3**

**13:3** ಲೂಕ 6:31; ರೋಮಾ 12:15; ಮತ್ತಾಯ 25:34-40. ನಾವು ನಮ್ಮನ್ನೇ ಇತರರ ಸ್ಥಾನದಲ್ಲಿ ಇರಿಸಿಕೊಳ್ಳಲು ಮತ್ತು ಅವರಿಗೆ ಕರುಣೆ ತೋರಲು ಪ್ರೀತಿ ನಮ್ಮನ್ನು ಬಲಪಡಿಸುತ್ತದೆ. **4**

**13:4** *"ಮಾನ್ಯವೆಂದು"*– ಕ್ರೈಸ್ತರು ಮದುವೆಯನ್ನು ಮಾನ್ಯವೆಂದು ಎಣಿಸಬೇಕು ಯಾಕಂದರೆ ದೇವರೇ ಅದನ್ನು ಪ್ರತಿಷ್ಠಿಸಿದ್ದಾನೆ (ಮತ್ತಾಯ 19:4-6).

*"ಜಾರರಿಗೆ ದೇವರು ನ್ಯಾಯತೀರಿಸುತ್ತಾನೆ"*– ಪ್ರಕ 21:8; ಕೊಲೊ 3:5-6; ಎಫೆ 5:3-6; 1 ಕೊರಿಂಥ 6:9-10. **5**

**13:5** *"ದ್ರವ್ಯಾಶೆಯಿಲ್ಲದವರಾಗಿರಿ"*– ಇದುವೇ ಇಲ್ಲಿ ಕೊಡಲಾಗಿರುವ ಗ್ರೀಕ್ ಪದಗಳ ಅರ್ಥವಾಗಿದೆ ಮತ್ತು ಇದು ಅತ್ಯಂತ ಪ್ರಾಮುಖ್ಯವಾದ ಬುದ್ಧಿಮಾತಾಗಿದೆ. ಹಣದಾಸೆಯು ನಾಶವನ್ನುಂಟು ಮಾಡುತ್ತದೆ. 1 ತಿಮೊ 6:9-10; ಮತ್ತಾಯ 6:19-20,24; ಲೂಕ 12:15-21; 16:14; ಯೋಹಾನ 12:4-6 ನೋಡಿರಿ.

*"ತೃಪ್ತರಾಗಿರಿ"*– ಲೂಕ 3:14; ಫಿಲಿಪ್ಪಿ 4:12; 1 ತಿಮೊ 6:6-8.

*"ನಾನು ನಿಮ್ಮನ್ನು ಎಂದಿಗೂ ತೊರೆಯುವದಿಲ್ಲ"*– ಧರ್ಮೋ 31:6; ಮತ್ತಾಯ 28:20; ಯೋಹಾನ 14:16. ಈ ಲೋಕದ ಎಲ್ಲಾ ಐಶ್ವರ್ಯಗಳಿಗಿಂತಲೂ ದೇವರ ಪ್ರಸನ್ನತೆ ನಮ್ಮೊಂದಿಗಿರುವದು ಉತ್ತಮವಾಗಿದೆ. ಒಂದುವೇಳೆ ಆತನು ನಮ್ಮ ಜೊತೆಯಲ್ಲಿದ್ದರೆ ನಮ್ಮ ಅವಶ್ಯಕತೆಗಳನ್ನೆಲ್ಲಾ ಆತನೇ ಪೂರೈಸುತ್ತಾನೆ (ಮತ್ತಾಯ 6:25-34; ಫಿಲಿಪ್ಪಿ 4:19)

ಮತ್ತು ಆತನ ಪ್ರಸನ್ನತೆ ನಮ್ಮಲ್ಲಿರುವದಾದರೆ ಎಲ್ಲಾ ಪರಿಸ್ಥಿತಿಗಳಲ್ಲಿಯೂ ತೃಪ್ತರಾಗಿರುವದನ್ನು ನಾವು ಕಲಿತುಕೊಳ್ಳುತ್ತೇವೆ. ಆದರೆ ವಿಶ್ವಾಸಿಗಳು ಪಾಪ ಮಾಡುವಾಗ ದೇವರು ಅವರನ್ನು ತೊರೆಯುವದಿಲ್ಲವೇ? ನಾನು ನಿಮ್ಮನ್ನು ಎಂದಿಗೂ ತೊರೆಯುವದಿಲ್ಲ ಎಂದು ಆತನು ಹೇಳಿರುವದರಿಂದ, ಆತನು ಎಂದಿಗೂ ತೊರೆಯುವದಿಲ್ಲ. ಇದರ ಅರ್ಥ ಅವರು ಅವರಿಗೆ ಪಾಪ ಮಾಡುವ ಸ್ವಾತಂತ್ರ್ಯವಿದೆ ಎಂಬದಲ್ಲ. ಬದಲಾಗಿ, ಅವರಿಗೆ ಪರಿಶುದ್ಧರಾಗಿರುವ ಸ್ವಾತಂತ್ರ್ಯವನ್ನು ಕೊಡಲಾಗಿದೆ (ರೋಮಾ 6:1-2; 15:18). ಆದರೆ ವಿಶ್ವಾಸಿಗಳು ಆತನನ್ನು ತೊರೆಯುವ ಸಾಧ್ಯತೆಯಿದೆಯೇ? ಅವರಿಗೆ ಅದು ಬೇಡ, ಅವರು ಅದನ್ನು ಮಾಡುವದೂ ಇಲ್ಲ (10:39; ಯೋಹಾನ 10:27. ಆದರೂ ವಿಶ್ವಾಸಿಗಳಲ್ಲದವರು, ತಮ್ಮನ್ನು ವಿಶ್ವಾಸಿಗಳೆಂದು ಹೇಳಿಕೊಂಡು, ಹೀಗೆ ಮಾಡಲು ಬಯಸುತ್ತಾರೆ). ಒಂದುವೇಳೆ ನಿಜವಾದ ವಿಶ್ವಾಸಿಗಳು ಈ ಕಾರ್ಯವನ್ನು ಮಾಡಲು ಪ್ರಯತ್ನಿಸಿದರೂ, ಅದು ಬಹಳ ಕಷ್ಟವಾಗಿರುತ್ತದೆ (ಕೀರ್ತನೆ 139:7-12 ನೋಡಿರಿ). **6**

**13:6** ಕೀರ್ತನೆ 118:6-7; ರೋಮಾ 8:31; ಮತ್ತಾಯ 10:28-31; ಕೀರ್ತನೆ 27:1-3. ಮಾನವರು ಈಗಾಗಲೇ ಅವರಿಗೆ ವಿರುದ್ಧವಾಗಿ ಬಹಳಷ್ಟು ಕಾರ್ಯಗಳನ್ನು ಮಾಡಿದ್ದಾರೆ (10:32-34), ಆದರೆ ಅವರ ಜೀವಿತಗಳಲ್ಲಿ ಮಾನವರ ಭಯಕ್ಕೆ ಅವಕಾಶವೇ ಇಲ್ಲ. ಮಾನವರು ಮಾಡುವದೆಲ್ಲವೂ ತಾತ್ಕಾಲಿಕವಾಗಿದೆ. ಒಂದುವೇಳೆ ದೇವರು ಅವರ ಜೊತೆಯಿರುವದಾದರೆ ಅವರಿಗೆ ಆಶೀರ್ವಾದಕರವಾದ ನಿತ್ಯತ್ವವು ದೊರೆಯುತ್ತದೆ. 2 ಕೊರಿಂಥ 4:17-18 ರೊಂದಿಗೆ ಹೋಲಿಸಿ ನೋಡಿರಿ. **7**

**13:7** *"ನಾಯಕರು"*– ಆತನು ತಮಗೆ ಮೊದಲು ಸುವಾರ್ತೆ ಸಾರಿದವರನ್ನು ಬಹುಶಃ ಸೂಚಿಸುತ್ತಾ ಇದ್ದಾನೆ ಅನ್ನಿಸುತ್ತದೆ.

*"ಅನುಸರಣೆ"*– 1 ಕೊರಿಂಥ 4:16; 11:1; ಫಿಲಿಪ್ಪಿ 3:17; 1 ಥೆಸ 1:6; 2 ಥೆಸ 3:7,9. **8**

**13:8** ಮಾನವ ನಾಯಕರು ಬದುಕುತ್ತಾರೆ ಮತ್ತು ಸಾಯುತ್ತಾರೆ, ಬರುತ್ತಾರೆ ಮತ್ತು ಹೋಗುತ್ತಾರೆ. ಯೇಸು ಕ್ರಿಸ್ತನು ಮಾತ್ರ ಏಕರೀತಿಯಾಗಿರುತ್ತಾನೆ (1:12) ಮತ್ತು ಆತನು ತನ್ನ ಜನರಿಗಾಗಿ ಮಹಾಯಾಜಕನಾಗಿ ಮಾಡುವ ಸೇವೆಯೂ ಹಾಗೆಯೇ ಇರುತ್ತದೆ (7:24-25). ಇಲ್ಲಿ ಮುಖ್ಯ ವಿಷಯ ಏನೆಂದರೆ ಆತನ ಸ್ವಭಾವದಲ್ಲಿ ಅಥವಾ ಜನರ ಮೇಲೆ ಆತನಿಗಿರುವ ಪ್ರೀತಿಯಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ. ಆತನು ಗತಿಸಿರುವ ನಿತ್ಯತ್ವದಲ್ಲಿ, ಹಳೆ ಒಡಂಬಡಿಕೆಯ ದಿನಗಳಲ್ಲಿ ಮತ್ತು ಭೂಲೋಕದಲ್ಲಿದ್ದಾಗ ಆತನು ಹೇಗೆ ಹೇಗಿದನೋ ಶಾಶ್ವತವಾಗಿ ಹಾಗೆಯೇ ಇರುವನು. ಇದರ ಅರ್ಥ ಅಪೊಸ್ತಲರು ಅಭ್ಯಾಸಿಸಿದ ಎಲ್ಲಾ ವರಗಳನ್ನು ಮತ್ತು ಸೂಚನೆಗಳನ್ನು ಅಭ್ಯಾಸಿಸಲು ವಿಶ್ವಾಸಿಗಳನ್ನು ಬಲಪಡಿಸುತ್ತಾನೆ ಎಂಬದಲ್ಲ (ಹಳೆ ಒಡಂಬಡಿಕೆಯ ವಿಶ್ವಾಸಿಗಳು ಇವುಗಳನ್ನು ಮಾಡಲಿಲ್ಲ ಮತ್ತು ಯೇಸು ಕ್ರಿಸ್ತನು ಆಗ ಏಕ ರೀತಿಯಾಗಿದ್ದನು, ಮತ್ತು ನಿತ್ಯವಾದ ಯುಗಗಳಲ್ಲಿರುವ ವಿಶ್ವಾಸಿಗಳು

ಹಾಗೆ ಮಾಡುವದಿಲ್ಲ – 1 ಕೊರಿಂಥ 13:8-10 ನೋಡಿರಿ – ಯೇಸು ಕ್ರಿಸ್ತನು ಆಗಲೂ ಹಾಗೆಯೇ ಇರುವನು). ಹಿಂದೆ ವಿಶೇಷ ಸಮಯಗಳಲ್ಲಿ ಆತನು ತನ್ನನ್ನು ವಿಶೇಷ ರೀತಿಯಲ್ಲಿ ಪ್ರಕಟಿಸಿಕೊಂಡನು ಮತ್ತು ವಿವಿಧ ಯುಗಗಳಲ್ಲಿ ತನ್ನ ದೈವೀಕತೆಯ ವಿವಿಧ ಕಾರ್ಯಗಳನ್ನು ವ್ಯಕ್ತಪಡಿಸಿದ್ದಾನೆ ಆದರೆ ತನ್ನ ಸ್ವಭಾವ ಹಾಗೂ ಗುಣಗಳಲ್ಲಿ ಯೇಸು ಕ್ರಿಸ್ತನು ಯಾವಾಗಲೂ ಇರುವ ಹಾಗೆಯೇ ಶಾಶ್ವತವಾಗಿರುವನು. ಇದುವೇ ಇಲ್ಲಿನ ವಿಷಯವಾಗಿದೆ. **9**

**13:9** *"ನಾನಾವಿಧವಾದ ಅನ್ಯೋಪದೇಶಗಳು"*– ಎಫೆ 4:14; ರೋಮಾ 16:17; ಅಪೊ 20:20; ಮತ್ತಾಯ 7:15. ಸಂಸ್ಕಾರಬದ್ಧ ಆಹಾರದ ಆತ್ಮೀಕ ಮೌಲ್ಯಗಳ ಕುರಿತಾದ ಯೆಹೂದ್ಯರ ಕೆಲವು ಬೋಧನೆಗಳ ಬಗ್ಗೆ ಬರಹಗಾರನು ಕೆಲವು ವಿಷಯಗಳನ್ನು ಹೊಂದಿದ್ದನು (ರೋಮಾ 14:2,14,21; 1 ಕೊರಿಂಥ 8:8; ಕೊಲೊ 2:8,16-23 ರೊಂದಿಗೆ ಹೋಲಿಸಿ ನೋಡಿರಿ. ಯಾಜಕ 11:2-23 ರ ನೋಟ್ಸ್ ನೋಡಿರಿ). ದೇವರ ಕೃಪೆ ಆತ್ಮೀಕ ಜೀವಿತವನ್ನು ಪೋಷಿಸುತ್ತದೆಯೇ ಹೊರತು ಶಾರೀರಿಕ ಕಾರ್ಯಗಳನ್ನಲ್ಲ. **10**

**13:10** *"ಯಜ್ಞವೇದಿ"*– ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ಕಣ್ಣಿಗೆ ಕಾಣಿಸುವ, ಬೌತಿಕ ಯಜ್ಞವೇದಿ ಇಲ್ಲ. ಬರಹಗಾರನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಅರ್ಪಿಸಿದ ಯಜ್ಞದ ಬಗ್ಗೆ ಮಾತನಾಡುತ್ತಾ ಇದ್ದಾನೆ. ನಂಬಿಕೆಯಿಂದ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವವರು ಆತ್ಮೀಕ ಆಹಾರವನ್ನು ಪಡೆಯುತ್ತಾರೆಯೇ ಹೊರತು ಸಂಪ್ರದಾಯಬದ್ಧ ಆಹಾರವನ್ನಲ್ಲ (ಯೋಹಾನ 6:53-58,63 ನೋಡಿರಿ). ಮತ್ತು ಹಳೆಯ ಯೆಹೂದ್ಯರ ಪದ್ಧತಿಯನ್ನು ಆಚರಿಸುವವರು ಮತ್ತು ಯೇಸು ಕ್ರಿಸ್ತನನ್ನು ಹಾಗೂ ಹೊಸ ಒಡಂಬಡಿಕೆಯನ್ನು ನಿರಾಕರಿಸುವವರಿಗೆ ಈ "ಯಜ್ಞವೇದಿಯಲ್ಲಿ"ಪಾಲು ಇಲ್ಲ. **11**

**13:11** ಆತನು ಮಹಾದೋಷಪರಿಹಾರಕ ದಿನವನ್ನು ಸೂಚಿಸುತ್ತಾ ಇದ್ದಾನೆ – 9:7. ಯಾಜಕ 16:27 ನೋಡಿರಿ. ಆ ದಿನದಲ್ಲಿ ಯಜ್ಞವಾಗಿ ಅರ್ಪಿಸುವ ಪ್ರಾಣಿಗಳ ಮಾಂಸವನ್ನು ಯಾರೂ ತಿನ್ನುವದಿಲ್ಲ. ಇದಲ್ಲದೆ ನಮಗಾಗಿ ತನ್ನನ್ನೇ ಯಜ್ಞವಾಗಿ ಅರ್ಪಿಸಿಕೊಂಡ ಯೇಸು ಕ್ರಿಸ್ತನ ಮಾಂಸವನ್ನೂ ಯಾರೂ ತಿನ್ನುವದಿಲ್ಲ. ಇದರ ಬಗ್ಗೆ ಯೋಚಿಸಲೂ ಆಗುವದಿಲ್ಲ. **12**

**13:12** *"ಪವಿತ್ರಪಡಿಸುವದು"*– "ಪರಿಶುದ್ಧರನ್ನಾಗಿ ಮಾಡುವದು" ಅಥವಾ "ಬೇರ್ಪಡಿಸುವದು" ಅಥವಾ "ಪ್ರತಿಷ್ಠಿಸುವದು"– 10:10. ಯೇಸು ಕ್ರಿಸ್ತನ ರಕ್ತವು ವಿಶ್ವಾಸಿಗಳಿಗಾಗಿ ಇದನ್ನೇ ಮಾಡುತ್ತದೆ.

*"ಪಟ್ಟಣದ ಹೊರಗೆ"*– ಶಿಲುಬೆಯ ಸ್ಥಳ (ಗೊಲ್ಗೊಥಾ ಅಥವಾ ಕಲ್ವಾರಿ) ಯೆರೂಸಲೇಮ್ ಪಟ್ಟಣದ ಹೊರಗೆ ಇತ್ತು (ಮತ್ತಾಯ 27:32-33). **13**

**13:13** *"ಪಾಳೆಯದ ಆಚೆ"*– ಯೆಹೂದ್ಯ ಧರ್ಮದ ಪಾಳೆಯದ ಆಚೆ, ಹಳೆ ಒಡಂಬಡಿಕೆಯ ಪದ್ಧತಿಯ ಹೊರಗೆ ಎಂಬದು ಆತನ ಮಾತಿನ ಅರ್ಥವಾಗಿದೆ.

*“ನಿಂದೆ”* – *ಅಥವಾ “ಅವಕೃಪೆ”*– 12:2. ಅಪರಾಧ ಸಾಬೀತಾಗುವ ಖೈದಿಗಳನ್ನು ಶಿಲುಬೆಗೆ ಹಾಕುತ್ತಾ ಇದ್ದರು. ನಮ್ಮ ಸ್ಥಳದಲ್ಲಿ ನಮಗಾಗಿ ಪ್ರಾಣ ನೀಡಿದ ಯೇಸು ಕ್ರಿಸ್ತನನ್ನು ನಾವು ಅಂಗೀಕರಿಸಿಕೊಂಡರೆ, ಪಾಪಿಗಳಾದ ನಾವು ಮರಣಕ್ಕೆ ಅರ್ಹರಾಗಿದ್ದೇವೆ ಎಂಬದನ್ನು ಒಪ್ಪಿಕೊಳ್ಳುವವರಾಗಿದ್ದೇವೆ. ವಿಶ್ವಾಸಿಗಳು ಶಿಲುಬೆಗೇರಿಸಲ್ಪಟ್ಟ ರಕ್ಷಕನ ಶಿಲುಬೆಗೇರಿಸಲ್ಪಟ್ಟ ವಿಶ್ವಾಸಿಗಳಾಗಿದ್ದಾರೆ (ಗಲಾ 6:14) ಮತ್ತು ಇದನ್ನು ಹೇಳಿಕೊಳ್ಳಲು ನಾಚಿಕೆಪಡಬಾರದು. **14**

**13:14** *“ಪಟ್ಟಣ”*– 11:10,16; 12:22. **15-16**

**13:15-16** ಹಳೆಯ ಒಡಂಬಡಿಕೆಯಲ್ಲಿ ಯಜ್ಞಗಳನ್ನು ಅರ್ಪಿಸುತ್ತಿದ್ದ ಯಾಜಕರಿದ್ದರು. ಇಲ್ಲಿ ಬರಹಗಾರನು ಹೇಳುವದೇನೆಂದರೆ ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳೆಲ್ಲರೂ ಹೊಸ ಒಡಂಬಡಿಕೆಯ ಯಾಜಕರಾಗಿದ್ದಾರೆ. 1 ಪೇತ್ರ 2:5,9; ಪ್ರಕ 1:6 ನೋಡಿರಿ. ಅವರು ಪ್ರಾಣಿಗಳನ್ನು, ಬೌತಿಕ ಕಾರ್ಯಗಳನ್ನು, ಬೌತಿಕ ಯಜ್ಞವೇದಿಯ ಮೇಲೆ ಅರ್ಪಿಸುತ್ತಾ ಇರಲಿಲ್ಲ ಬದಲಾಗಿ ಇನ್ನೂ ಉತ್ತಮವಾಗಿರುವದನ್ನು ಅರ್ಪಿಸುತ್ತಾ ಇದ್ದರು. **15**

**13:15** *“ಸ್ತುತಿ”*– ಕೀರ್ತನೆ 33:1-3 ರ ನೋಟ್ಸ್ ಮತ್ತು ರೆಫರೆನ್ಸ್ ನೋಡಿರಿ. **16**

**13:16** *“ಪರೋಪಕಾರ”*– ಹೊಸ ಒಡಂಬಡಿಕೆಯ ಯಾಜಕರಾಗಿ ವಿಶ್ವಾಸಿಗಳ ಸೇವೆಯ ಅತ್ಯಂತ ಪ್ರಾಮುಖ್ಯವಾದ ಭಾಗವಾಗಿದೆ. ಮತ್ತಾಯ 5:16; 25:34-40; ಲೂಕ 6:27,35; ರೋಮಾ 12:21; 2 ಕೊರಿಂಥ 9:8; ಗಲಾ 6:10; ಕೊಲೊ 1:10; 2 ಥೆಸ 2:17; ಯಾಕೋಬ 1:27; 1 ಪೇತ್ರ 2:12 ನೋಡಿರಿ.

*“ಧರ್ಮಮಾಡುವದು”*– ಮತ್ತಾಯ 5:42; ರೋಮಾ 12:13; ಗಲಾ 6:6; 1 ತಿಮೊ 6:18; 1 ಯೋಹಾನ 3:17. ದೇವರು ಇಂಥ ಯಜ್ಞಗಳನ್ನು ಮೆಚ್ಚುತ್ತಾನೆ. 10:6 ರೊಂದಿಗೆ ಹೋಲಿಸಿ ನೋಡಿರಿ. ದೇವರಿಗೆ ಮೆಚ್ಚಿಕೆಯಾಗುವ ಇನ್ನೂ ಕೆಲವು ಯಜ್ಞಗಳಿಗಾಗಿ ರೋಮಾ 12:1 ನೋಡಿರಿ. **17**

**13:17** *“ನಾಯಕರು”*– ಸಭೆಗಳಲ್ಲಿ ನಾಯಕರಿರಬೇಕು ಮತ್ತು ನಾಯಕರಿಗೆ ಕೆಲವು ಅಧಿಕಾರಗಳಿರಬೇಕು. ಅವರ ನೇಮಿಸುವ ದೇವರೇ ಅವರಿಗೆ ಅಧಿಕಾರವನ್ನು ಕೊಡುತ್ತಾನೆ. ಈ ಇಬ್ರಿಯ ಕ್ರೈಸ್ತರ ಈ ನಾಯಕರು ಉತ್ತಮರಾಗಿದ್ದರು ಎಂಬದನ್ನು ಬರಹಗಾರನು ತಿಳಿದುಕೊಂಡಿದ್ದನು. ನಾಯಕರೆಲ್ಲರೂ ಒಳ್ಳೆಯವರಾಗಿರುವದಿಲ್ಲ ಮತ್ತು ದೇವರು ಪ್ರಕಟಿಸುವ ಸತ್ಯಗಳ ಪ್ರಕಾರ ನಡೆಯದೆ ಇರುವವರೆಲ್ಲರಿಗೂ ಯಾರೂ ವಿಧೇಯರಾಗಬಾರದು (ಅಪೊ 4:19; 5:29 ರೊಂದಿಗೆ ಹೋಲಿಸಿ ನೋಡಿರಿ) ಅಥವಾ ಹೊಸ ಒಡಂಬಡಿಕೆಯ ಬೋಧನೆಗನುಸಾರ ಜೀವಿಸದಿರುವವರ ಆಜ್ಞೆಗಳನ್ನು ಯಾರೂ ಪಾಲಿಸಬಾರದು. ಒಳ್ಳೆಯ ಸಭಾ ನಾಯಕರು ತಮ್ಮ ಸಭಿಕರನ್ನು “ಕಾಯುವವರಾಗಿರುತ್ತಾರೆ”– ಅಪೊ 20:28; 1 ಪೇತ್ರ 5:1-4.

*“ಲೆಕ್ಕ ಒಪ್ಪಿಸಬೇಕು”*– ಸಭೆಯ ನಾಯಕರು ತಮ್ಮ ಜೀವಿತಗಳಿಗಾಗಿ ಮಾತ್ರವಲ್ಲ ಬದಲಾಗಿ ತಾವು ನಾಯಕರಾಗಿರುವ ದೇವಜನರ ಜೀವಿತಗಳಿಗೂ ಲೆಕ್ಕ ಒಪ್ಪಿಸಬೇಕು. **18**

**13:18** *“ಒಳ್ಳೇ ಮನಸಾಕ್ಷಿ”*– 2 ಕೊರಿಂಥ 1:12; 4:2. **19**

**13:19** ರೋಮಾ 15:30-32; ಫಿಲೆ 22 ರೊಂದಿಗೆ ಹೋಲಿಸಿ ನೋಡಿರಿ. **20**

**13:20** *“ಶಾಂತಿದಾಯಕನಾದ ದೇವರು”*– 7:2; ರೋಮಾ 15:33; 16:20; 2 ಥೆಸ 3:16.

*“ಮತ್ತೊಮ್ಮೆ”*– ಇದರ ಅರ್ಥ ಮತ್ತೆ ಜೀವಕ್ಕೆ ಬರುವದು.

*“ಸತ್ತವರೊಳಗಿಂದ”*– ಮತ್ತಾಯ 28:6. ಇದೊಂದು ಸ್ಥಳದಲ್ಲಿ ಮಾತ್ರವೇ ಬರಹಗಾರನು ಯೇಸು ಕ್ರಿಸ್ತನ ಪುನರುತ್ಥಾನದ ಬಗ್ಗೆ ಹೇಳಿದ್ದಾನೆ. ಆದರೆ ಹಲವು ಸಲ ಇದರ ಸೂಚನೆಯನ್ನು ಕೊಟ್ಟಿದ್ದಾನೆ – 1:3; 2:9; 10:12-13.

*“ಶಾಶ್ವತವಾದ ಒಡಂಬಡಿಕೆಯ ರಕ್ತ”*– 9:12; 10:29; ಮತ್ತಾಯ 26:28. ಇಲ್ಲಿ ಹೊಸ ಒಡಂಬಡಿಕೆಯನ್ನು “ಶಾಶ್ವತವಾದದ್ದೆಂದು” ಕರೆಯಲಾಗಿದೆ. ಇದರ ಸ್ಥಾನದಲ್ಲಿ ಬೇರೊಂದನ್ನು ತರುವ ಅವಶ್ಯಕತೆಯಿಲ್ಲ. ದೇವರು ತನ್ನ ಜನರಿಗಾಗಿ ಉದ್ದೇಶಿಸಿರುವದನ್ನು ಇದು ಶಾಶ್ವತವಾಗಿ ನೆರವೇರಿಸುತ್ತದೆ. **21**

**13:21** ದೇವರು ಪ್ರತಿಯೊಬ್ಬ ವಿಶ್ವಾಸಿಗೆ ಇದನ್ನೇ ಮಾಡುತ್ತಾನೆ ಮತ್ತು ಯಾವ ವಿಶ್ವಾಸಿಯೂ ತನಗಾಗಿ ಇದನ್ನು ಮಾಡಿಕೊಳ್ಳಲು ಆಗುವದಿಲ್ಲ. ಒಂದುವೇಳೆ ದೇವರು ನಮ್ಮನ್ನು ಅಭಿವೃದ್ಧಿಪಡಿಸಲಿಲ್ಲವೆಂದರೆ ನಾವು ಎಂದಿಗೂ ಅಭಿವೃದ್ಧಿಯಾಗುವದಿಲ್ಲ ಮತ್ತು ಒಂದುವೇಳೆ ಆತನು ನಮ್ಮಲ್ಲಿ ಕಾರ್ಯಮಾಡಿಲ್ಲವೆಂದರೆ, ನಮ್ಮ ಚಟುವಟಿಕೆಗಳು ಆತನಿಗೆ ಎಂದಿಗೂ ಮೆಚ್ಚಿಕೆಯಾಗಿರುವದಿಲ್ಲ. 2 ಕೊರಿಂಥ 3:5; ಫಿಲಿಪ್ಪಿ 2:13; ಕೊಲೊ 1:29 ರೊಂದಿಗೆ ಹೋಲಿಸಿ ನೋಡಿರಿ. ಪ್ರತಿಯೊಬ್ಬ ವಿಶ್ವಾಸಿಯ ಗುರಿಯು ಕರ್ತನಾದ ಯೇಸು ಕ್ರಿಸ್ತನ ಗುರಿಯೇ ಆಗಿರಬೇಕು (ಮತ್ತಾಯ 26:39; ಯೋಹಾನ 4:34; 6:38; 8:29) – ದೇವರ ಚಿತ್ತ – ಹೆಚ್ಚು ಕಡಿಮೆ ಏನೂ ಇಲ್ಲ. ದೇವರು ಯೇಸು ಕ್ರಿಸ್ತನ ಮೂಲಕ ಇದನ್ನು ವಿಶ್ವಾಸಿಗಳಲ್ಲಿ ಮಾಡುತ್ತಾನೆ. ಆತನು ದೇವರ ಕೃಪೆ ಹಾಗೂ ಶಕ್ತಿಯ ಒಂದು ಸಾಧನವಾಗಿದ್ದಾನೆ. **22**

**13:22** *“ಎಚ್ಚರಿಕೆಯ ಮಾತು”*– ಬರಹಗಾರನು ವ್ಯಕ್ತಪಡಿಸಿರುವ ಸೈದ್ಧಾಂತಿಕ ಸತ್ಯಗಳು ಸತತವಾದ ಎಚ್ಚರಿಕೆಗಳಿಂದ ಕೂಡಿದ್ದವು. ಆತನು ಸಾಮಾನ್ಯವಾಗಿ ಹೇಳುವದೇನೆಂದರೆ “ಆದದರಿಂದ” ಮತ್ತು “ನಾವೆಲ್ಲರೂ”– ವ 13,15; 2:1; 4:1,11,14,16; 6:1; 10:19,22,23,24; 12:1,28. ಆತನು ಪ್ರಾಯೋಗಿಕ ಕಾರಣದಿಂದಲೇ ಇದನ್ನು ಬರೆದಿದ್ದಾನೆ ಮತ್ತು ಅವರು ಇದನ್ನು ಅಭ್ಯಾಸ ಮಾಡಲು ಹಾಗೂ ಆತ್ಮೀಕ ಜೀವಿತಗಳನ್ನು ಹೊಂದಲು ಆಳವಾದ ಸತ್ಯಗಳನ್ನು ತಿಳಿಸಿದ್ದಾನೆ. **23**

**13:23** *“ತಿಮೊಥೆಯನು”*– ಅಪೊ 16:1. ಖಂಡಿತವಾಗಿ ಅವನೂ ಸೆರೆಮನೆಯಲ್ಲಿದ್ದನು.

**25**

**13:25** ''ಕೃಪೆ''– ಯೋಹಾನ 1:14,16; ರೋಮಾ 1:7; 2 ಕೊರಿಂಥ 8:9 ರ ನೋಟ್ಸ್ ನೋಡಿರಿ.